# ಕೆಂಧೂಳಿ

ಹೊಸ ಸವಾಲುಗಳ ಕನಸು

ಪ್ರಧಾನ ಸಂಪಾದಕ: ತುರುವನೂರು ಮಂಜುನಾಥ

**KENDHOOLI** *Kannada Weekly*

*kendhooli.com/e-paper/*

**ರಾಮಮಂದಿರದ ಸುತ್ತ ರಿಯಲ್ ಎಸ್ಟೇಟ್ ದಂಧೆ**



ಡಿ.ಉಮಾಪತಿ ಅವರ ಅಂಕಣದಲ್ಲಿ...

ಸಂಪುಟ - 02 | ಸಂಚಿಕೆ - 60 | ಪುಟ - 16 | ರೂ. 16/- | ಜನವರಿ 06 ರಿಂದ ಜನವರಿ 12, 2022 KARKAN/2018/76310

**ಇನ್ನೂ 'ಜಲಯುದ್ಧ'ವೇ ಪಕ್ಷಗಳ ಅಜೆಂಡಾ**

## ಕೈ ಪಾದಯಾತ್ರೆಗೆ ಕಮಲ ಬಿಟ್ಟ ಬಾಣ



**ಆಂಧ್ರ ಬಿಜೆಪಿಯಲ್ಲೀಗ ಹೆಂಡದ್ದೆ ಮಾತು**

ಭಾಸ್ಕರ ರಾವ್ ಅವರ ಅಂಕಣದಲ್ಲಿ...

**ಕಿಂಗ್ ಮೇಕರ್ ಜೆಡಿಎಸ್‌ಗೆ ಇನ್ನು ಕಷ್ಟದ ಕಾಲ..!**

**3000 ಕೋಟಿ ಹವಾಲಾ ದಂಧೆಗೆ ಲಿಂಕ್ ಯಾವುದು..?**

# ಹಾಗೆ ಒಂದಿಷ್ಟು ಪತ್ರಿಕೆಯ ನೆನಪಿನ ಗುಂಗಿನಲ್ಲಿ...

ನೋಡು ನೋಡುತ್ತಿದ್ದಂತೆ ಪತ್ರಿಕೆಗೆ ಒಂದು ವರ್ಷ ಮೀರಿ ಎರಡು ತಿಂಗಳಾಗಿದೆ ಇದು 60 ನೇ ಸಂಚಿಕೆ. ಹಾಗೆ ಹಿಂದೆ ತಿರುಗಿ ನೋಡಿದಾಗ ಏನೆಲ್ಲಾ ಆಗಿ ಹೋಯಿತು.. ಪತ್ರಿಕೆ ಈಗ ರಾಜ್ಯಾದ್ಯಂತ ಎಲ್ಲಡೆ ಕಾಣಿಸಿಕೊಳ್ಳುತ್ತಿದೆ ವಿಚಾರಗಳನ್ನು ಮೆಚ್ಚಿಕೊಳ್ಳುತ್ತಿದ್ದಾರೆ ಪತ್ರಿಕೆ ಬಗ್ಗೆ ಬರುತ್ತಿರುವ ಪತ್ರಗಳೇ ಇದಕ್ಕೆ ಸಾಕ್ಷಿಯಾಗಿದೆ .ಅಲ್ಲದೆ ನನ್ನ ಹಲವಾರು ಸ್ನೇಹಿತರು, ವೃತ್ತಿಯ ಪತ್ರಿಕಾ ಮಿತ್ರರು ಮತ್ತು ಹಿರಿಯ ಪತ್ರಕರ್ತರು ದೂರವಾಣಿ ಮೂಲಕ ಮೆಚ್ಚಿಗೆ ಮಾತನಾಡಿದ್ದಾರೆ ಹಾಗಂತ ಪತ್ರಿಕೆ ತೀರಾ ಮನೆ ಮಾತಾಗಿಬಿಟ್ಟಿದೆ ಎನ್ನುವಂತಿಲ್ಲ ಇನ್ನೂ ಅದರ ಪ್ರಸಾರದ ಕೊರತೆ ಇದೆ, ಅಲ್ಲಲ್ಲಿ ಪ್ರಸಾರವಾಗಬೇಕಿದೆ ಜಿಲ್ಲಾ ಪತ್ರಕರ್ತರು ಕೂಡ ಇನ್ನೂ ಸಂಪೂರ್ಣವಾಗಿ ಆಗಿಲ್ಲ ಆದರೂ ಬಹುತೇಕ ಎಲ್ಲಾ ಜಿಲ್ಲೆಗಳಿಗೂ ವ್ಯಾಪಿಸಿದೆ ಎಲ್ಲರೀಗೂ ಕೆಂಧೂಳಿ ಎನ್ನುವ ವಾರಪತ್ರಿಕೆಯೊಂದು ಇದೆ ಎನ್ನುವುದು ತಿಳಿದಿದೆ. ಹಾಗೆಯೇ ಪತ್ರಿಕೆಯ ಬಗ್ಗೆ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ.

ಎಷ್ಟು ಬೇಗ 60 ಸಂಚಿಕೆಯತ್ತ ಬಂದಿದ್ದೇವೆ ಎನ್ನುವುದು ಒಂದಿಷ್ಟು ಕುತೂಹಲವೇ ಹಲವಾರು ಸಮಸ್ಯೆಗಳ, ಸವಾಲುಗಳ ಮಧ್ಯೆಯೇ ಇಷ್ಟು ಬೇಗ ಸಮಯದ ಸಾಗಿತೇ ಎನ್ನುವ ಪ್ರಶ್ನೆ ನನ್ನಲ್ಲಿ ಮೂಡಿದೆ. ಯಾಕೆಂದರೆ ನವೆಂಬರ್ 6 2021ರ ಮೊದಲ ಸಂಚಿಕೆ ತರುವ ಸಂದರ್ಭದಲ್ಲಿ ಹಲವಾರು ಗೊಂದಲ ಆತಂಕದ ಮಧ್ಯೆಯೇ ಮೊದಲನೆ ಸಂಚಿಕೆ ಹೊರತಂದ ಆ ದುಗುಡ ನನ್ನನ್ನು ಇನ್ನೂ ಕಾಡುತ್ತಿದೆ. ನವೆಂಬರ್ 4 ರ ರಾತ್ರಿ ಸಂಚಿಕೆಯ ಪುಟ ವಿನ್ಯಾಸ ಮಾಡಿಸುವ ವೇಳೆ ಪತ್ರಿಕೆ ತರಬೇಕೆ ಬೇಡವೇ ಎನ್ನುವ ಗೊಂದಲ ನನ್ನಲ್ಲಿ ಕಾಡುತ್ತಲೆ ಇತ್ತು .ಒಂದು ಮನಸ್ಸು ನನ್ನಲ್ಲಿ ಬೇಡ ಯಾಕೆ? ರಿಸ್ಕ್ ಎನ್ನುವ ದುಗುಡವನ್ನು ಹೇಳುತ್ತಿದ್ದರೆ ಇನ್ನೊಂದು ಮನಸ್ಸು ಏನೇ ಆಗಲಿ ಮಾಡೇ ಬಿಡುವ ಎನ್ನುವ ಧೈರ್ಯ ತುಂಬಿತು..ಜೊತೆ ಜೊತೆ ಆರ್ಥಿಕ ಸವಾಲು ಕೂಡ ಹೇಗೆ ಪತ್ರಿಕೆಗೆ ಹಣ ಒದಿಗಿಸುವು ಎನ್ನುವ ಪ್ರಶ್ನೆಗಳು ಕಾಡುತ್ತಿದ್ದವು ಹೇಗೋ ಆಗುತ್ತದೆ ಎನ್ನುವ ದೃಡ ನಿಲುವಿನೊಂದಿಗೆ ಇಟ್ಟ ಹೆಜ್ಜೆ ಇಲ್ಲಿಯವರೆಗೂ ಕರೆದುಕೊಂಡು ಬಂದಿದೆ. ಪ್ರತಿವಾರವೂ ಪತ್ರಿಕೆಗೆ ಹಣಜೋಡಿಸುವ ಹೊತ್ತಿಗೆ ನನ್ನಲ್ಲಿ ಇರುವ ಸಾಮರ್ಥ್ಯವೆ ಕಡಿಮೆ ಆಗಿಬಿಡುತ್ತದೆ ಹೇಗೋ ಮುನ್ನಡೆದುಕೊಂಡು ಹೋಗುತ್ತಿದೆ ಅಷ್ಟಿಷ್ಟು ಪತ್ರಿಕೆಯ ಹಣ ಬರುತ್ತಿದೆ ಅದು ನನ್ನ ಕೆಲವು ಸ್ನೇಹಿತರ ವಾರ್ಷಿಕ ಚಂದದಾರಾಗುವ ಮೂಲಕ ಅದು ಹೊಂದಿಕೊಳ್ಳುತ್ತಿದೆ. ಇದರ ಜತೆಗೆ ನನ್ನ  ಆತ್ಮೀಯ ಸ್ನೇಹಿತ ಶಿವಕುಮಾರ್ ಕಂಪ್ಲಿ  ಹಾಗಾಗ ಮಾಡುವ ಸಹಾಯ ಹಾಗೆಯೇ ಪತ್ರಿಕೆಯ ಬೆನ್ನೆಲುಬಾಗಿ ನಿಂತಿರುವ ಪರಶಿವ ಧನಗೂರು ಕೂಡ, ಹೀಗೆ ಪತ್ರಿಕೆ ಸಾಗುತ್ತಿದೆ.

ಈ ಪತ್ರಿಕೆ ಮುನ್ನಡೆಯುತ್ತಿದೆ ಎಂದರೆ ಅದು ನನ್ನ ಮನೋಧೈರ್ಯ ಯಾಕೆಂದರೆ ಅಂದು ಸಂಯುಕ್ತ ಕರ್ನಾಟಕದಿಂದ ಹೊರಬರುವಾಗ ಮಾಡಿಕೊಂಡು ಬಂದ ನಿರ್ಧಾರ.ಈ ನಿರ್ಧಾರ ಮಾಡಿಕೊಳ್ಳಲು ಕಾರಣವೂ ಇದೆ. ಈ ಮುನ್ನ ನಾನು ಅಂದರೆ 1997ರಲ್ಲಿ ಸಂಯುಕ್ತ ಕರ್ನಾಟಕಕ್ಕೆ ಸೇರಿದಾಗ ಅಲ್ಲಿ ಪತ್ರಿಕಾ ಭಿಷ್ಮ ಕ.ಶಾಮರಾವ್ ಅಂತವರು ಇದ್ದರು ಅಪರೂಪದ ಸಂಪಾದಕ ಎನ್.ವಿ.ಜೋಶಿ ಅಂತವರಿದ್ದರು. ಅವರ ತಂಡದಲ್ಲಿ ಅಂದು ಸಂಯುಕ್ತ ಕರ್ನಾಟಕದಲ್ಲಿ ಹಲವಾರು ಹೆಸರಾಂತ ಪತ್ರಕರ್ತರು ತುಂಬಿ ತುಳುಕುತ್ತಿದ್ದರು. ಗೋಪಾಲ್ ವಾಜಪೇಯಿ,ಗುರುರಾಜ್ ಜೋಶಿ, ಸನತ್‌ಕುಮಾರ್ ಬೆಳಗಲಿ,ಗಣೇಶ್ ಕಾಸರಗೂಡು,ಸಂತೋಷ್ ಹೆಗಡೆ, ಜಿ.ಎಚ್.ರಾಘವೇಂದ್ರ, ವಾಮನ್ ಕರುಗುದಿಗಿ  ಪಾರ್ಥಸಾರಥಿ ,ಮನೋಜ್ ಕುಮಾರ್ ಪಾಟೀಲ್,ಹುಣಸವಾಡಿ ರಾಜನ್ ನಂತಹವರು ತುಂಬಿ ತುಳುಕುತ್ತಿತ್ತು ಒಬ್ಬೊಬ್ಬರ ಭಾಷೆ ಶೈಲಿ ಅಂದಿನ ಸಂಯುಕ್ತ ಕರ್ನಾಟಕದ ಯಶಸ್ಸಿಗೆ ಕಾರಣವಾಗಿತ್ತು ಅಂತ ಹೊತ್ತಿನಲ್ಲಿ ಹೆಜ್ಜೆ ಇಟ್ಟ ನಾನು ಅವರೆಲ್ಲರ ಬರಹಗಳ ಅವರ ಕಲಿಕೆಯಲ್ಲಿ ಒಂದಿಷ್ಟು ಪತ್ರಿಕೋದ್ಯಮದ ಎಬಿಸಿಡಿ ಕಲಿತ್ತಿದ್ದು ಎನ್ನುವುದರಲ್ಲಿ ಎರಡು ಮಾತಿಲ್ಲ. ನಾನು ಆರಂಭದಲ್ಲಿ ಡೆಸ್ಕ್‌ನಲ್ಲಿ ಕೂತಾಗ ಏನೂ ಗೊತ್ತಿರಲಿಲ್ಲ ಆದರೆ ಪಾರ್ಥಸಾರಥಿ ಅಂತವರು ತಿದ್ದಿ ತಪ್ಪು ಸರಿ ಎನ್ನುವುದನ್ನ ಹೇಳಿಕೊಟ್ಟವರು. ಜತೆಗೆ ಗ್ರಾಮಾಂತರ ವಿಭಾಗಕ್ಕೆ ಬಂದಾಗ ಗುರುರಾಜ್ ಜೋಶಿ,ಗೋಪಾಲ್ ವಾಜಪೇಯಿ, ಮುಂಜಾನೆ ಸತ್ಯ ಮತ್ತು ಮನೋಜ್ ಕುಮಾರ್ ಪಾಟೀಲ್ ಅಂತವರು ಹೇಳಿಕೊಟ್ಟು ಈ ವೃತ್ತಿ ಇಂದು ನನ್ನ ಕೈಹಿಡಿದು ನಡೆಸುತ್ತಿದೆ. ಅಂದಿನ ಸಂಯುಕ್ತ ಕರ್ನಾಟಕ ಒಂದು ರೀತಿ



ಕೆಂಧೂಳಿ
KENDHOOLI Kannada Weekly
kendhooli.com/e-paper/
MAG(2)Npp/49/2020-21
ಮಲ ಬಳಿಸುವ ಕ್ರೌರ್ಯಕ್ಕೆ ಕೊನೆಯೆಂದು?
ತೃತೀಯ ರಂಗದ ಬೇರು ಸಹಿತ ಕೀಳುವುದು ಮೋದಿ ತಂತ್ರ!
ಮೂರು ಪಕ್ಷ ನೂರು ನೋವು
ಚಿತ್ರದುರ್ಗ ವಿಧಾನ ಪರಿಷತ್ ಗೆಲುವಿಗೆ ಬಿಜೆಪಿ-ಕಾಂಗ್ರೆಸ್ ಜಟಾಪಟಿ
ಕಾಳ ಸಂತೆಯಲ್ಲಿ ಅನ್ನಭಾಗ್ಯ ಅಕ್ಕಿ ಮಾರಾಟ ದಂಧೆ!

ಪತ್ರಿಕೋದ್ಯಮಕ್ಕೆ ಬರುವವರಿಗೆ ಕಲಿಕೆಯ ವೇದಿಕೆಯಂತಿತ್ತು  ಕೆ.ಶಾಮರಾವ್ ಅವರ ನೇತೃತ್ವದ ಪತ್ರಿಕೆಗೆ ಒಂದು ಕಡಕ್ ಇತಿಹಾಸವನ್ನು ಸೃಷ್ಟಿಸಿದವರು ಸಂಯುಕ್ತ ಕರ್ನಾಟಕ ಎಂದರೆ ಒಂದಿಷ್ಟು ರಾಜಕಾರಣಿಗಳು  ಬೆಚ್ಚಿ ಬೀಳುತ್ತಿದ್ದರು ಅಷ್ಟರ ಮಟ್ಟಿಗೆ ಶಾಮರಾಯರು ಪತ್ರಿಕೆಯನ್ನು ಬೆಳಸಿದ್ದರು ಆದರೆ ವಿಜಯಕರ್ನಾಟಕ ಬಂದ ಹೊತ್ತಿನಲ್ಲಿ ಒಂದಿಷ್ಟು ಹೆಸರಾಂತರ ಪತ್ರಕರ್ತರು ಇಲ್ಲಿಂದ ಅಲ್ಲಿಗೆ ಜಿಗಿದಾಗ ಪತ್ರಿಕೆ ಜೊಳ್ಳಾಗಬಹುದು ಎನ್ನುವ ನಂಬಿಕೆ ಇತ್ತು ಆದರೆ ಶಾಮರಾವ್ ಅದಕ್ಕೆ ಆಸ್ಪದ ಕೊಡದೆ ಮತ್ತೊಂದಿಷ್ಟು ಪತ್ರಕರ್ತರನ್ನು ಹೊಸದಾಗಿ ತಗೆದುಕೊಂಡು ಆ ಜಾಗಕ್ಕೆ ತುಂಬಿಕೊಳ್ಳುವ ಮೂಲಕ ಮತ್ತಷ್ಟು ಬಲಿಷ್ಟಮಾಡಲು ಹೊರಟಿದ್ದರು ಅಷ್ಟು ಹೊತ್ತಿಗೆ ಹಾರನಹಳ್ಳಿ ರಾಮಸ್ವಾಮಿ ಅಂತವರು ಪತ್ರಿಕೆಗೆ ವಕ್ಕರಿಸಿಬಿಟ್ಟಿರು.. ಅವರಿಗೆ ಒಂದಿಷ್ಟು ರಾಜಕೀಯವಾಗಿ ಲಾಭ ಪಡೆಬೇಕಿತ್ತು ಆ ಕಾರಣಕ್ಕೆ ಒಳಗೊಳಗೆ ಅಲ್ಲಿನ ಆಡಳಿತ ಮಂಡಳಿಯ ಸದಸ್ಯರನ್ನು ಎತ್ತಿಕಟ್ಟಿ ಶಾಮರಾವ್ ಎನ್ನುವ ಪತ್ರಿಕಾ ಭೀಷ್ಮನನ್ನು ಹೊರಹಾಕಿದರು ಅಲ್ಲಿಗೆ ಸಂಯುಕ್ತ ಕರ್ನಾಟಕ ಎನ್ನುವ ದೊಡ್ಡ ಹೆಸರೇನಿತ್ತು ಅದಕ್ಕೆ ಮುಕ್ಕು ಬಡೆದಂತಾಯಿತು  ಇದಕ್ಕೆ ಕೆಲವು ಪತ್ರಕರ್ತರು ಸಾತ್ ನೀಡಿದ್ದರು ಯಾಕೆಂದರೆ ಮುಂದೆ ತಮ್ಮನ್ನು ತಾವು ಗುರುತಿಸಿಕೊಳ್ಳಬೇಕಿತ್ತು ಆ ಕಾರಣಕ್ಕೆ ಹಾರನಹಳ್ಳಿ ಅವರ ಜತೆ ಗುರುತಿಸಿಕೊಂಡು ಬಿಟ್ಟರು.

ಹಾಗೆ ಹೊರ ಹಾಕುತ್ತಿದ್ದಂತೆ ಹಾರನಹಳ್ಳಿ ರಾಮಸ್ವಾಮಿ ಒಂದು ಭರವಸೆಯನ್ನು ನೀಡಿದ್ದರು ಯಾರನ್ನು ಯಾವುದೇ ಕಾರಣಕ್ಕೂ ಪತ್ರಿಕೆಯಿಂದ ತಗೆದುಹಾಕುವುದಿಲ್ಲ ಮತ್ತು ಅನಾವಶ್ಯಕವಾಗಿ ವರ್ಗಾವಣೆ ಮಾಡುವುದಿಲ್ಲ ಎಂದು ಹೇಳಿದ್ದರು ಆದರೆ ಅವೆಲ್ಲವನ್ನು ಮರೆತು ಮತ್ತೆ ಶಾಮರಾವ್ ಅವರಿಗಿಂತಲೂ ಅತ್ಯಂತ ದ್ವೇಷ ಮಾಡುತ್ತಾ ಹೊರಟರು.ಒಂದಿಷ್ಟು  ದಿನ ಎನ್ ವಿ ಜೋಶಿ ಇದ್ದಕಾರಣ ಪತ್ರಿಕೆ ಒಂದಿಷ್ಟು ಗುಣಮಟ್ಟ ಕಾಪಾಡಿಕೊಂಡು ಬಂದರು ಅವರು ಹೋದ ನಂತರ ಬಂದ ಇಲ್ಲಿವರೆಗಿನ ಎಲ್ಲಾ ಸಂಪಾದಕರು ಒಂದು ರೀತಿ ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ಪ್ರಯೋಗಕ್ಕೆ ಒಡ್ಡಿದ್ದಾರೆ.

ಒಂದು ಕಾಲದಲ್ಲಿ ಉತ್ತರ ಕರ್ನಾಟಕದ ಜನ ಪ್ರತಿದಿನ ಬೆಳಿಗ್ಗೆ ಸಂಯುಕ್ತ ಕರ್ನಾಟಕ ಪತ್ರಿಕೆ ಓದಲೇ ಬೇಕು ಅಷ್ಟರ ಮಟ್ಟಿಗೆ ತನ್ನತನವನ್ನು ಕಾಪಾಡಿಕೊಂಡು ಬಂದಿತ್ತು ಆದರೆ ಈಗ ಅದು ಬದಲಾಗಿದೆ ಕಳೆದ 20 ವರ್ಷದಲ್ಲಿ ಅದರ ಪ್ರಸಾರ ಸಂಖ್ಯೆ ತೀರಾ ಇಳಿಮುಖವಾಗಿದೆ. ಆಡಳಿತ ಮಂಡಳಿ ಬದಲಾವಣೆ ಸಂಪಾದಕರ ಬದಲಾವನೆ ಹೀಗೆ ಹಲವು ಸಮಸ್ಯೆಗಳಿಂದ ಎದುರಿಸುತ್ತಿರುವ ಪತ್ರಿಕೆ ಈಗ ಉತ್ತರ ಕರ್ನಾಟಕ ಮಂದಿಗೆ ಅನಿವಾರ್ಯವಿಲ್ಲ. ಬದಲಾಗಿ ಅವರು ಇತರೆ ಪತ್ರಿಕೆಗಳಿಗೆ ಮಾರು ಹೋಗಿದ್ದಾರೆ.

ನಂತರ ನನ್ನ ದ್ವೇಷಿಸುವ ಕೆಲಸವರು 2016 ರಲ್ಲಿ ದಾವಣಗೆರೆಗೆ ವರ್ಗಾವಣೆ ಮಾಡಿದರು ಹಾಗೆ ದೂರು ನೀಡಿ ವರ್ಗಾವಣೆ ಮಾಡಿಸಿದವರು ಸುಮ್ಮನೆ ಕೂರಲಿಲ್ಲ ದಾವಣಗೆರೆಯಲ್ಲೂ ನನ್ನ ವಿರುದ್ಧ ಎತ್ತಿ ಕಟ್ಟಿ ಅಲ್ಲಿನ ವ್ಯಕ್ತಿಯೊಬ್ಬ ಅನಾವಶ್ಯಕವಾಗಿ ನನಗೆ ಪದೆ ಪದೆ ಅವಮಾನ ಮಾಡುತ್ತಲೇ ಬಂದಾಗ ನಾನು ಅಲ್ಲಿ ಪತ್ರವೊಂದನ್ನು ಆಗಿನ ಹುಬ್ಬಳ್ಳಿ ಮುಖ್ಯಸ್ಥರಾದ ಎ.ಸಿ.ಗೋಪಾಲ್ ಅವರಿಗೆ ದೂರಿನ ಪತ್ರವೊಂದನ್ನು ಬರೆದು ಹೊರಟು ಸೀದ ಬೆಂಗಳೂರಿಗೆ ಬಂದೆ. ಅಷ್ಟು ಹೊತ್ತಿಗೆ ಸುವರ್ಣ ಟಿವಿ ಆರಂಭವಾಗುತ್ತಿತ್ತು ಶಶಿಧರ ಭಟ್ ಅವರನ್ನು ಮನವಿ ಮಾಡಿಕೊಂಡ ಕಾರಣ ಹಿರಿಯ ವರದಿಗಾರರನ್ನಾಗಿ ಸೇರಿಸಿಕೊಂಡು ಆಗ ಮೇ 2017 ಇನ್ನೂ ಚಾನಲ್ ಏರ್ ಆಗಿರಲಿಲ್ಲ





ನಾನು ಹೋದ  ಎರಡು ತಿಂಗಳ ನಂತರ ಏರ್ ಆಯಿತು. ಆರಂಭದಲ್ಲಿ ಎಂಟರ್‌ಟ್ರೈನ್‌ಮೆಂಟ್ ಮತ್ತು ನ್ಯೂಸ್ ಚಾನಲ್ ಎರಡು ಒಂದೇ ಆಗಿತ್ತು ಒಂದೂವರೆ ವರ್ಷದ ನಂತರ ಚಾನಲ್ ಅನ್ನು ಸ್ಟಾರ್ ಅವರು ಎಂಟರ್‌ಟ್ರೈನ್‌ಮೆಂಟ್ ಚಾನಲ್ ಅನ್ನು ಕೊಂಡು ಕೊಂಡರು ಆಗ ಸುವರ್ಣ ನ್ಯೂಸ್ ಚಾನಲ್ ಪ್ರತ್ಯೇಕವಾಯಿತು. ಶಶಿಧರ್ ಭಟ್ ನಂತರ ಬಂದ ರಂಗನಾಥ್ ಅವರು ನನಗೆ ಆದ ಜಗಳದಿಂದ ನಾನು ಅಲ್ಲಿಂದ ಉದಯ ಟಿವಿಗೆ  ಮತ್ತೆ ಉದಯ ಟಿವಿಯಿಂದ ಜನಶ್ರೀ ಚಾನಲ್‌ಗೆ ತೆರಳಿದ್ದು ಅಲ್ಲಿ ನಾಲ್ಕು ವರ್ಷ 2016 ಮಾರ್ಚ್  ವರೆಗೂ  ಕಾರ್ಯನಿರ್ವಹಿಸಿ ಇನ್ನೇನು ಚಾನಲ್ ಮುಚ್ಚುವ ಹಂತಕ್ಕೆ ತಲುಪಿದಾಗ ಅಲ್ಲಿಂದ ನಾನು  ಬಿಟ್ಟು ಚಾನಲ್‌ಗಳ ಸವಾಸ ಬೇಡವೆನ್ನುವ ಕಾರಣಕ್ಕೆ ಪತ್ರಿಕೆಗೆ ಹೋಗಬೇಕು ಎನ್ನುವ ನನ್ನ ದಾವಂತಕ್ಕೆ ಎಲ್ಲಿಯೂ ಆ ಕೆಲಸವಾಗಲಿಲ್ಲ ಹಾಗಾಗಿ ನಾನು ಕೆಂಧೂಳಿ  ಎನ್ನುವ ಸಂಜೆ ಪತ್ರಿಕೆಯನ್ನು 2017 ಜುಲೈ ತಿಂಗಳಲ್ಲಿ ಆರಂಭಿಸಿದೆ. ಸುಮಾರು ಒಂದುವರ್ಷ ನಡೆದ ಪತ್ರಿಕೆ ಅತ್ಯಂತ ಯಶಸ್ವಿಯಾಗಿ ನಡೆಸಿದನೆದಾರು ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿ ಅದನ್ನು ಅನಿವಾರ್ಯವಾಗಿ ನಿಲ್ಲಿಸಬೇಕಾಯಿತು. ಈ ವೇಳೆಮತ್ತೆ ನಾನು ಸಂಯುಕ್ತ ಕರ್ನಾಟಕಕ್ಕೆ ತೆರಳ ಬೇಕಾಯಿತು ಆದರೆ ಅಲ್ಲಿ ಕೆಲವರು ನನ್ನ ವಿರುದ್ಧ ಮಾಡಿದ ಸಂಚಿಗೆ ಒಂದು ಬಾರಿ  ಬಿಟ್ಟು ಬಂದರೂ ಮತ್ತೆ  ಆಗಿನ ಕಾರ್ಯದರ್ಶಿ ನಾರಾಯಣ ಮೂರ್ತಿ ಅವರ ಒತ್ತಾಯದ ಮೇರೆಗೆ  ಮತ್ತೆ ಹೋದೆ ಆದರೆ ಆಗಲೂ ಹಾಗೆಯೇ ಆಯಿತು.. ವ್ಯವಸ್ಥಿತ  ಸಂಚು ನನ್ನ ವಿರುದ್ಧ ನಡೆಯುತ್ತಲೇ ಇತ್ತು ಹಾಗಾಗಿ ಒಂದಿಷ್ಟು ಕಹಿ ಘಟನೆಯೊಂದಿಗೆ ಅಲ್ಲಿಂದ 2019 ಮಾರ್ಚ ತಿಂಗಳಲ್ಲಿ ಬಿಟ್ಟು ಮತ್ತೇ ಕೆಂಧೂಳಿಯನ್ನೇ ವಾರಪತ್ರಿಕೆಯನ್ನಾಗಿ ಹೊರತರುವ ನಿರ್ಧಾರ ಮಾಡಿ ಹೊರಬಂದೆ.

ಹಾಗೆ ಅವಮಾನದೊಂದಿಗೆ ಸಂಯುಕ್ತ ಕರ್ನಾಟಕದಿಂದ ಹೊರಬಂದ ನಂತರ ಬಂದ ಈ  ಕೆಂಧೂಳಿ  ಈಗ ಒಂದು ವರ್ಷ ಎರಡು ತಿಂಗಳಾಗಿದೆ ರಾಜ್ಯಾದ್ಯಂತ  ಒಳ್ಳೆಯ ಅಭಿಪ್ರಾಯಗಳು ಬರುತ್ತಿವೆ ..ಅಷ್ಟು ಸಾಕಲ್ಲವೇ ಒಬ್ಬ ಪತ್ರಕರ್ತರನಿಗೆ ಇದಕ್ಕಿಂತ  ಬೇರೆ ಏನು ಬೇಡ.. ಓದುಗರು ಪತ್ರಿಕೆಯನ್ನು ಅಪ್ಪಕೊಂಡರೆ ಒಬ್ಬ ಪತ್ರಕರ್ತ  ಅದಕ್ಕಿಂತ ಖುಷಿಯ ಸಂಗತಿ ಇನ್ನೊಂದಿಲ್ಲ..

# ಮಿಂಚಿ ಮಾಯವಾದ ಸಿಂಧುತಾಯಿ ಎಂಬ ಸೇವಕಿ

ಭಿಕ್ಷೆ ಬೇಡುತ್ತಲೇ ಸಾವಿರಾರು ಮಕ್ಕಳ ಮಹಾಮಾತೆಯಾದ ಸಿಂಧುತಾಯಿ ಸಪ್ಕಾಲ ಅವರ ನಿಧನದಿಂದ ಮಾನವೀಯ ಜಗತ್ತು ಅನಾಥವಾಯಿತು. ಹೌದು ಅವರು ಹೃದಯಾಘಾತದಿಂದ ನಿಧನ ಹೊಂದಿದ್ದಾರೆ.

ಹದಿಹರೆಯದಲ್ಲೇ ಮದುವೆಯಾಗಿ ಗಂಡನ ಮನೆಗೆ ಬಂದರು. ಊರಲ್ಲಿನ ಶ್ರೀಮಂತ, ಹೆಣ್ಣಾಳುಗಳಿಗೆ ಕಡಿಮೆ ಕೂಲಿ ಕೊಡುವುದನ್ನು ವಿರೋಧಿಸಿದರು. ಮುಂದೆ ಗರ್ಭಿಣಿಯಾದಾಗ  "ಅನೈತಿಕ ಸಂಬಂಧದಿಂದ ಗರ್ಭಿಣಿಯಾಗಿದ್ದಾಳೆ" ಎಂದು ಆ ಶ್ರೀಮಂತ ಗಾಳಿಸುದ್ದಿ ಹಬ್ಬಿಸಿದ. ಗಂಡ ಹೊರಗೆ ಹಾಕಿದ. ಅಪವಾದಕ್ಕೆ ಅಂಜಿ ತವರುಮನೆಯವರು ಒಳಗೆ ಕರೆದುಕೊಳ್ಳಲಿಲ್ಲ. ತುಂಬು ಗರ್ಭಿಣಿ ಸಿಂಧುತಾಯಿ ಸೇತುವೆ ಕೆಳಗೆ ನದಿಯ ದಡದಲ್ಲಿ ಹೆಣ್ಣು ಮಗುವಿಗೆ ಜನ್ಮ ನೀಡಿದರು. ಕಲ್ಲಿನಿಂದ ಹೊಕ್ಕುಳ ಬಳ್ಳಿಯನ್ನು ಕತ್ತರಿಸಿಕೊಂಡರು. ನದಿನೀರಿನಿಂದ ಕೂಸಿನ ಮೈತೊಳೆದರು. ಕೂಸನ್ನು ಎತ್ತಿಕೊಂಡು ಭಿಕ್ಷಾಟನೆಗೆ ಹೋಗುವುದೊಂದೇ ದಾರಿ ಉಳಿದಿತ್ತು. ಹಾಗೇ ಮಾಡಿದರು. ಭಿಕ್ಷಾಟನೆಯಲ್ಲಿ ತೊಡಗಿದ್ದ ಅನಾಥ ಮಕ್ಕಳಿಗೆ ತಾಯಿಯಾದರು. ಹಾಗೇ ಮುಂದುವರಿದು






ಅವರ ವಿದ್ಯಾಭ್ಯಾಸದ ಕಡೆಗೆ ಗಮನಹರಿಸಿದರು. ಕಷ್ಟಪಟ್ಟು ಅನಾಥಾಶ್ರಮ ಆರಂಭಿಸಿದರು. ಸಜ್ಜನರು ಸಹಾಯಹಸ್ತ ಚಾಚಿದರು. ಮುಂದೆ ಅವರ ಅನಾಥಾಶ್ರಮದಲ್ಲಿ ಸಾವಿರಾರು ಮಕ್ಕಳು ವಿದ್ಯೆ ಪಡೆದು ವೈದ್ಯ, ಎಂಜಿನಿಯರ್, ವಕೀಲ, ಅಧಿಕಾರಿಗಳಾಗಿದ್ದಾರೆ. ಮನೆಯಿಂದ ಹೊರಗೆ ಹಾಕಿದ ಅವರ ಪತಿ ಕೂಡ ಆಶ್ರಯ ಬಯಸಿ ಬಂದ. ಆತನನ್ನು ಕೂಡ ಅನಾಥ ಮಕ್ಕಳಂತೆ ಕಾಳಜಿಯಿಂದ ಸಾಕಿದರು. ಸಿಂಧುತಾಯಿ ಆ ಇಳಿವಯಸ್ಸಿನಲ್ಲೂ ಸೌಂದರ್ಯದ ಮೂರ್ತಿಯಾಗಿದ್ದರು. ಅವರದು ತ್ಯಾಗ ಮತ್ತು ಸಂತೃಪ್ತಿಯ ದೈವೀ ಕಳೆಯಿಂದ ಕೂಡಿದ ಸೌಂದರ್ಯವಾಗಿತ್ತು. ಅವರ ಬದುಕೊಂದು "ಅಘಟಿತ ಘಟನೆ"ಯಂತೆ ಮಿಂಚಿ ಮಾಯವಾಯಿತು. ಸಿಂಧು ತಾಯಿ ಸಪ್ಕಾಲ್ ಅವರು 1948ರ ನವೆಂಬರ್ 14ರಂದು ಮಹಾರಾಷ್ಟ್ರದಲ್ಲಿ ವಾರ್ಧಾ ಜಿಲ್ಲೆಯಲ್ಲಿ ಹುಟ್ಟಿದ್ದಾರೆ. 4ನೇ ತರಗತಿಯವರೆಗೆ ಕಲಿತ ನಂತರ ಅನಿವಾರ್ಯವಾಗಿ ಶಾಲೆ ಬಿಡಬೇಕಾಯಿತು. ಬಡತನದಲ್ಲೇ ಬೆಳೆದು, ಕಷ್ಟಕಂಡ ಸಪ್ಕಾಲ್ ನಂತರ ಅನಾಥ ಮಕ್ಕಳಿಗಾಗಿ ಒಂದು ಅನಾಥಾಶ್ರಮ ಕಟ್ಟಲು ಮುಂದಾದರು. ಆಗೆಲ್ಲ ಬಾಲ್ಯವಿವಾಹ ಚಾಲ್ತಿಯಲ್ಲಿತ್ತು. ಸಿಂಧುತಾಯಿ ಕೂಡ 12ನೇ ವರ್ಷಕ್ಕೆ, 32 ವರ್ಷದ ವ್ಯಕ್ತಿಯನ್ನು ಮದುವೆಯಾಗಬೇಕಾದರು. ಮೂರು ಮಕ್ಕಳಿಗೆ ಜನ್ಮ ಕೊಟ್ಟರು. ಆದರೆ

ಈ ಮಧ್ಯೆ ಕೊನೇ ಮಗು ಹೊಟ್ಟೆಯಲ್ಲಿದ್ದಾಗಲೇ ಪತಿ ಇವರನ್ನು ನಡುದಾರಿಯಲ್ಲಿ ಕೈಬಿಟ್ಟ. ಪತಿಯಿಂದ ಹೊರದೂಡಲ್ಪಟ್ಟ ಸಿಂಧುರನ್ನು ಅವರ ತಾಯಿಯಾಗಲಿ, ಅವರ ಹುಟ್ಟೂರಾಗಲೀ ಕೈ ಹಿಡಿಯಲಿಲ್ಲ. ಭಿಕ್ಷೆ ಬೇಡು ಎಂದು ಹೇಳಿದರು. ಆದರೆ ನಂತರ ಇದೆಲ್ಲ ಕಷ್ಟಗಳನ್ನು ಎದುರಿಸಿ, ತಮ್ಮದೇ ದಾರಿ ಕಂಡುಕೊಂಡರು. ಅನಾಥಾಶ್ರಮಗಳಲ್ಲಿ ಕೆಲಸ ಮಾಡಲು ಶುರು ಮಾಡಿದರು.  ನಂತರ ಸುಮಾರು 1050 ಅನಾಥ ಮಕ್ಕಳನ್ನು ಬೆಳೆಸಿದರು. ಈ ಸಾಧನೆಗೇ ಅವರಿಗೆ ಪದ್ಮಶ್ರೀ ಪ್ರಶಸ್ತಿ ಲಭಿಸಿತ್ತು.



ಪ್ರಧಾನ ಸಂಪಾದಕ
ತುರುವನೂರು ಮಂಜುನಾಥ

ಪುಟ ವಿನ್ಯಾಸ
ಸೂರ್ಯಕುಮಾರ್ ಜಿ.ಎನ್.

## ಅನಾವರಣ

**ಪತ್ರಿಕೆಗೆ ಚಂದಾದಾರರಾಗಿ ಮತ್ತಷ್ಟು ಬೆಳೆಯಲು ತಾವೂ ಭಾಗಿಯಾಗಿ ಚಂದಾದಾರರ ವಿವರ**

| | |
|---|---|
| ವಾರ್ಷಿಕ | 1100 |
| ಅರ್ಧವಾರ್ಷಿಕ | 600 |
| ಎರಡು ವರ್ಷ | 2200 |
| ಆರು ವರ್ಷ | 6600 |
| ಪೋಷಕರು | 10,000 |
| ಮಹಾಪೋಷಕರು | 20,000 |


# ಹೇಸಿಗೆ ಹುಟ್ಟಿಸುತ್ತದೆ ರಾಜಕಾರಣಿಗಳ ದುಂಡಾ ವರ್ತನೆಗಳು..!

ಇದೆಂಥ ರಾಜಕಾರಣ..ಎಲ್ಲಿಯವರೆಗೂ ಬಂದು ನಿಂತಿದೆ. ಜನಪ್ರತಿನಿಧಿಗಳ ರಂಪಾಟ. ರಾಜ್ಯದ ಜನರಿಗೆ ಆದರ್ಶವಾಗಬೇಕಾದವರು ಅಪಖ್ಯಾತಿಯಾದರೆ ಹೇಗೆ? ಈಗ ರಾಜಕಾರಣ ಅನ್ನೋದು ಆಗಿರುವುದು ಹಾಗೆಯೇ.. ಯಾಕೆಂದರೆ ಯಾವುದೇ ಸಿದ್ಧಾಂತಗಳಿಲ್ಲದೆ ಜನಪರ ಕಾರ್ಯಗಳ ಬಗ್ಗೆ ವಿವೇಕವಿಲ್ಲದೆ ಕೇವಲ ಶೋಕಿಗೆ ತನ್ನ ಆಸ್ತಿಗಳನ್ನು ರಕ್ಷಿಸಿಕೊಳ್ಳಲು ಪ್ರತಿಷ್ಠೆಗಾಗಿ ರಿಯಲ್ ಎಸ್ಟೇಟ್ ಕುಳಗಳು ರಾಜಕೀಯಕ್ಕೆ ಬಂದು ರಾಡಿ ಎಬ್ಬಿಸಿದ್ದಾರೆ. ಯಾರಿಗೂ ಸೈದ್ಧಾಂತಿಕ ನಿಲುವು ಇಲ್ಲ. ಜ್ಞಾನ ಎನ್ನುವ ಪರಿಜ್ಞಾನವೂ ಇಲ್ಲದ ರಾಜಕಾರಣಿಗಳಿಂದ ಜನರು ಏನನ್ನು ತಾನೇ ನಿರೀರಿಕ್ಷಿಸಬಲ್ಲರು.

ಹೌದು..ಜನರು ಇವರಿಂದ ಏನನ್ನು ನಿರೀಕ್ಷಿಸುವುದಿಲ್ಲ ಹೆಚ್ಚು ಎಂದರೆ ಚುನಾವಣೆ ಸಂದರ್ಭದಲ್ಲಿ ಜನರಿಗೆ ನೀರು ಹಂಚಿದಂತೆ ಹಣ ಹಂಚುತ್ತಾರಲ್ಲ ಅದನ್ನು ಮಾತ್ರ ನಿರೀಕ್ಷಿಸಬಹುದು..! ಹಾಗೆ ಹಣ ಖರ್ಚು ಮಾಡಿದವವರು ಅದೇ ರೀತಿಯಲ್ಲಿ ರಾಜಕಾರಣವೂ ಲೆಕ್ಕಾಚಾರದಲ್ಲಿ ಅಭಿವೃದ್ಧಿ ನೆಪದಲ್ಲಿ ಕಮಿಷನ್ ಪಡೆಯುವುದೇ ದೊಡ್ಡ ಸಾಧನೆಯಂತಾಗಿದೆ. ಆದರೆ ಜನಸೇವೆ ಎನ್ನುವುದು ಈಗ ಮರೀಚಿಕೆಯಾಗಿದೆ.

ಯಾಕೆ ಈ ಮಾತು ಹೇಳುತ್ತಿದ್ದೇನೆ ಎಂದರೆ ಕಳೆದ ಸೋಮವಾರ ರಾಮನಗರದಲ್ಲಿ ನಡೆದ ಆ ಗಲಾಟೆ ಇದೆಯಲ್ಲ ಅದು ನಿಜಕ್ಕೂ ಈ ರಾಜ್ಯದ ರಾಜಕಾರಣಿಗಳ ದುಂಡಾವರ್ತನೆಗೆ ಒಂದು ಉದಾಹರಣೆಯಷ್ಟೆ. ಇಂತಹ ಹಲವಾರು ಘಟನೆಗಳು ನಡೆಯುತ್ತಲೇ ಇವೆ. ಆದರೆ ರಾಮನಗರದ ಗಲಾಟೆ ಇದೆಯಲ್ಲ ಅದು ಒಬ್ಬ ಸಿಎಂ ಎದುರಿಗೆ ಹಿರಿಯ ಸಚಿವರು ಸಂಸದರ ಆ ವಾಕ್ಸಮರ ಅವರು ಆಡುವ ಮಾತುಗಳು ಹೇಗಿದ್ದವು ನೋಡಿ ಇದು ನಮ್ಮ ರಾಜಕಾರಣಿಗಳ ಸಂಸ್ಕೃತಿಯ ಪಾಠ..

ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಮತ್ತು ಬೆಂಗಳೂರು ನಿರ್ಮಾತೃ ಕೆಂಪೇಗೌಡ ಅವರ ಪುತ್ಥಳಿ ಅನಾವರಣ ಕಾರ್ಯಕ್ರಮ. ಆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಇದ್ದಾರೆ ಮಹಿಳಾ ಶಾಸಕಿಯೊಬ್ಬರು ಕೂತಿದ್ದಾರೆ ಅವರ ಎದುರೆ ಆಡಿದ ಆ ಮಾತುಗಳು ಏನನ್ನು ಸೂಚಿಸುತ್ತದೇ..?

ಸಭೆಯಲ್ಲಿಯೇ ಕನಿಷ್ಠ ಜ್ಞಾನವಿಲ್ಲದ ಇಬ್ಬರು ನಾಯಕರು ಏಕವಚನದಲ್ಲಿ ಬೈಯ್ದಾಡಿಕೊಂಡಿದ್ದಾರೆ. ಸಿಎಂ ಮುಂದೆನೇ ವೇದಿಕೆಯಲ್ಲೇ ಸಂಸದರು ಧರಣಿ ಕೂರುತ್ತಾರೆ, ಮೈಕ್ ಅನ್ನು ಕಿತ್ತಾಕುತ್ತಾರೆ ಎಂದರೆ, ಜನತೆಗೆ ಇವರು ಏನು ಸಂದೇಶ ಕೊಟ್ಟಂತ್ತಾಗಿದೆ. ಇದು ಸಚಿವ ಮತ್ತು ವೃತ್ತಿಯಲ್ಲಿ ವೈದ್ಯರೂ ಆಗಿರುವ ಡಾ.ಅಶ್ವಥ್ ನಾರಾಯಣ ಮತ್ತು ಬೆಂಗಳೂರು ಗ್ರಾಮಾಂತರ ಸಂಸದ ಡಿ.ಕೆ.ಸುರೇಶ್ ನಡುವೆ ನಡೆದ ಗಲಾಟೆ.

ಆರಂಭದಲ್ಲಿ ಸಚಿವ ಅಶ್ವತ್ ನಾರಾಯಣ ಆಡುವ ಮಾತು ಹೇಗಿದೆ ನೋಡಿ:

"ಯಾರಯ್ಯಾ ಗಂಡು, ಕೆಲಸದಲ್ಲಿ ತೋರಿಸಲೇ,



ಬರೀ ನಾಲ್ಕು ಜನವನ್ನು ಕಟ್ಟಿಕೊಂಡು ಬಂದು ಸಭೆಯಲ್ಲಿ ಗಲಾಟೆ ಮಾಡೋದಲ್ಲಾ, ಏನು ಅಭಿವೃದ್ದಿ ಕೆಲಸ ಮಾಡಿದ್ದೀರಾಂತ ತೊಡೆತಟ್ಟಿ ಹೇಳು ನೋಡೋಣ" ಎಂದು ವೀರಾವೇಶದ ಭಾಷಣ ಮಾತನಾಡುತ್ತಿದ್ದಾಗ, ಅಲ್ಲಿಗೇ ಹೋದ ಡಿ.ಕೆ.ಸುರೇಶ್ ಸಚಿವರ ಜೊತೆಗೆ ಜಗಳಕ್ಕೆ ಇಳಿದಿದ್ದಾರೆ. ಅಷ್ಟೊತ್ತಿಗೆ ಸುರೇಶ್ ಅವರಿಗೆ ಸಾಥ್ ನೀಡಿದ ಮತ್ತೋರ್ವ ಜನಪ್ರತಿನಿಧಿ ರವಿ ಸಚಿವರು ಮಾತನಾಡುತ್ತಿದ್ದ ಮೈಕ್ ಅನ್ನೇ ಕಿತ್ತಾಕುತ್ತಾರೆ. ಇದೆಲ್ಲಾ, ಮುಖ್ಯಮಂತ್ರಿಗಳ ಸಮ್ಮುಖದಲ್ಲೇ ನಡೆಯುತ್ತದೆ.

ಪ್ರತಿಮೆ ಅನಾವರಣ ಕಾರ್ಯಕ್ರಮಕ್ಕೆ ಗೌರವಪೂರ್ವಕವಾಗಿ ಆಹ್ವಾನಿಸಿಲ್ಲ ಎನ್ನುವ ಕೋಪ ಡಿ.ಕೆ.ಸುರೇಶ್ ಅವರಿಗೆ. ಇಷ್ಟಕ್ಕೇ ನಾಗರೀಕತೆಯನ್ನೇ ಮರೆತಂತೆ ಆಡಿದ್ದು, ಅದಕ್ಕೆ ಸಚಿವರ ಪ್ರತಿಕ್ರಿಯೆ, ರಾಜಕೀಯ ವ್ಯವಸ್ಥೆಗೇ ಮಸಿ ಬಳಿದಂತಾಯಿತು. ರಾಮನಗರಕ್ಕೆ ಒಳ್ಳೆಯ ಸುದ್ದಿಯನ್ನು ನೀಡಲು ಬಂದಿದ್ದೇನೆ, ಇದು ರಾಜಕೀಯ ಮಾಡುವ ವೇದಿಕೆಯಲ್ಲ ಎಂದು ಸಿಎಂ ಬೊಮ್ಮಾಯಿ ಹೇಳಿದ ಮೇಲೂ ಏನೂ ಪ್ರಯೋಜನವಾಗದೇ ಇದ್ದದ್ದು ಅತ್ಯಂತ ವಿಷಾದನೀಯ.

"ಅವರು ಜಿಲ್ಲಾ ಉಸ್ತುವಾರಿಯ ಸಚಿವರು ಮಾತ್ರವಲ್ಲ, ಅವರು ಉನ್ನತ ಶಿಕ್ಷಣ ಸಚಿವರು. ಅವರು ನಡೆದುಕೊಂಡ ರೀತಿ, ಹಾಕಿರುವ ಸವಾಲಿನಿಂದ ವೇದಿಕೆಯಲ್ಲಿ ಅಂತಹ ಪರಿಸ್ಥಿತಿ ನಿರ್ಮಾಣವಾಯಿತು. ನಾನು ಸಿಎಂ ಇದ್ದ ವೇದಿಕೆಯಲ್ಲಿ ಹೀಗಾಗಿದ್ದಕ್ಕೆ ಕ್ಷಮೆಯಾಚಿಸುತ್ತೇನೆ"ಎಂದು ಡಿ.ಕೆ.ಸುರೇಶ್ ಹೇಳಿಕೆಯನ್ನು ನೀಡಿದ್ದಾರೆ. ಆದರೆ, ಇಂದಿನ ಘಟನೆ, ಅದೂ ಸಿಎಂ ಇದ್ದ ವೇದಿಕೆಯಲ್ಲಿ ಇಬ್ಬರು ಜನಪ್ರತಿನಿಧಿಗಳು ವರ್ತಿಸಿದ ರೀತಿ, ಹಲವರಿಗೆ ಮಜಾ ಕೊಟ್ಟರೆ, ಬಹಳಷ್ಟು ಜನರು ಶೇಮ್..ಶೇಮ್ ಎಂದು ಹೇಳುವಂತಾಗಿದೆ.ಇಂತಹ ಘಟನೆ ನಡೆಯಬಾರದಿತ್ತು ಎನ್ನುವ ಯಾವ ವಿಷಾದವೂ ಇಲ್ಲದ ನಾಯಕರುಗಳು ತಮ್ಮತಮ್ಮ ಪಕ್ಷದ ಮುಖಂಡರನ್ನು ಸಮರ್ಥಿಸಿಕೊಂಡಿದ್ದು ಇನ್ನೊಂದು ದುರಂತ. "ಇಬ್ಬರೂ ಜನಪ್ರತಿನಿಧಿಗಳು ರೌಡಿಗಳಂತೆ ವರ್ತಿಸಿದ್ದಾರೆ, ರಾಮನಗರವನ್ನು ಅಭಿವೃದ್ಧಿ ಮಾಡಿದ್ದು ನಾನು, ಕಿತ್ತಾಡಿಕೊಳ್ಳುತ್ತಿರುವುದು ಅವರಿಬ್ಬರು" ಎಂದು ಎಚ್.ಡಿ.ಕುಮಾರಸ್ವಾಮಿ ಬೇಸರ ವ್ಯಕ್ತ ಪಡಿಸಿದ್ದಾರೆ.

ಒಟ್ಟಾರೆಯಾಗಿ ರಾಜಕೀಯ ವ್ಯವಸ್ಥೆಯ ಬಗ್ಗೆ ಇಂತಹ ಘಟನೆಗಳಿಂದ ಯಾವರೀತಿಯ ಸಂದೇಶ ರವಾನಿಸಿದಂತಾಗುತ್ತದೆ ಎನ್ನುವ ಅರಿವಿಲ್ಲದೇ , ಶಾಲಾ ಮಕ್ಕಳಿಗಿಂತ ಕಡೆಯಾಗಿ ಇಬ್ಬರು ಜವಾಬ್ದಾರಿಯುತ ಜನಪ್ರತಿನಿಧಿಗಳು ವರ್ತಿಸಿದ್ದು ರಾಜ್ಯ ರಾಜಕೀಯಕ್ಕೆ ಮಾಡಿದ ಅವಮಾನ ಎಂದಷ್ಟೇ ಹೇಳಬಹುದು. ಇಡೀ ಕಾರ್ಯಕ್ರಮದಲ್ಲಿ ಸಿಎಂ ಬೊಮ್ಮಾಯಿಯವರ ತಾಳ್ಮೆ, ಅವರು ನಡೆದುಕೊಂಡ ರೀತಿ ಈ ಇಬ್ಬರು ಜನಪ್ರತಿನಿಧಿಗಳಿಗೆ ಪಾಠವಾಗಲಿ.

ಇಂತಹ ಘಟನೆಗಳು ಹಲವಾರು ಬಾರಿ ವೇದಿಕೆಗಳಲ್ಲಿ ನಡೆದಿವೆ, ಇನ್ನೂ ಕೆಲ ರಾಜಕಾಣಿಗಳು ಸ್ವಪಕ್ಷದವರೇ ಆಗಲಿ ಅಥವಾ ಬೇರೆ ಪಕ್ಷದವರೇ ಆಗಲೇ ಒಂದೇ ವೇದಿಕೆಯಲ್ಲಿ ಒಬ್ಬರು ಮತ್ತೊಬ್ಬರ ಕುರಿತು ಭಾಷಣದಲ್ಲಿ ತೆಗಳುವುದು ನಾವು ನೋಡಿದ್ದೇವೆ. ಆಕ್ರೋಶ ವ್ಯಕ್ತ ಪಡಿಸುವುದನ್ನು ನೋಡಿದ್ದೇವೆ ಆದರೆ ಇಂತಹ ವರ್ತನೆಗಳು ನಿಜಕ್ಕೂ ಅವರ ಸಂಸ್ಕೃತಿಯನ್ನು ಬಿಂಬಿಸುತ್ತವೆ. ಈ ಹಿಂದೆ ಜಿಲ್ಲಾ ಪಂಚಾಯಿತ್ ಸಭೆಗಳಲ್ಲಿ ಕೈ ಕೈ ಮಿಸಲಾಯಿಸಿದ ವರ್ತನೆಗಳೂ ನಡೆದಿವೆ. ಸಚಿವ ಸಂಪುಟದಲ್ಲೂ ಒಬ್ಬರಿಗೊಬ್ಬರ ಮಾತಿನ ಸಮರ ನಡೆದ ಉದಾಹರಣೆಗಳಿವೆ. ಬೇರೆ ಬೇರೆ ಕಡೆ ಒಬ್ಬರೂ ನಾಯಕರು ಇನ್ನೊಬ್ಬ ನಾಯಕರ ಬಗ್ಗೆ ಅವಹೇಳನಕಾರಿ ಮತುಗಳನ್ನೂ ಆಡಿದ್ದಾರೆ. ಅದರೆ ಈ ರೀತಿ ಸಿಎಂ ಎದುರೇ ಈ ರೀತಿಯ ವರ್ತನೆಗಳು ಆಗಿದ್ದು ವಿರಳ. ಈಗ ಅದು ಸೇರ್ಪಡೆಯಾಗಿದೆ. ಈ ಹಿಂದೆ ರಾಮನಗರದಲ್ಲಿ ಕೆಡಿಪಿ ಸಭೆಯಲ್ಲಿ ಡಿ.ಕೆ.ಶಿವಕುಮಾರ್ ಮತ್ತು ಸಿ.ಪಿ.ಯೋಗೇಶ್ವರ್ ಅವರು ಗಲಾಟೆ ಮಾಡಿದ ಇತಿಹಾಸವೂ ಇದೆ. ಆಗ ಇಬ್ಬರು ಕೈ ಕೈ ಮಿಸಲಾಯಸುವ ಹಂತ ತಲುಪಿದ್ದರಲ್ಲದೆ ಅವಾಚ್ಯ ಶಬ್ದಗಳಿಂದ ನಿಂದಿಸಿದ ಉದಾಹರಣೆಗಳು ಇವೆ. ಈ ರೀತಿಯ ವರ್ತನೆಗಳು ಯಾವ ಸಂದೇಶವನ್ನು ನೀಡುತ್ತವೆ ಎನ್ನುವ ಸೌಜನ್ಯವಾದರೂ ಈ ಜನಪ್ರತಿನಿಧಿಗಳಿಗೆ ಇರಬೇಕಲ್ಲವೇ?

# ಅಬ್ಬಾ..! ಇದೆಂಥಾ ಭಯಪಡಿಸುವ ಕೆಲಸ

## ಹಿಟ್ & ರನ್

ನಿಜ ಇದು ಹೀಗೆ ಮುಂದುವರೆದರೆ ಟಿವಿ ಚಾನಲ್‌ಗಳ ವೀಕ್ಷಿಸುವವರ ಸಂಖ್ಯೆ ಕಡಿಮೆಆಯಗುತ್ತದೆ ಈಗಾಗಲೇ ಸಾಕಷ್ಟು ಜನ ನ್ಯೂಸ್ ಚಾನಲ್‌ಗಳನ್ನು ವೀಕ್ಷಿಸುವವರ ಸಂಖ್ಯೆ ಗಣನೀಯವಾಗಿ ಕುಸಿದಿದೆ .. ಜನ ಈಗಾಗಲೇ ಸುದ್ದಿ ಚಾನಲ್‌ಗಳ ವಿರುದ್ಧ ಅಕ್ರೋಶಗಳನ್ನು ವ್ಯಕ್ತಪಡಿಸುತ್ತಿವೆ ಇದನ್ನು ಅರ್ಥ ಮಾಡಿಕೊಂಡಿದ್ದರು ಕೂಡ ಮತ್ತೆ ಅಂತದ್ದೇ ಕೆಲಸವನ್ನು ಮಾಡುತ್ತಿವೆ.

ಓಮೈಕ್ರನ್ ಹೆಚ್ಚಾಗುತ್ತಿದೆ ಏನೋ ಆಗಿಬಿಡುತ್ತದೆ ಲಾಕ್‌ಡೌನ್ ಮಾಡಿಯೇ ಬಿಡುತ್ತದೆ ಸರ್ಕಾರ ಎಂದು ಬೊಬ್ಬೆ ಹೊಡೆಯುತ್ತಲೇ ಇರುವ ಚಾನಲ್‌ಗಳಿಗೆ ಇತ್ತೀಚೆಗೆ ಎನ್‌ಡಿಟಿಯಲ್ಲಿ ಡಾ ಸೌಮ್ಯ ಸ್ವಾಮಿನಾಥನ್ ಅವರ ಸಂದರ್ಶನವನ್ನು ವೀಕ್ಷಿಸಿದರೆ ಅರ್ಥವಾಗುತ್ತದೆ.

ಹೀಗೆ ಲಾಕ್ ಡೌನ್ ಪಕ್ಕಾ ಎಂದು ಒಂದು ಚಾನಲ್ ಬ್ರೇಕಿಂಗ್ ನ್ಯೂಸ್ ಬಿಟ್ಟಿದ್ದು ಬಿಟ್ಟಿದ್ದೇ ಇನ್ನೊಂದು ಚಾನಲ್ ರಾಜ್ಯದಲ್ಲಿ ಏನೋ ಆಗಿಯೇ ಬಿಟ್ಟಿತು ಜನರಿಗೆ ಉಳಿಗಾಲವಿಲ್ಲ ಎನ್ನುವ ಅರ್ಥದಲ್ಲಿ ಜನರನ್ನು ಭಯಪಡಿಸುತ್ತಿವೆ ಆದರೆ ಸರ್ಕಾರ ಈಗ ವಾರಾಂತ್ಯದ ಕರ್ಫ್ಯೂ ಜಾರಿ ಮಾಡಿದೆ . ಆದರೆ ಒಂದು ಚಾನಲ್ ಅಂತೂ ಇನ್ನೇನು ಲಾಕ್ ಡೌನ್ ಸರ್ಕಾರ ಮಾಡಿಯೇ ಬಿಡುತ್ತದೆ ಎಂದು ಬೊಬ್ಬೆ ಹೊಡೆದಿದ್ದು ಹೊಡೆದಿದ್ದು ಆದರೆ ಆಗಿದ್ದು ಏನು? ಹೀಗೆ




ಅನಾವಶ್ಯಕವಾಗಿ ಬ್ರೇಕಿಂಗ್ ಮಾಡುವ ಆತುರವಾದರೂ ಏನು? ನಿಮಗೇನಾದರೂ ಶಿಖರ ಕಟ್ಟಿಕೊಡುತ್ತಾರಾ.? ಅಥವಾ ಸರ್ಕಾರವೇನಾದರೂ ನಿಮಗೆ ಹೇಳಿತ್ತಾ? ನಾವು ಲಾಕ್ ಡೌನ್ ಮಾಡುತ್ತೇವೆ ಎಂದು ಇದೇ ರೀತಿಯ ಬ್ರೇಕ್ ಮಾಡುವ ಮೂಲಕ ಜನರನ್ನು ತಪ್ಪು ದಾರಿಗೆಳಿಯುವದಲ್ಲದೆ ಸರ್ಕಾರದ ಮೇಲೆ ಒತ್ತಡ ತರುವ ಪ್ರಯತ್ನಗಳು ನಡೆಯುತ್ತಿವೆ.

ಹೊಣೆಗಾರಿಕೆ ಎನ್ನುವ ಶಬ್ದವನ್ನೇ ಪತ್ರಕರ್ತರು ಮರೆತು ಬಿಟ್ಟಿದ್ದಾರೆ ನಾವು ಮಾಡುವುದೆಲ್ಲವೂ ಸರಿ ಎನ್ನುವ ಮಟ್ಟಕ್ಕೆ ಬಂದು ನಿಂತಿವೆ ಹಾಗಾಗಿಯೇ ಇಂದು ಪತ್ರಿಕೋದ್ಯಮ ಎನ್ನುವುದು ಬೀದಿಗೆ ಬಂದು ನಿಂತಿದೆ ನಮ್ಮನ್ನು ಹರಾಜಿಗೆ ಹಾಕುವ ಪರಸ್ಥಿತಿ ತಲೆದೋರಿದೆ..

ವೈಜ್ಞಾನಿಕವಾಗಿ ಈ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ನಂತರ ಬಾಯಿ ಬಡಿದುಕೊಳ್ಳಿ. ಅದನ್ನು ಬಿಟ್ಟು ಬಾಯಿಗೆ ಬಂದಂತೆ ಕೂಗುತ್ತಾ ಸರ್ಕಾರ ಮತ್ತು ಜನರನ್ನು ಕಂಗೆಡಿಸಬೇಡಿ. ನಿಮ್ಮ ಹೊಟ್ಟೆ ಪಾಡಿಗಾಗಿ, ಸರ್ಕಾರವನ್ನು ಇನ್ನೊಂದು ಲಾಕ್ ಡೌನ್ ಮಾಡುವಂತೆ ಪ್ರೇರೇಪಿಸಿ ಜನರ ಹೊಟ್ಟೆಯ ಮೆಲೆ ಹೊಡೆಯಬೇಡಿ. ನಿಮ್ಮ ಹೊಟ್ಟೆ ತುಂಬಿಸಿಕೊಳ್ಳಲು ಈ ರೀತಿ ಅವೈಜ್ಞಾನಿಕವಾಗಿ ಬಾಯಿ ಬಡಿದುಕೊಳ್ಳುತ್ತಾ ಜನಸಾಮಾನ್ಯರ ಹೊಟ್ಟೆ-ಬಟ್ಟೆ ಕಿತ್ತುಕೊಳ್ಳಬೇಡಿ.

ಒಮಿಕ್ರೊನ್ ವ್ಯಾಪಕವಾಗಿ ಹರಡುತ್ತದೆ . ಆದರೆ ಪ್ರಾಣಾಂತಿಕವಲ್ಲ. ಆಸ್ಪತ್ರೆಯ ಹೊರ ರೋಗಿಗಳ ವಿಭಾಗದಲ್ಲಿಯೇ ಅದಕ್ಕೆ ಚಿಕಿತ್ಸೆ ನೀಡಿ ಕಳುಹಿಸಬಹುದು. ಆ ನಿಟ್ಟಿನಲ್ಲಿ ತಯಾರಿ ಮಾಡಿಕೊಳ್ಳಿ. ಐಸಿಯು ಗಳ ಅಗತ್ಯ ಇರುವುದಿಲ್ಲ. ಈ ಮಾತು ದಕ್ಷಿಣ ಆಫ್ರಿಕಾದಲ್ಲಿ ಸಾಬೀತಾಗಿದೆ ಎನ್ನುವುದನ್ನು ಸೌಮ್ಯ ಸ್ವಾಮಿನಾಥನ್ ತಿಳಿಸಿದ್ದಾರೆ

ವಿಶ್ವ ಆರೋಗ್ಯ ಸಂಸ್ಥೆಯ ಡೆಪ್ಯುಟಿ ಡಿರೆಕ್ಟರ್ ಆದ ಸೌಮ್ಯ ಸ್ವಾಮಿನಾಥನ್ ಆರೇಳು ದಶಕಗಳ ಹಿಂದೆ ಭಾರತವನ್ನು 'ಹಸಿರು ಕ್ರಾಂತಿ'ಯ ಮೂಲಕ ಹಸಿವಿನಿಂದ ಕಾಪಾಡಿದ್ದ ತಮಿಳುನಾಡಿನ ಅಂತರ್ ರಾಷ್ಟ್ರೀಯ ವಿಜ್ಞಾನಿ ಡಾ.ಎಂ.ಎಸ್. ಸ್ವಾಮಿನಾಥನ್ ಅವರ ಪುತ್ರಿ ಸೌಮ್ಯ ಸ್ವಾಮಿನಾಥನ್. ಪ್ರಪಂಚದ ಒಬ್ಬ ಶ್ರೇಷ್ಠ ಆರೋಗ್ಯ ತಜ್ಞೆ ಮತ್ತು ವಿಜ್ಞಾನಿ ಕೂಡ ಈಗಲಾದರೂ ನಿಮ್ಮ ಮೊಂಡು ತನ ಬಿಟ್ಟು ಜನರನ್ನು ಹಾದಿ ತಪ್ಪಿಸುವ ಕೆಲಸ ಮಾಡಬೇಡಿ

# ರಾಮಮಂದಿರದ ಸುತ್ತ ರಿಯಲ್ ಎಸ್ಟೇಟ್ ದಂಧೆ



ದೆಹಲಿ ದೃಷ್ಟಿ



ಡಿ.ಉಮಾಪತಿ
ಹಿರಿಯ ಪತ್ರಕರ್ತರು

ಅಯೋಧ್ಯೆಯ ಬಾಬರಿ ಮಸೀದಿ–ರಾಮಜನ್ಮಭೂಮಿಯ 2.77 ಎಕರೆಗಳಷ್ಟು ವಿವಾದಿತ ಜಮೀನನ್ನು ರಾಮಮಂದಿರ ಕಟ್ಟಿಕೊಳ್ಳಲು ಸುಪ್ರೀಮ್ ಕೋರ್ಟು ಹಿಂದೂಗಳಿಗೆ ಒಪ್ಪಿಸಿತ್ತು. ಸುಪ್ರೀಮ್ ತೀರ್ಪಿನ ಅನ್ವಯ ರಚಿಸಲಾದ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ 2.77 ಎಕರೆಗಳ ಸುತ್ತಮುತ್ತ ಈವರೆಗೆ 70 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದೆ .ಈ ಎರಡು ವರ್ಷಗಳಲ್ಲಿ ಅಯೋಧ್ಯೆಯ ರಿಯಲ್ ಎಸ್ಟೇಟ್ ದಂಧೆ ಅತಿಶಯವಾಗಿ ಗರಿಗೆದರಿದೆ. ಭವ್ಯ ರಾಮಮಂದಿರದ ಸುತ್ತಮುತ್ತಲ ಜಮೀನಿನ ಖರೀದಿ ದರ ಆಕಾಶಕ್ಕೇರುವ ನಿರೀಕ್ಷೆ ಹೊಂದಿರುವ ಖಾಸಗಿ ಖರೀದಿದಾರರೂ ಈ ಜಮೀನಿಗೆ ಮುಗಿ ಬೀಳತೊಡಗಿದ್ದಾರೆ.

ಸ್ಥಳೀಯ ಶಾಸಕರು ಮತ್ತು ಅಯೋಧ್ಯೆಯ ಉನ್ನತ ಸರ್ಕಾರಿ ಅಧಿಕಾರಿಗಳ ಹತ್ತಿರದ ಸಂಬಂಧಿಕರು ಇಲ್ಲಿನ ಬಡ ದಲಿತರ ಜಮೀನು ಖರೀದಿ ಮಾಡಿರುವ ಪ್ರಕರಣಗಳು ಬೆಳಕಿಗೆ ಬಂದಿವೆ.



ರಾಮಮಂದಿರ ನಿವೇಶನದಿಂದ ಕೆಲವೇ ಕಿಲೋಮೀಟರುಗಳ ದೂರದ ಬರ್ಹಟ ಮಾಂಝಾ ಮತ್ತಿತರೆ ಗ್ರಾಮಗಳ ದಲಿತರಿಂದ 21 ಬಿಘಾಗಳಷ್ಟು (52,000 ಚದರ ಗಜಗಳು) ಜಮೀನನ್ನು 1990ರ ದಶಕಗಳಲ್ಲಿ ಮಹೇಶ್ ಯೋಗಿ ವಿದ್ಯಾಪೀಠ ಟ್ರಸ್ಟ್ ಖರೀದಿಸಿತ್ತು . 2016ರಲ್ಲಿ ಸಂಬಂಧಪಟ್ಟ ಕಾಯಿದೆ ತಿದ್ದುಪಡಿಗೆ ಮುನ್ನ ದಲಿತರು ತಮ್ಮ ಜಮೀನನ್ನು ದಲಿತೇತರರಿಗೆ ಮುಕ್ತವಾಗಿ ಪರಭಾರೆ ಮಾಡುವಂತಿರಲಿಲ್ಲ. ಆದರೆ ಮಹೇಶ್ ಯೋಗಿ ಟ್ರಸ್ಟ್ ಮೋಸ ಮರೆಯಿಂದ ಹತ್ತು ಹನ್ನೆರಡು ಮಂದಿ ದಲಿತರಿಂದ ಜಮೀನು ಖರೀದಿಸಿತ್ತು. ತನ್ನ ದಲಿತ ಉದ್ಯೋಗಿ ರೊಂಘೈ ಹೆಸರಿನಲ್ಲಿ ನೋಂದಣಿ ಮಾಡಿಕೊಂಡಿತ್ತು. ಈ ಜಮೀನನ್ನು ರೊಂಘೈನಿಂದ 1996ರಲ್ಲಿ ದಾನವಾಗಿ ಬರೆಯಿಸಿಕೊಂಡಿತ್ತು. ಕೇವಲ 6.38 ಲಕ್ಷ ರುಪಾಯಿಗೆ ದಲಿತರಿಂದ ದಕ್ಕಿಸಿಕೊಂಡಿದ್ದ ಈ ಜಮೀನಿನ ಇಂದಿನ ಮಾರುಕಟ್ಟೆ ಬೆಲೆ ಕೋಟ್ಯಂತರ ರುಪಾಯಿಗಳು. ಮಹಾದೇವನೆಂಬ ದಲಿತನಿಂದ ಬರೆಯಿಸಿಕೊಂಡಿದ್ದ ಮೂರು ಬಿಘಾಗಳಷ್ಟು ಜಮೀನಿಗೆ ಟ್ರಸ್ಟ್ ಅಂದು ನೀಡಿದ್ದ ಮೊತ್ತ 1.02 ಲಕ್ಷ ರುಪಾಯಿ. ಉತ್ತರಪ್ರದೇಶದಲ್ಲಿ ಒಂದು ಎಕರೆ ಜಮೀನು ಅಂದಾಜು ಒಂದೂವರೆ ಎಕರೆ ಬಿಘಾಕ್ಕೆ ಸಮ. ಹೀಗೆ ದಲಿತರಿಂದ ಪಡೆದ ಜಮೀನನ್ನು ಮಹೇಶ್ ಯೋಗಿ ಟ್ರಸ್ಟ್ ತನಗೆ ಬೇಕಾದವರಿಗೆ ಮಾರಾಟ ಮಾಡಲಾರಂಭಿಸಿತು. ತನ್ನ ಜಮೀನನ್ನು ಅಕ್ರಮವಾಗಿ ವರ್ಗ ಮಾಡಿಸಿಕೊಳ್ಳಲಾಗಿದೆ ಎಂದು ದಲಿತ ಮಹಾದೇವ ರೆವಿನ್ಯೂ ಮಂಡಳಿಗೆ ದೂರು ನೀಡಿದ. ಪರಿಣಾಮವಾಗಿ ಜರುಗಿದ ತನಿಖೆಯ ವರದಿಯು ಅಕ್ರಮ ವರ್ಗಾವಣೆಯಯ ದೂರನ್ನು ಎತ್ತಿ ಹಿಡಿದು ಸಂಬಂಧಪಟ್ಟ ಸರ್ಕಾರಿ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವಂತೆ ಶಿಫಾರಸು ಮಾಡಿತು. ಈ ಶಿಫಾರಸನ್ನು ಅನುಮೋದಿಸಿದ ಅಯೋಧ್ಯಾ ವಿಭಾಗಾಧಿಕಾರಿ ಎಂ.ಪಿ.ಅಗರವಾಲ್ ಸಂಬಂಧಿಕರು ಮಹೇಶ್ ಯೋಗಿ ಟ್ರಸ್ಟ್ ನಿಂದ ನಿವೇಶನಗಳನ್ನು ಪಡೆದಿದ್ದಾರೆ. ಅಗರವಾಲ್ ಅವರ ಪತ್ನಿಯ ತಂದೆ ಮತ್ತು ಪತ್ನಿಯ ಸೋದರರಿಬ್ಬರೂ ತಲಾ ಎರಡೂವರೆ ಸಾವಿರ ಮತ್ತು 1,260 ಚದರ ಗಜಗಳ ಅಳತೆಯ ನಿವೇಶನಗಳನ್ನು2020ರ ಡಿಸೆಂಬರಿನಲ್ಲಿ ಗಿಟ್ಟಿಸಿದ್ದಾರೆ. ಇದೇ ಟ್ರಸ್ಟಿನಿಂದ ಮುಖ್ಯ ಕಂದಾಯ ಅಧಿಕಾರಿ ಪುರುಷೋತ್ತಮ ದಾಸ್ ಗುಪ್ತಾ ಮತ್ತು ಡಿ.ಐ.ಜಿ. ದೀಪಕ್ ಕುಮಾರ್ ಅವರ ಸಮೀಪದ ಸಂಬಂಧಿಕರು 1,130 ಚದರ ಗಜ ಮತ್ತು 1, 020 ಚದರ ಗಜಗಳ ವಿಸ್ತೀರ್ಣದ ನಿವೇಶನಗಳನ್ನು ಬರ್ಹಾಟ ಮಾಂಝಾ ಗ್ರಾಮದಲ್ಲಿ ಖರೀದಿಸಿದ್ದಾರೆ. ಅಯೋಧ್ಯೆಯ ಜಿಲ್ಲಾಧಿಕಾರಿಯ ತಂದೆ ಕೂಡ ಭವ್ಯ ರಾಮಮಂದಿರದಿಂದ ಒಂದು ಕಿ.ಮೀ. ಫಾಸಲೆಯಲ್ಲಿ ಮಹೇಶ್ ಯೋಗಿ ಟ್ರಸ್ಟ್ ನಿಂದ ನಿವೇಶನ ಖರೀದಿಸಿದ್ದಾರೆ.

ಉಳಿದಂತೆ ಅಯೋಧ್ಯಾ ಜಿಲ್ಲೆಯ ಗೋಸಾಯಿಗಂಜ್ ಬಿಜೆಪಿ ಶಾಸಕ ಇಂದ್ರಪ್ರತಾಪ ತಿವಾರಿ 2019ರ ನವೆಂಬರಿನಲ್ಲಿ 2,593 ಚದರ ಗಜ, ನಿವೃತ್ತ ಐ.ಎಸ್. ಅಧಿಕಾರಿ ಉಮಾಧರ ದ್ವಿವೇದಿ ಅವರು 2021ರ ಅಕ್ಟೋಬರಿನಲ್ಲಿ 1,680 ಚದರ ಗಜಗಳ ಅಳತೆಯ ನಿವೇಶನಗಳ ಖರೀದಿಸಿದ್ದಾರೆ.

ಈ ಅಧಿಕಾರಿಗಳು ಮತ್ತು ಅವರ ಸಂಬಂಧಿಕರು ಖರೀದಿಸಿರುವ ನಿವೇಶನಗಳು ವಿವಾದಗ್ರಸ್ತ ದಲಿತ ಜಮೀನಿಗೆ ಸೇರಿಲ್ಲ. ಆದರೆ ದಲಿತರಿಂದ ಅಕ್ರಮವಾಗಿ ಜಮೀನು ಖರೀದಿಸಿದ್ದ ತಪ್ಪಿಗಾಗಿ ಮಹೇಶ್ ಯೋಗಿ ಟ್ರಸ್ಟ್ ಕಟಕಟೆಯಲ್ಲಿ ನಿಂತಿದೆ. ತನಿಖೆಗೆ ಗುರಿಯಾಗಿದೆ. ಅಂತಹ ಟ್ರಸ್ಟಿನಿಂದ ಹಾಲಿ ಅಧಿಕಾರಿಗಳು, ಅವರ ಆಪ್ತಸಂಬಂಧಿಕರು, ನಿವೃತ್ತ ಅಧಿಕಾರಿಗಳು ನಿವೇಶ ಖರೀದಿಸಿರುವುದು ಔಚಿತ್ಯಪೂರ್ಣ ಎನಿಸಿಕೊಳ್ಳುವುದಿಲ್ಲ . ಈ ನಿವೇಶನಗಳು ತಾನು ಆಪಾದನೆಯಿಂದ ಪಾರಾಗಲೆಂದು ಟ್ರಸ್ಟ್ ನೀಡುತ್ತಿರುವ 'ಲಂಚ' ಎನಿಸಿಕೊಳ್ಳುತ್ತವೆ. ಖರೀದಿ ಮಾಡಿರುವವರು ಟ್ರಸ್ಟ್ ನ್ನು ಕಾನೂನು ಕ್ರಮದ ಕುಣಿಕೆಯಿಂದ ಬಚಾವು ಮಾಡುವುದಿಲ್ಲವೆಂಬ ಖಾತರಿಯೇನು?

ದಲಿತರ ಜಮೀನನ್ನು ಲಪಟಾಯಿಸಲು ಟ್ರಸ್ಟ್ ಗಾಳವಾಗಿ ಬಳಸಿಕೊಂಡ ದಲಿತ ರೊಂಘೈ ಮತ್ತು ಅವನ ಕುಟುಂಬ ಅಯೋಧ್ಯೆಯಿಂದ ದೂರ ದೂರದಲ್ಲಿ ವಾಸಿಸಿದೆ.

ಭರತ ಭೂಮಿಯ ದಲಿತರು ಸಾವಿರಾರು ವರ್ಷಗಳಿಂದ ಜಮೀನುವಂಚಿತರು. ಜಾತಿವ್ಯವಸ್ಥೆಯು ಅವರಿಗೆ ಜಮೀನಿನ ಒಡೆತನವನ್ನು ನಿರಾಕರಿಸಿತ್ತು. ಭೂಹೀನ ಸ್ಥಿತಿಯು ಬಲಿಷ್ಠ ಜಾತಿಗಳ ಗುಲಾಮಗಿರಿಗೆ ಅವರನ್ನು ನೂಕಿದೆ.

2011ರ ಜನಗಣತಿಯ ಪ್ರಕಾರ ದೇಶದ ಶೇ.71ರಷ್ಟು ದಲಿತರು ಕೃಷಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ, ಬಳಿ ಸ್ವಂತ ಜಮೀನಿಲ್ಲ. ಕೆಲವು ರ‍್ಯಾಗಳಲ್ಲಿ ಈ ಪ್ರಮಾಣ ಶೇ.90ರಷ್ಟು.

ಸ್ವಾತಂತ್ರ್ಯ ಬಂದು ಏಳು ದಶಕಗಳೇ ಉರುಳಿದ್ದರೂ ಭೂಮಿಯ ಕ್ರಮಬದ್ಧ ಮರುಹಂಚಿಕೆ ನಡೆದೇ ಇಲ್ಲ. ಒಂದು ಅಧ್ಯಯನದ ಪ್ರಕಾರ ಏಳು ಹೆಕ್ಟೇರುಗಳ ಭೂಒಡೆತನ ಮಿತಿ ಹೇರಿದರೆ ಮರು ಹಂಚಿಕೆಗೆ ಲಭಿಸುವ ಹೆಚ್ಚುವರಿ ಭೂಮಿ 75 ಲಕ್ಷ ಹೆಕ್ಟೇರುಗಳು.

ಭೂಒಡೆತನವು ಆತ್ಮಗೌರವದ ಮೂಲ ಎಂಬುದು ಗ್ರಾಮೀಣ ಭಾರತದ ವಾಸ್ತವ. ಹೀಗಾಗಿ ಭೂಸುಧಾರಣೆಯು ಸಾಮಾಜಿಕ ನ್ಯಾಯದ ಬಹುಮುಖ್ಯ ಭಾಗ. ಭಾರತದ ದಮನಿತ ಸಮುದಾಯಗಳ ಘನತೆಯೊಂದಿಗೆ ಬೆಸೆದುಕೊಂಡಿರುವ ಪರಿಹಾರ.

ಹಿಂದೀಯ ಬಹುಮುಖ್ಯ ಕವಿಗಳಲ್ಲಿ ಒಬ್ಬರಾದ ಜ್ಞಾನಪೀಠ ಪ್ರಶಸ್ತಿ ವಿಜೇತ ಕುಂವರ ನಾರಾಯಣ ಅವರ 'ಅಯೋಧ್ಯೆ' ಕವಿತೆ ನೆನಪಾಗುತ್ತಿದೆ–

ಹೇ ರಾಮ,
ಬದುಕು ಒಂದು ಕಟು ಯಥಾರ್ಥ
ಮತ್ತು ನೀನೊಂದು ಮಹಾಕಾವ್ಯ!

ನಿನ್ನ ಕೈಯಿಂದಾಗದು
ಆ ಅವಿವೇಕವನ್ನು ಗೆಲ್ಲುವುದು
ಹತ್ತು ಇಪ್ಪತ್ತಲ್ಲ, ಅದಕ್ಕೆ
ಈಗ ಲಕ್ಷ ತಲೆಗಳು– ಲಕ್ಷಾಂತರ ಹಸ್ತಗಳು
ಮತ್ತು ವಿಭೀಷಣ ಕೂಡ ಈಗ
ಯಾರ ಜೊತೆಗಿರುವನೋ ತಿಳಿಯದು.


ಇದಕ್ಕಿಂತ ಇನ್ನೇನಾಗಬೇಕು.
ನಮ್ಮ ದೌರ್ಭಾಗ್ಯ
ಒಂದು ವಿವಾದಿತ ಸ್ಥಳಕ್ಕೆ ಕುಗ್ಗಿ
ಕುಸಿಯಿತಲ್ಲ ನಿನ್ನ ಸಾಮ್ರಾಜ್ಯ

ಅಯೋಧ್ಯೆ ಈಗ ನಿನ್ನ ಆಯೋಧ್ಯೆ ಅಲ್ಲ
ಅದು ಯೋಧರ ಲಂಕೆ
'ಮಾನಸ' ನಿನ್ನ 'ಚರಿತೆ' ಅಲ್ಲ
ಅದು ಚುನಾವಣೆಯ ನಗಾರಿ!

ಹೇ ರಾಮ, ಈ ಯುಗವೆಲ್ಲಿ
ಎಲ್ಲಿ ನಿನ್ನ ತ್ರೇತಾಯುಗ,
ಎಲ್ಲಿ ನೀನು ಮರ್ಯಾದಾ ಪುರುಷೋತ್ತಮ
ಎಲ್ಲಿ ಈ ನೇತಾ ಯುಗ!

ಸವಿನಯ ನಿವೇದನೆ ಪ್ರಭೂ, ವಾಪಸು ಹೋಗಿಬಿಡು
ಯಾವುದಾದರೂ ಪುರಾಣ– ಮತ್ಯಾವುದೋ
ಧರ್ಮಗ್ರಂಥದೊಳಕ್ಕೆ ಸಕುಶಲ ಸಪತ್ನೀಕ....
ವಾಲ್ಮೀಕಿ ಅಲೆದಾಡಿದ ಆ ಅಡವಿಯಲ್ಲ!
ಈಗಿನ ಅಡವಿ





## ಇನ್ನೂ 'ಜಲಯುದ್ಧ'ವೇ ಪಕ್ಷಗಳ ಅಜೆಂಡಾ

# ಕೈ ಪಾದಯಾತ್ರೆಗೆ ಕಮಲ ಬಿಟ್ಟ ಬಾಣ




● ತುರುವನೂರು ಮಂಜುನಾಥ

ರಾಜಕಾರಣ ಹೇಗಿರುತ್ತದೆ ಎನ್ನುವುದಕ್ಕೆ ಇದೊಂದು ತಾಜಾ ಉದಾಹರಣೆ. ರಾಜ್ಯದಲ್ಲಿ ಸೆಮಿ ಲಾಕ್‌ಡೌನ್ ಮಾಡುವ ಹಂತವಂತೂ ತಲುಪಿದ್ದಿಲ್ಲ ಆದರೆ ಕೊರೊನಾ ಕುರಿತು ಎಚ್ಚರಿಕೆ ಕಠಿಣ ಕ್ರಮಗಳ ಅಗತ್ಯವಿತ್ತು ಎನ್ನುವುದರಲ್ಲಿ ಎರಡು ಮಾತಿಲ್ಲ ಅದರಲ್ಲೂ ವೀಕೆಂಡ್ ಕರ್ಫ್ಯೂ ಮಾಡುವುದರಿಂದಲೂ ಯಾವುದೆ ಪ್ರಯೋಜನವಂತೂ ಇಲ್ಲ ಇಡೀ ವಾರ ಓಡಾಡಿ ವಾರವೊಂದು ಮನೆಯಲ್ಲಿ ಕೂತರೆ ಕೊರೊನಾ ಬರುವುದಿಲ್ಲ ಎನ್ನುವುದರಲ್ಲಿ ಉರುಳಿಲ್ಲ ಆದರೆ ಇಲ್ಲೊಂದು ರಾಜಕಾರಣದ ವಾಸನೆ ಎದ್ದು ಕಾಣುತ್ತಿದೆ..

ಹೌದು ಈಗ ಮೇಕೆ ದಾಟು ಯೋಜನೆ ಜಾರಿ ಕುರಿತು ಕಾಂಗ್ರೆಸ್ ಹಮ್ಮಿಕೊಂಡಿರುವ ಈ ಪಾದಯಾತ್ರೆಯಿಂದ ಸಹಜವಾಗಿಯೇ ಕಾಂಗ್ರೆಸ್ ಬಗ್ಗೆ ಜನರಿಗೆ ಅನುಕಂಪ ಮೂಡುವುದು ಸಹಜವೆ, ಇದರಿಂದ ಆಡಳಿತ ಬಿಜೆಪಿಗೆ ಒಂದು ರೀತಿ ಮುಜುಗರ ಮತ್ತು ಮುಂದಿನ ಚುನಾವಣೆ ಮೇಲೆ ಪ್ರಭಾವ ಬೀರುವುದು ಕೂಡ ಸತ್ಯ. ಇದನ್ನು ಅರಿತ ಸರ್ಕಾರ ಏನು ಮಾಡಬಹುದು ಎನ್ನುವ ಯೋಚನೆಯಲ್ಲಿರುವಾಗಲೇ ದಿನ ನಿತ್ಯ ಕೊರೊನ ಪ್ರಕರಣಗಳು ಏರುಗತಿಯಲ್ಲಾದಾಗ ಕೇಂದ್ರ ಸರ್ಕಾರವೂ ಕೂಡ ಕೆಲವೊಂದು ಟಫ್ ರೂಲ್ಸ್ ಮಡಲು ಆದೇಶ ಮಾಡಿದ ಹಿನ್ನೆಲೆಯಲ್ಲಿ ಸಿಕ್ಕ ಮಾನದಂಡವೇ ಈ ಸೆಮಿ ಲಾಕ್ ಡೌನ್ .ಇದರಿಂದ ಕಾಂಗ್ರೆಸ್ ಪಾದಯಾತ್ರೆಯನ್ನು ಕಟ್ಟಿಹಾಕಲು ಸಾಧ್ಯ ಎನ್ನುವುದನ್ನು ಅರಿತು ಮಾಡಿದ ಈ ವಾರಾಂತ್ಯದ ಕರ್ಫ್ಯೂ ಎನ್ನುವುದರಲ್ಲಿ ಯಾವುದೆ ಅನುಮಾನವಿಲ್ಲ.

ಇದಕ್ಕೆ ಮೂಲ ಕಾರಣ ಕಾಂಗ್ರೆಸ್ ಪ್ರಬಲ ನಾಯಕರೊಬ್ಬರು ಹಾಕಿಕೊಟ್ಟ ಯೋಜನೆ ಕೂಡ . ಯಾಕೆಂದರೆ ಡಿಕೆಶಿ ಈ ಪಾದಾಯಾತ್ರೆಯಿಂದ ಒಂದು ವೇಳೆ ಸಕ್ಸೆಸ್ ಆದರ ಮುಂದಿನ ಸಿಎಂ ಆಗಲೇ ಬೇಕು ಎಂದು ಅಂದುಕೊಂಡವರಿಗೆ ಇದು ಅಡ್ಡಿಯಾಗಬಲ್ಲದು ಎನ್ನುವುದು ಒಂದು ಸಣ್ಣ ಸುಳಿವು ಆ ಕಾರಣಕ್ಕಾಗಿ ತಾವೇ ರೂಪಿಸಿಕೊಟ್ಟ ಈ ಯೋಜನೆ ಈಗ ಬಿಜೆಪಿ ಸರ್ಕಾರ ಯಾವುದೇ ರ್‍ಯಾಲಿ, ಪ್ರತಿಭಟನೆ ಮಾಡುವಂತಿಲ್ಲ ಎನ್ನುವ ಆದೇಶವನ್ನು ಹೊರಡಿಸಿದೆ ಸಹಜವಾಗಿಯೇ ಇದು ಈಗ ಈ ಪಾದಯಾತ್ರೆಗೆ ಅಡ್ಡಿಯಾಗುವುದು ನಿಶ್ಚಿತ ಆದರೆ ಡಿಕೆಶಿವಕುಮಾರ್ ಮಾತ್ರ ನಾವು ಪಾದಯಾತ್ರೆ ಮಾಡಿಯೇ ತೀರುತ್ತೇವೆ ಎಂದು ನಿರ್ಧರಿಸಿದ್ದಾರೆ ಮುಂದೆ ಏನಾಗುತ್ತದೆ ಎನ್ನುವುದು ಈಗ ಕುತೂಹಲ ಮೂಡಿಸಿದೆ.

### ಪಾದಯಾತ್ರೆಗಳ ಇತಿಹಾಸ

ಪ್ರತಿಪಕ್ಷಗಳಾದ ಪಕ್ಷಗಳಿಗೆ ಮುಂದಿನ ಅಧಿಕಾರಕ್ಕೆ ಬರಲು ಆಡಳಿತ ಪಕ್ಷಗಳ ವೈಫಲ್ಯಗಳನ್ನಿಟ್ಟುಕೊಂಡು ರ್‍ಯಾಲಿ ಕಾಲ್ನೆಡಿಗೆ ಮಾಡುವುದು ಒಂದು ವಾಡಿಕೆಯಾಗಿದೆ ಹಾಗೆ ಯಾರ ನೇತೃತ್ವದಲ್ಲಿ ನಡೆಯುತ್ತದೆ ಅವರು ಸಿಎಂ ಆಗುತ್ತಾರೆ ಎನ್ನುವುದು ಒಂದು ಪ್ರತೀತಿ ಇದೆ ಅದು ಕಾಂಗ್ರೆಸ್ ಪಾಲಿಗೆ ನಿಜವೂ ಆಗಿದೆ ..ಹಾಗಾಗಿಯೇ ಈಗ ಡಿ.ಕೆ.ಶಿವಕುಮಾರ್ ತಮ್ಮ ನೇತೃತ್ವದಲ್ಲಿ ಪಾದಯಾತ್ರೆ ಮಾಡಿದರೆ ಮುಂದಿನ ಸಿಎಂ ಆಗುವುದು ಜನಜನಿತ ಎನ್ನುವ ಕಾರಣಕ್ಕೆ ಅತ್ಯಂತ ಹುಮ್ಮಸ್ಸಿನಲ್ಲಿ ಪಾದೆಯಾತ್ರೆಯನ್ನು ಹಮ್ಮಿಕೊಂಡು ಹಗಲು-ರಾತ್ರಿ ಎನ್ನದೆ ಊರೂರು ತಿರುಗುತ್ತಿದ್ದಾರೆ.

ಇದಕ್ಕೆ ಉದಾಹರಣೆ ಎನ್ನುವಂತೆ1999ರಲ್ಲಿ ಕೆಪಿಸಿಸಿ ಅಧ್ಯಕ್ಷರಾಗಿದ್ದ ಎಸ್.ಕೃಷ್ಣ ಅವರು ಪಾಂಚಜನ್ಯ ಯಾತ್ರೆ ಕೈಗೊಂಡಿದ್ದರು ಆಗ ಅವರಿಗೆ ಅಭೂತಪೂರ್ವ ಯಶಸ್ಸು ಸಿಕ್ಕಿತ್ತು ಆ ಕಾರಣದಿಂದಲೇ ಅವರು ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ನಂತರ ಅವರು ಸಿಎಂ ಆಗಿ ಅಧಿಕಾರ ವಹಿಸಿಕೊಂಡರು. ಇದಾದ ನಂತರ 2013ರಲ್ಲಿ ಬಿಜೆಪಿ ಸರ್ಕಾರ ಇದ್ದ ಸಂದರ್ಭದಲ್ಲಿ ಸದನದಲ್ಲಿ ಗಣಿ ದಣಿ ಜನಾರ್ಧನ ರೆಡ್ಡಿ ನಡುವೆ ಆದ ಸಂಘರ್ಷದಲ್ಲಿ ತೊಡೆ ತೊಟ್ಟು ಬಳ್ಳಾರಿಯವರೆಗೂ ಪಾದಯಾತ್ರೆ ಮಾಡುವ ಮೂಲಕ ಅಕ್ರಮ ಗಣಿಗಾರಿಕೆ ಬಗ್ಗೆ ಜನರಿಗೆ ಅರಿವು ಮೂಡಿಸುತ್ತೇವೆ ಎಂದು ಪಣ ತೊಟ್ಟು ಬೆಂಗಳೂರಿನಿಂದ ಬಳ್ಳಾರಿಯವರೆಗೂ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಪಾದಾಯಾತ್ರೆ ಮಾಡಲಾಗಿತ್ತು ಆಗಲೂ ಅವರಿಗೆ ಅಭೂತಪೂರ್ವ ಯಶಸ್ಸು ಸಿಕ್ಕಿತ್ತು ಅದರ ಫಲವಾಗಿಯೇ ಸಿದ್ದರಾಮಯ್ಯ ಸಿಎಂ ಆಗಿ ಅಧಿಕಾರ ವಹಿಸಿಕೊಂಡರು ಆದರೆ ಈಗ ಮತ್ತೇ ಬಿಜೆಪಿ ಸರ್ಕಾರ ಇದೆ ಈ ವೇಳೆಯೂ ಬಿಜೆಪಿಯ ವೈಫಲ್ಯ ಕುರಿತು ಆಗಾಗ ಧ್ವನಿ ಎತ್ತು ಸಿದ್ದರಾಮಯ್ಯ ಮುಂದೆ ಸಿಎಂ ಆಗಬಹುದು ಎನ್ನುವ ಕಾರಣಕ್ಕೆ ಅದನ್ನು ತಪ್ಪಿಸುವ ಕಾರಣಕ್ಕೆ ಬಲವಾದ ಕಾರಣವನ್ನಿಟ್ಟುಕೊಂಡು ಡಿ.ಕೆ.ಶಿವಕುಮಾರ್ ಅವರು ಮೇಕೆದಾಟು ಯೋಜನೆ ಜಾರಿಗೆ ಒತ್ತಾಯಿಸಿ ಪಾದಾಯಾತ್ರೆ ಕೈಗೊಂಡಿದ್ದಾರೆ ಈಗಾಗಲೇ ಅದರ ಎಲ್ಲಾ ಸಿದ್ದತೆಗಳು ಆಗಿವೆ ಈ ಯಾತ್ರೆ ಯಶಸ್ವಿಯಾದರೆ ತಾವು ಸಿಎಂ ಆಗಬಹುದು ಎನ್ನುವ ಆಸೆಯಲ್ಲಿ ಈ ಯಾತ್ರೆ ಕೈಗೊಂಡಿದ್ದಾರೆ

2018ರ ಚುನಾವಣೆಯ ಕೋಮುವಾದ ಮತ್ತು ಭ್ರಷ್ಟಾಚಾರದ ವಿಷಯಗಳಿರಬಹುದು, ಪ್ರತ್ಯೇಕ ಲಿಂಗಾಯತ ಧರ್ಮವಿರಬಹುದು,.. ಪ್ರತಿ ಚುನಾವಣೆಯಲ್ಲೂ ಮಣ್ಣು, ಹೊನ್ನು ಮತ್ತು ಧರ್ಮ-ದೇವರುಗಳೇ ರಾಜಕೀಯ ಪಕ್ಷಗಳ ನಡುವಿನ ವಾಕ್ಸಮರದ ವಿಷಯಗಳಾಗಿದ್ದವು.

ಆದರೆ, ಮುಂದಿನ 2023 ರ ಚುನಾವಣೆ ಮಣ್ಣು, ಹೊನ್ನು, ದೇವರ ಬದಲಿಗೆ ನೀರಿನ ಮೇಲೆ ನಡೆಯುವ ಯುದ್ಧವಾಗಿದೆ. ಏಕೆಂದರೆ ಪ್ರತಿಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳೆರಡೂ ಆಡಳಿತರೂಢ ಬಿಜೆಪಿಯ ವಿರುದ್ಧ ಜಲಾಸ್ತ್ರ ಪ್ರಯೋಗಕ್ಕೆ ಸಜ್ಜಾಗಿವೆ! ಕಾಂಗ್ರೆಸ್ಸಿನ ಬಹುಚರ್ಚಿತ 'ಮೇಕೆದಾಟು ಪಾದಯಾತ್ರೆ' ಹಾಗೂ ಅದಕ್ಕೆ ಪ್ರತಿಯಾಗಿ ಜೆಡಿಎಸ್ ಹಮ್ಮಿಕೊಂಡಿರುವ 'ಜಲಧಾರೆ ಯಾತ್ರೆ'ಗಳು ಈಗಾಗಲೇ ಮುಂದಿನ ಚುನಾವಣೆಯ ಅಜೆಂಡಾ ಸೆಟ್ ಮಾಡುವ ದಿಕ್ಕಿನಲ್ಲಿ ಬಹುತೇಕ ಯಶಸ್ವಿಯಾಗಿವೆ. ಹಾಗಾಗಿ ಮುಂದಿನ ಚುನಾವಣೆ ರಾಜ್ಯದ ಮಟ್ಟಿಗಂತೂ ಮೂರೂ ಪಕ್ಷಗಳ ನಡುವಿನ 'ಜಲ ಯುದ್ಧ'ಗಳೇ ಚುನಾವಣೆ ಅಸ್ತ್ರವಾಗಲಿವೆ. ಆದರೆ, ಚುನಾವಣೆಗೆ ಇನ್ನೂ ಒಂದೂವರೆ ವರ್ಷ ಬಾಕಿ ಇದೆ. ಈ ನಡುವೆ ಈ ಜಲ ಸಮರ ರಾಜ್ಯದ ರಾಜಕಾರಣದಲ್ಲಿ ಏನೆಲ್ಲಾ ಸದ್ದು ಮಾಡಬಹುದು? ಯಾವೆಲ್ಲಾ ಪಕ್ಷದಲ್ಲಿ ಯಾವ ಅಲೆಗಳನ್ನು ಸೃಷ್ಟಿಸಬಹುದು? ಆ ಅಲೆಗಳನ್ನು ಯಾರನ್ನೆಲ್ಲಾ ಕೊಚ್ಚಿಕೊಂಡು ಹೋಗಬಹುದು ? ಎಂಬ ಚರ್ಚೆಗಳು ಈಗಾಗಲೇ ಆರಂಭವಾಗಿವೆ. ವಾಸ್ತವವಾಗಿ 2023ರ ಚುನಾವಣೆಯ ಅಖಾಡದಲ್ಲಿ ಈ ಜಲ ಯುದ್ಧದ ಪರಿಣಾಮಗಳಿಗಿಂತ ಹೆಚ್ಚು ಕುತೂಹಲ ಮೂಡಿಸಿರುವುದು ಈ ನಡುವಿನ ಅವಧಿಯಲ್ಲಿ ಅದು ಎಬ್ಬಿಸಬಹುದಾದ ಅಲೆಗಳು ಮತ್ತು ಆ ಅಲೆಗಳು ಕೊಚ್ಚಿ ಒಯ್ಯಬಹುದಾದ ರಾಜಕೀಯ ಮಹತ್ವಾಕಾಂಕ್ಷೆಗಳೇ ಹೆಚ್ಚು ಕುತೂಹಲ ಕೆರಳಿಸಿವೆ.

### ಏನೇ ಆಗಲಿ ಪಾದಯಾತ್ರೆ ಯಶಸ್ವಿಯಾಗಬೇಕಷ್ಟೆ.

ರಾಜ್ಯದಲ್ಲಿ ಕೊರೊನಾ ಮತ್ತು ಓಮಿಕ್ರಾನ್ ಸಂಕಷ್ಟ ಹೆಚ್ಚಾಗಿದೆ ದಿನ ದಿನಕ್ಕೆ ಅದರ ತೀವ್ರತೆ ಹೆಚ್ಚಾಗುತ್ತಿದೆ ಈಗಾಗಲೇ ಕಠಿಣ ಕ್ರಮಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ ಹೆಚ್ಚು ಜನ ಸೇರಬಾರದು ಎನ್ನುವ ಆದೇಶವನ್ನೂ ಸರ್ಕಾರ ಹೊರಡಿಸಿದೆ ಈ ನಡುವೆಯೂ ನಾವು ಈ ಯಾತ್ರೆಯನ್ನು ಮಾಡಿಯೇ ತೀರುತ್ತೇವೆ ಎಂದು ದೃಡ ನಿರ್ಧಾರ ಕೈಗೊಂಡಿದೆ ಇದಕ್ಕೆ ಬೇಕಾದ ಎಲ್ಲಾ ಪೂರ್ವ ಸಿದ್ದತೆಗಳನ್ನು ಮಾಡಿಕೊಳ್ಳಲಾಗಿದೆ . ಆದರೆ ಈ ಪಾದಯಾತ್ರೆಯಿಂದ ಮೇಕೆದಾಟು ಯೋಜನೆ ಅನುಷ್ಠಾನವಾಗುತ್ತೋ ಇಲ್ಲವೋ? ಅದು ಮುಖ್ಯವಲ್ಲ. ಇಲ್ಲಿ ಕಾಂಗ್ರೆಸ್ ಪಾದಯಾತ್ರೆ ಯಶಸ್ವಿಯಾಗಬೇಕು ಅದಷ್ಟೇ 'ಕೈ' ನಾಯಕರಿಗೆ ಪ್ರಮುಖವಾಗಿದೆ. ವರ್ಷದ ಮೊದಲೇ ಬೃಹತ್ ಪಾದಯಾತ್ರೆ ಮೂಲಕ ಆಡಳಿತರೂಢ ಬಿಜೆಪಿಗೆ ಎಚ್ಚರಿಕೆಯ ಸಂದೇಶವೊಂದನ್ನು ರವಾನಿಸುವ ಆತುರದಲ್ಲಿರುವುದು ಎದ್ದು ಕಾಣುತ್ತಿದೆ. ಐದು ಜಿಲ್ಲೆಗಳ ಕುಡಿಯುವ ನೀರಿನ ಪ್ರಶ್ನೆಯಾದ ಈ ಮುಂದಿನ ಚುನಾವಣೆಯವರೆಗೆ ಜೀವಂತವಾಗಿಟ್ಟು, ಹಳೇ ಮೈಸೂರು ಭಾಗದಲ್ಲಿ ಕಾಂಗ್ರೆಸ್ ಪಕ್ಷದ ಪ್ರಭಾವ ವೃದ್ಧಿಸಲು ಈ ಪಾದಯಾತ್ರೆಯನ್ನು ಊರುಗೋಲಾಗಿ ಬಳಸಿಕೊಳ್ಳುವುದು ಡಿ ಕೆ ಶಿವಕುಮಾರ್ ಲೆಕ್ಕಾಚಾರ ಎಂಬುದು ಸಾಮಾನ್ಯವಾಗಿ ಕೇಳಿಬರುತ್ತಿರುವ ಮಾತು. ಹಳೇ ಮೈಸೂರು ಭಾಗದಲ್ಲಿ ಪ್ರಾಬಲ್ಯ ಹೊಂದಿರುವ ಜೆಡಿಎಸ್ ಬಲಗುಂದಿಸುವ ಮೂಲಕ ಕಾಂಗ್ರೆಸ್ ಗೆ ಶಕ್ತಿ ತುಂಬುವ ನಿಟ್ಟಿನಲ್ಲಿ ಈ ಮೇಕೆದಾಟು ಪಾದಯಾತ್ರೆ ಸಫಲವಾಗಲೂಬಹುದು. ಮುಂದಿನ ಬಾರಿ ಅಧಿಕಾರ ಹಿಡಿಯಲು ಹಳೇಮೈಸೂರು ಭಾಗದಲ್ಲಿ ಹೆಚ್ಚಿನ ಸ್ಥಾನ ಗಳಿಸುವುದು ಕಾಂಗ್ರೆಸ್ಸಿಗೆ ಅನಿವಾರ್ಯ ಎಂಬ ಹಿನ್ನೆಲೆಯಲ್ಲಿ ಪಾದಯಾತ್ರೆಯ ಮಹತ್ವ ಅರಿವಾಗದೇ ಇರದು. ಆದರೆ, ಇದಿಷ್ಟೇ ಆಗಿದ್ದರೆ ಬಹುಶಃ ಡಿಕೆ ಶಿವಕುಮಾರ್ ಅವರ ಮಹತ್ವಾಕಾಂಕ್ಷೆಯ ಈ ಪಾದಯಾತ್ರೆ ಇಷ್ಟೊಂದು ಸುದ್ದಿಯಾಗುತ್ತಿರಲಿಲ್ಲ. ಮುಖ್ಯವಾಗಿ 2013ರ ಬಳ್ಳಾರಿ ಪಾದಯಾತ್ರೆಯ ಮಾದರಿಯಲ್ಲೇ ಸಾಗುತ್ತಿರುವ ಮೇಕೆದಾಟು ಪಾದಯಾತ್ರೆ, ಆ ಪಾದಯಾತ್ರೆಯ ಹಾದಿಯಲ್ಲೇ ಸಾಗಿ, ಯಶಸ್ಸು ಕಂಡು, ಅಂತಹದ್ದೇ ಪಲಿತಾಂಶವನ್ನು ಮತ್ತು ಪರಿಣಾಮವನ್ನು ನೀಡಲಿದೆ ಎಂಬುದು ಇಲ್ಲಿರುವ ಲೆಕ್ಕಾಚಾರ! ಅಂದರೆ; ಮೇಕೆದಾಟು ಪಾದಯಾತ್ರೆ ಇಡೀ ಕರ್ನಾಟಕದಾದ್ಯಂತ ಅಲ್ಲದೇ ಹೋದರೂ ಕನಿಷ್ಟ ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ ಮತ್ತು ಮೈಸೂರು ಭಾಗದ ಮೈಸೂರು, ಮಂಡ್ಯ, ಚಾಮರಾಜನಗರ ಭಾಗದಲ್ಲಿ ಪಕ್ಷಕ್ಕೆ ಬಲ ತುಂಬಲಿದೆ. ಹೆಚ್ಚು ಸ್ಥಾನಗಳನ್ನು ಗೆಲ್ಲಲು ನೆರವಾಗಲಿದೆ. ಆ ಬಲದ ಮೇಲೆಯೇ ಪಕ್ಷ ಅಧಿಕಾರಕ್ಕೂ ಬಂದಲ್ಲಿ, ಆ ಗೆಲುವಿನ ಸಿಂಹಪಾಲು ತಮ್ಮದಾಗಲಿದೆ ಮತ್ತು ಪ್ರತಿಫಲವಾಗಿ ಸಿಎಂ ಕುರ್ಚಿಗೆ ಹಕ್ಕು ಮಂಡಿಸುವ ಅರ್ಹತೆ ತಮ್ಮದಾಗಲಿದೆ ಎಂಬುದು ಶಿವಕುಮಾರ್ ಲೆಕ್ಕಾಚಾರ ಎನ್ನಲಾಗುತ್ತಿದೆ! ಪ್ರದೇಶ ಕಾಂಗ್ರೆಸ್ ನಾಯಕರ ಇಂತಹ ಲೆಕ್ಕಾಚಾರಗಳ ಕಾರಣದಿಂದಾಗಿಯೇ ಮಂಡ್ಯ, ಮೈಸೂರು ಭಾಗದ ಸಿದ್ದರಾಮಯ್ಯ ಬೆಂಬಲಿಗರು ಮತ್ತು ಅಭಿಮಾನಿಗಳು ಮೇಕೆದಾಟು ಪಾದಯಾತ್ರೆಯ ವಿಷಯದಲ್ಲಿ ಆಕ್ಷೇಪವೆತ್ತುತ್ತಿದ್ದಾರೆ. ಬಹಿರಂಗವಾಗಿಯೂ ಅವರು ತಮ್ಮ ಅಸಮಾಧಾನ ತೋಡಿಕೊಂಡಿದ್ದಾರೆ. ಜೊತೆಗೆ ಸ್ವತಃ ಸಿದ್ದರಾಮಯ್ಯ ಕೂಡ ಪಾದಯಾತ್ರೆಯ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸುತ್ತಿಲ್ಲ ಎಂಬುದು ಗುಟ್ಟೇನಲ್ಲ. ಸಿದ್ದರಾಮಯ್ಯ ಪ್ರಾಬಲ್ಯದ ಮೈಸೂರು ಭಾಗದಲ್ಲಿ ನಾಳೆ ಕಾಂಗ್ರೆಸ್ ಪಾದಯಾತ್ರೆಯ ಬಲದ ಮೇಲೆ ಬಲವೃದ್ಧಿಸಿಕೊಂಡು ಹೆಚ್ಚು ಸ್ಥಾನ ಗಳಿಸಿದರೆ ಅದು ಖಂಡಿತವಾಗಿಯೂ ಮತ್ತೊಮ್ಮೆ ಸಿಎಂ ಸ್ಥಾನಕ್ಕೇರುವ ಸಿದ್ದರಾಮಯ್ಯ ಮಹತ್ವಾಕಾಂಕ್ಷೆಯನ್ನು ಮಣ್ಣುಪಾಲು ಮಾಡಲಿದೆ ಎಂಬುದು ಸಿದ್ದರಾಮಯ್ಯ ಮತ್ತು ಅವರ ಬೆಂಬಲಿಗರ ಆತಂಕ.

● 12ನೇ ಪುಟಕ್ಕೆ...

# ಅಕ್ಷರದವ್ವ ಸಾವಿತ್ರಿಬಾಯಿ ಫುಲೆ



ಸನತ್‌ಕುಮಾರ ಬೆಳಗಲಿ
ಹಿರಿಯ ಪತ್ರಕರ್ತರು

ಭಾರತದ ಇತಿಹಾಸದ ಪುಟಗಳನ್ನು ತಿರುವತ್ತ ಹೋದರೆ ಝಾನ್ಸಿ ರಾಣಿ ಲಕ್ಷ್ಮಿ ಬಾಯಿ,ಕಿತ್ತೂರು ಚೆನ್ನಮ್ಮ, ಮುಂತಾದ ಸ್ವಾತಂತ್ರ್ಯ ಹೋರಾಟಗಾರರ ಹೆಸರುಗಳು ಮತ್ತು ಗಾಂಧಿ ,ನೆಹರೂ ಕುಟುಂಬಗಳ ತ್ಯಾಗ ಮಯ ಬದುಕಿನ ಕತೆಗಳು ಕಣ್ಣ ಮುಂದೆ ತಕ್ಷಣ ಗೋಚರಿಸುತ್ತವೆ. ಆದರೆ ರಾಷ್ಟ್ರೀಯ ವಾದಿ ಚರಿತ್ರಕಾರರ ಕಣ್ಣಿಗೆ ಮಹಾನ ಸಮಾಜ ಸುಧಾರಕ ಜ್ಯೋತಿಬಾ ಫುಲೆ ಮತ್ತು ಮೊದಲ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಅವರ ಹೆಸರು ಯಾಕೆ ಕಣ್ಣಿಗೆ ಕಾಣಿಸಿಕೊಂಡಿಲ್ಲವೋ ಅರ್ಥವಾಗುವದಿಲ್ಲ.


ತೊಂಬತ್ತರ ದಶಕದಲ್ಲಿ ಓದಿನ ಹಸಿವು ಹೆಚ್ಚಾದಾಗ ಬಾಬಾಸಾಹೇಬರ ಸಾಹಿತ್ಯ ಕಣ್ಣಿಗೆ ಬಿತ್ತು. ಅದು ಭಾರತದ ಶ್ರೇಣೀಕೃತ ಜಾತಿ ವ್ಯವಸ್ಥೆಯ ಬಗ್ಗೆ ನಮ್ಮ ಸಮಾನತೆಯ ಅರಿವನ್ನು ವಿಸ್ತರಿಸಿತು.ಜೊತೆ ಜೊತೆಗೆ ಫುಲೆ ದಂಪತಿಗಳ ಬಗೆಗಿನ ಓದು ರಾಷ್ಟ್ರೀಯ ವಾದಿ ಇತಿಹಾಸಕಾರರು ಕಡೆಗಣಿಸಿದ ಇನ್ನೊಂದು ಸತ್ಯವನ್ನು ಕಣ್ಣ ಮುಂದೆ ತಂದು ನಿಲ್ಲಿಸಿತು.ಅದರಲ್ಲೂ ಸಾವಿತ್ರಬಾಯಿ ಫುಲೆ ಸಂಗಾತಿ ಜ್ಯೋತಿಬಾರ ಜೊತೆ ನಡೆದು ಬಂದ ಕಲ್ಲು ಮುಳ್ಳಿನ ದಾರಿ ಯ ವಿವರಗಳನ್ನು ಓದ ತೊಡಗಿದಾಗ ಇತಿಹಾಸದಲ್ಲಿ ಇನ್ನೆಷ್ಟು ಸಂಗತಿಗಳು ಮುಚ್ಚಿ ಹೋಗಿವೆಯೋ ಎಂದು ಅನಿಸಿ ಯೋಚನೆಗೀಡು ಮಾಡಿತು.

ಅಸಮಾನತೆಯಿಂದ ಕೂಡಿದ ಈ ಸಮಾಜ ವ್ಯವಸ್ಥೆ ಬದಲಾಗಬೇಕೆಂದು ಹಾತೊರೆಯುತ್ತಿದ್ದ ನಮ್ಮ ಪೀಳಿಗೆಯ ಯುವಕರಿಗೆ ಮೊದಲು ಸಿಕ್ಕಿದ್ದು ಕಾರ್ಲ್ ಮಾರ್ಕ್ಸ್ ,ಎಂಗೆಲ್ಸ್, ಮತ್ತು ಲೆನಿನ್ ಸಾಹಿತ್ಯ. ಇನ್ನು ಹಲವೆಡೆ ಲೋಹಿಯಾ ಸಾಹಿತ್ಯದ ಪ್ರಭಾವ ,ಸಮಾಜವಾದಿ ಚಳವಳಿಗಳ ಅಬ್ಬರ ಆಗ ತೀವ್ರ ವಾಗಿತ್ತು. ಉತ್ತರ ಕರ್ನಾಟಕದ ಬಿಜಾಪುರ ಜಿಲ್ಲೆಯ ನನ್ನಂಥ ಯುವಕರಿಗೆ ಫುಲೆ ದಂಪತಿಗಳ ಬಗ್ಗೆ ಗೊತ್ತಿರಲಿಲ್ಲ. ಆದರೆ ಜಾತಿರಹಿತ ಮದುವೆ ಮಾಡಿಸುತ್ತಿದ್ದ ,ತಳ ಸಮುದಾಯಗಳ ನೋವು,ಸಂಕಟಗಳಿಗೆ ಸ್ಪಂದಿಸಿ ನೆರವಿಗೆ ಬರುತ್ತಿದ್ದ ಇಂಚಗೇರಿ ಮಠದ ಮುರಗೋಡ ಮಹಾದೇವಪ್ಪ ನವರ ಪ್ರಭಾವ ನಮ್ಮ ಮೇಲಿತ್ತು.ಅವರ ಒಡನಾಟದಿಂದ ಕಮ್ಯುನಿಸ್ಟ್ ಚಳವಳಿಯ ಸಮೀಪ ಬಂದೆವು.


ಎಪ್ಪತ್ತರ ದಶಕದಲ್ಲಿ ಇಪ್ಪತ್ತರ ಯೌವನದಲ್ಲಿ ಹೊಸ ಕ್ರಾಂತಿಕಾರಿ ವಿಚಾರಗಳಿಗೆ ಕಣ್ಣು ತೆರೆದ ನನ್ನ ಪೀಳಿಗೆಯ ಬಹುತೇಕ ಯುವಕರಿಗೂ ಜ್ಯೋತಿ ಬಾ ಮತ್ತು ಸಾವಿತ್ರಿಬಾಯಿ ಫುಲೆ ಅವರ ಬಗ್ಗೆ ಗೊತ್ತಿರಲಿಲ್ಲ. ಆಗ ಅಂಬೇಡ್ಕರ್ ಸಾಹಿತ್ಯ ಕೂಡ ಲಭ್ಯವಿರಲಿಲ್ಲ.ನಾನು ಬಾಬಾಸಾಹೇಬರ ಸಾಹಿತ್ಯ ಓದಲು ಆರಂಭಿಸಿದ್ದು ಮತ್ತು ಫುಲೆ ದಂಪತಿಗಳ ಹೆಸರನ್ನು ಮೊದಲ ಬಾರಿ ಕೇಳಿದ್ದು ಎಂಬತ್ತರ ದಶಕದ ಕೊನೆ ಮತ್ತು ತೊಂಬತ್ತರ ದಶಕದ ಆರಂಭದಲ್ಲಿ.

ಇತಿಹಾಸದಲ್ಲಿ ಕಡೆಗಣಿಸಲ್ಪಟ್ಟ ಫುಲೆ ದಂಪತಿ ಮತ್ತು ಶಾಹು ಮಹಾರಾಜರ ಸಾಧನೆಗಳನ್ನು ಬಾಬಾಸಾಹೇಬರು ಮೊದಲು ದಾಖಲಿಸಿದರು.ನಂತರ ತೊಂಬತ್ತರ ದಶಕದಲ್ಲಿ ಬಹುಜನ ಸಮಾಜ ಪಕ್ಷದ ನಾಯಕ ಕಾನ್ಶಿರಾಮ ಹೊಸ ಬೆಳಕನ್ನು ಚೆಲ್ಲಿದರು.ಉತ್ತರ ಪ್ರದೇಶದಲ್ಲಿ ಮಾಯಾವತಿ ಮುಖ್ಯ ಮಂತ್ರಿಯಾದಾಗ ಫುಲೆ ದಂಪತಿಗಳು, ಶಾಹು ಮಹಾರಾಜ, ಪೆರಿಯಾರ ರಾಮಸ್ವಾಮಿ ನಾಯ್ಕರ್ ಮೊದಲಾದವರ ಹೆಸರಿನಲ್ಲಿ ಕಾರ್ಯಕ್ರಮ ಮಾಡತೊಡಗಿದರು.ಅವರ ಹೆಸರಿನ ಉದ್ಯಾನಗಳು ,ರಸ್ತೆಗಳು, ಊರುಗಳು ಬಂದವು.

ಅದು 1851 ನೇ ಇಸ್ವಿ.ಎಲ್ಲ ಜಾತಿಗಳ ಬಾಲಕಿಯರಿಗಾಗಿ ಪುಣೆಯಲ್ಲಿ ಶಾಲೆ ಆರಂಭವಾಯಿತು.ಈ ಶಾಲೆಗೆ ಅಕ್ಷರ ಕಲಿಸಲು ಬರುತ್ತಿದ್ದ ಹೆಣ್ಣು ಮಗಳ ಹೆಸರು ಸಾವಿತ್ರಿಬಾಯಿ ಫುಲೆ. ಹೆಣ್ಣು ಮಕ್ಕಳು ಅಕ್ಷರ ಕಲಿಯಬಾರದು ಎಂಬುದು ಅಂದಿನ ಮನುವಾದಿಗಳ ಕಟ್ಟುಪಾಡು .ಇದನ್ನು ಧಿಕ್ಕರಿಸಿ ಅಕ್ಷರ ಕಲಿಸಲು ಬಂದ ಸಾವಿತ್ರಿಬಾಯಿಯ ಮೇಲೆ ಜಾತಿವಾದಿಗಳು ವಿಷ ಕಾರತೊಡಗಿದರು. "ಇದು ನಮ್ಮ ಧರ್ಮಕ್ಕೆ ಅವಮಾನ" ಎಂದು ಅರಚಾಡಿದರು.ನಡುರಸ್ತೆಯಲ್ಲಿ ಸಾವಿತ್ರಿಬಾಯಿ ಮೇಲೆ ಕಲ್ಲು ಎಸೆದರು .ಸಗಣಿ ಎರಚಿದರು. ಆದರೆ ಸಾವಿತ್ರಿಬಾಯಿ ಇದಕ್ಕೆ ಮಣಿಯಲಿಲ್ಲ.ಶಾಲೆಗೆ ಬರುವಾಗ ಹಳೆಯ ಸೀರೆಯನ್ನು ಉಟ್ಟುಕೊಂಡುಕೈ ಚೀಲದಲ್ಲಿ ಹೊಸ ಸೀರೆಯನ್ನು ಇಟ್ಟುಕೊಂಡು ಬಂದು ಶಾಲೆಗೆ ಹೋದ ನಂತರ ಸೆಗಣಿಯಿಂದ ಗಲೀಜಾದ ಸೀರೆಯನ್ನು ಬಿಚ್ಚಿ ಕೈ ಚೀಲದಲ್ಲಿ ಇರಿಸಿಕೊಂಡು ಬಂದಿದ್ದ ಸೀರೆಯನ್ನು ಉಟ್ಟು ಕೊಂಡು ಬಾಲಕಿಯರಿಗೆ




ಪಾಠ ಮಾಡಿದರು.ಮನೆಗೆ ವಾಪಸು ಹೋಗುವಾಗ ಮತ್ತೆ ಅದೇ ಹಳೆಯ ಸೀರೆಯನ್ನು ಉಟ್ಟು ಕೊಂಡು ಹೋಗುತ್ತಿದ್ದರು. ಸಾವಿತ್ರಿ ಬಾಲ್ಯದಲ್ಲಿ ತುಂಬಾ ಚುರುಕಾದ ಹುಡುಗಿ. ಒಂದು ದಿನ ತೋಟದಲ್ಲಿದ್ದಾಗ ಒಂದು ಹಾವು ಮರವನ್ನು ಏರಿ ಅಲ್ಲಿ ಗೂಡಿನಲ್ಲಿದ್ದ ಹಕ್ಕಿಯೊಂದರ ಮೊಟ್ಟೆಗಳನ್ನು ನುಂಗಲು ತೆವಳಿಕೊಂಡು ಹೋಗುತ್ತಿದ್ದಾಗ ಅದು ಸಾವಿತ್ರಿ ಯ ಕಣ್ಣಿಗೆ ಬಿತ್ತು.ಆಗ ತಡೆಯಲಾಗದೇ ಒಂದು ದೊಣ್ಣೆ ಯನ್ನು ಹಿಡಿದು ಹಾವನ್ನು ತೆಗೆದು ಬಿಸಾಡಿದಳು .ಇವಳ ಚುರುಕು ಬುದ್ಧಿಯನ್ನು ಗಮನಿಸಿದ ಕ್ರೈಸ್ತ ಮಿಶನರಿಯೊಬ್ಬರು



ಸಾವಿತ್ರಿಗೆ ಒಂದು ಪುಸ್ತಕವನ್ನು ಕಾಣಿಕರಯಾಗಿ ನೀಡಿದರು.ಆದರೆ ಶಾಲೆಗೆ ಹೋಗದ, ಅಕ್ಷರ ಬಾರದ ಆಕೆ ಅದನ್ನು ಓದುವದು ಹೇಗೆ? ಆದರೆ ಮಿಶನರಿ ಕೊಟ್ಟ ಪುಸ್ತಕವನ್ನು ಬಿಸಾಡದೇ ಆಕೆ ಜೋಪಾನವಾಗಿ ಇಟ್ಟುಕೊಂಡಳು.ಮುಂದೆ ಮದುವೆಯಾದಾಗ ಪಾದ್ರಿ ಕೊಟ್ಟ ಪುಸ್ತಕ ವನ್ನು ಹಿಡಿದುಕೊಂಡು ಪತಿಯ ಮನೆಗೆ ಬಂದಳು. ಇವಳ ಅಕ್ಷರ ದಾಹವನ್ನು ಗಮನಿಸಿ ಖುಷಿ ಪಟ್ಟ ಜ್ಯೋತಿಬಾ ಮನೆಯಲ್ಲೇ ಆಕೆಗೆ ಅಕ್ಷರ ಕಲಿಸಲು ಆರಂಭಿಸಿದರು.ಹೀಗೆ ಜ್ಯೋತಿಬಾ ಫುಲೆ ಸಾವಿತ್ರಿಯ ಮೊದಲ ಗುರು ಎಂದು ಹೆಸರಾದರು.

ಮುಂದೆ ಪತಿ ಜ್ಯೋತಿಬಾ ಸಲಹೆಯಂತೆ ಸಾವಿತ್ರಿಬಾಯಿ ಶಾಲೆಗೆ ಸೇರಿದಳು.ಆಗ ದಲಿತ ಬಾಲಕ,ಬಾಲಕಿಯರಿಗೆ ಶಾಲೆಯಲ್ಲಿ ಪ್ರವೇಶ ಇರಲಿಲ್ಲ. ಅಸ್ಪ್ರಶ್ಯತೆ ವ್ಯಾಪಕವಾಗಿತ್ತು.ಇದನ್ನು ಗಮನಿಸಿದ ಸಾವಿತ್ರಿಬಾಯಿ1847 ರ ಮೇ 1 ನೇ ತಾರೀಖಿನಂದು ಮಹಾರಾವಾಡಾದಲ್ಲಿ ದಲಿತ ಹೆಣ್ಣು ಮಕ್ಕಳಿಗಾಗಿ "ಅಹಿಲ್ಯಾಶ್ರಮ" ಎಂಬ ಶಾಲೆಯನ್ನು ಸಾವಿತ್ರಿ ಆರಂಭಿಸಿದರು.ಈ ಶಾಲೆಯನ್ನು ಮುಚ್ಚಬೇಕೆಂದು ಒತ್ತಾಯಿಸಿ ಜಾತಿಯವಾದಿಗಳು ಗಲಾಟೆ ಆರಂಭಿಸಿದರು.ದಲಿತ ನಾಯಕರಲ್ಲೂ ಅವರ ಸಮುದಾಯದವರು ಶಾಲೆ ಕಲಿತರೆ ಮತಾಂತರ ವಾಗುತ್ತಾರಬ ಭಯವನ್ನು ಹುಟ್ಟಿಸಲಾಯಿತು. ಆಗ ಸರಕಾರಿ ಇಲ್ಲವೇ ಖಾಸಗಿ ಹೆಣ್ಣು ಮಕ್ಕಳ ಶಾಲೆಗಳು ಇರಲಿಲ್ಲ.ಹೀಗಾಗಿ ಕ್ರೈಸ್ತ ಮಿಶನರಿಗಳೇ ಹೆಣ್ಣು ಮಕ್ಕಳ ಶಾಲೆಯನ್ನು ನಡೆಸುತ್ತಿದ್ದರು. ಹೀಗಾಗಿ ಮತಾಂತರದ ಭಯವನ್ನು ಹುಟ್ಟಿಸಲಾಯಿತು.( ತಳ ಸಮುದಾಯಗಳನ್ನು ಹಿಡಿತದಲ್ಲಿ ಇರಿಸಿಕೊಳ್ಳಲು ಮತಾಂತರ ಎಂಬ ಅಸ್ತ್ರ ವನ್ನು ಮನುವಾದಿಗಳು ಆ ಕಾಲದಲ್ಲೇ ಬಳಸಿದ್ದರೆಂಬುದನ್ನು ಗಮನಿಸಬಹುದು.) ಕೊನೆಗೆ ಎಲ್ಲ ಜಾತಿಗಳ ಹೆಣ್ಣು ಮಕ್ಕಳು ಒಂದೇ ಕಡೆ ಓದುವ ಮೊದಲ ಶಾಲೆಯನ್ನು ಜ್ಯೋತಿಬಾ ಮತ್ತು ಸಾವಿತ್ರಿಬಾಯಿ 1848 ರ ಜನವರಿಯಲ್ಲಿ ಆರಂಭವಾಯಿತು.ಫುಲೆ ದಂಪತಿಗಳ ಈ ಶಾಲೆಯಲ್ಲಿ ಎಲ್ಲ ವರ್ಗ ,ಜಾತಿಯವರಿಗೆ ಪ್ರವೇಶ ನೀಡಲಾಯಿತು.

1831 ನೇ ಇಸವಿ ಜನವರಿ 3 ನೇ ತಾರೀಕು ಮಹಾರಾಷ್ಟ್ರ ದ ಸಾತಾರಾ ಜಿಲ್ಲೆಯ ನಯಿಗಾಂವ ಎಂಬ ಹಳ್ಳಿಯಲ್ಲಿ ಖಂಡೋಜಿ ಪಾಟೀಲ ,ಲಕ್ಷ್ಮಿ ಬಾಯಿ ಪಾಟೀಲ ದಂಪತಿಗೆ ಜನಿಸಿದ ಸಾವಿತ್ರಿಬಾಯಿಯನ್ನು ಒಂಬತ್ತನೇ ವಯಸ್ಸಿನಲ್ಲಿ ಅವಳ ತಂದೆ ಆಕೆಯನ್ನು ಹದಿಮೂರು ವಯಸ್ಸಿನ ಜ್ಯೋತಿಬಾ ಫುಲೆಗೆ ಮದುವೆ ಮಾಡಿಕೊಟ್ಟರು.ಜ್ಯೋತಿಬಾ ತಂದೆ ಪುಣೆಯಲ್ಲಿ ಹೂವಿನ ವ್ಯಾಪಾರ ಮಾಡುತ್ತಿದ್ದರು.ಹೀಗಾಗಿ ಫುಲೆ ಎಂಬ ಅಡ್ಡ ಹೆಸರು ಅವರ ಮನೆಗೆ ಬಂತು.ಫುಲೆ ಅಂದರೆ ಮರಾಠಿಯಲ್ಲಿ ಹೂ ಎಂದಾಗುತ್ತದೆ. ಕನ್ನಡದಲ್ಲಿ ಇದೇ ವೃತ್ತಿ ಮಾಡುವವರನ್ನು ಹೂಗಾರ ಎಂದು ಕರೆಯುತ್ತಾರೆ.



ಇದನ್ನೂ ಸಹಿಸದ ಮನುವಾದಿ ಗೂಂಡಾಗಳ ಹಲ್ಲೆ ಯತ್ನ ಮುಂದುವರಿದರೂ ಫುಲೆ ದಂಪತಿ ಮಣಿಯಲಿಲ್ಲ.ಈ ಅಕ್ಷರ ಸೇವೆಯಲ್ಲಿ ಸಾವಿತ್ರಿ ಬಾಯಿಗೆ ಜೊತೆಯಾದವಳು ಫಾತಿಮಾ ಶೇಖ್ ಎಂಬ ಯುವತಿ.ಸಾವಿತ್ರಿಯ ಜೊತೆ ಶಿಕ್ಷಕಿಯರ ತರಬೇತಿ ಪಡೆದ ಫಾತಿಮಾ ಶೇಖ್ ಭಾರತದ ಮೊದಲ ಮುಸ್ಲಿಂ ಶಿಕ್ಷಕಿ.ಮನುವಾದಿಗಳ ಒತ್ತಡಕ್ಕೆ ಮಣಿದು ಜ್ಯೋತಿಬಾ ತಂದೆ ಗೋವಿಂದ ಫುಲೆ ಮಗ ಮತ್ತು ಸೊಸೆಯನ್ನು ಮನೆಯಿಂದ ಹೊರಗೆ ಹಾಕಿದಾಗ ಫುಲೆ ದಂಪತಿಗೆ ಆಸರೆ ನೀಡಿದವರು ಫಾತಿಮಾ ಶೇಖ್ ಅವರ ತಂದೆ ಉಸ್ಮಾನ್ ಚಾಚಾ ಎಂಬುದನ್ನು ಮರೆಯಲು ಸಾಧ್ಯವಿಲ್ಲ.

ಭಾರತದ ಮಹಿಳಾ ಸಂಘಟನೆಗಳು ಕೂಡ ತುಂಬಾ ತಡವಾಗಿ ಸಾವಿತ್ರಿಬಾಯಿ ಅವರ ಸಾಧನೆಯನ್ನು ಗುರುತಿಸಿದವು.ವಾಸ್ತವವಾಗಿ ಕ್ಲಾರಾ ಜೆಟ್ಕಿನ್ ಗಿಂಥ ಸಾವಿತ್ರಿ ಬಾಯಿ ಫುಲೆ ಭಾರತದ ನೆಲದ ಮಹಿಳಾ ಆಂದೋಲನಕ್ಕೆ ಹೆಚ್ಚು ಪ್ರಸ್ತುತರಾಗುತ್ತಾರೆ.

ಪುಣೆಯಲ್ಲಿ ಮನುವಾದಿ ಪೇಶ್ವೆ ಸಾಮ್ರಾಜ್ಯ ಪತನಗೊಂಡ ನಂತರ ದಿಗಿಲುಗೊಂಡ ಪ್ರತಿಗಾಮಿ ಶಕ್ತಿಗಳು ಶ್ರೇಣೀಕೃತ ಜಾತಿ ವ್ಯವಸ್ಥೆಗೆ ಮರು ಜೀವ ನೀಡಲು ಹಿಂದುತ್ವದ ವೇಷ ಹಾಕಿದವು.ಭಾರತದ ನೆಲದಲ್ಲಿ ವರ್ಣಾಶ್ರಮ ವ್ಯವಸ್ಥೆಗೆ ಪ್ರತಿರೋಧವಾಗಿ ಬೌದ್ಧ ,ಜೈನ,ಲಿಂಗಾಯತ ಧರ್ಮಗಳು ಮತ್ತು ಭಕ್ತಿಪಂಥ,ಸೂಫಿ ಪರಂಪರೆ,ಸಿಖ್ ,ಇಸ್ಲಾಂ ಮತ್ತು ಕ್ರೈಸ್ತ ಮಾರ್ಗ ಗಳು ಜಾತಿ ವ್ಯವಸ್ಥೆಯ ವಿರುದ್ಧ ಪ್ರತಿರೋಧ ಮಾತ್ರವಲ್ಲ ಪ್ರತಿ ಸಂಸ್ಕೃತಿಯನ್ನು ರೂಪಿಸಿದವು.ಜ್ಯೋತಿಬಾ ಮತ್ತು ಸಾವಿತ್ರಿಬಾಯಿ ಫುಲೆ ಈ ಪ್ರತಿರೋಧ ಪರಂಪರೆಯ ಉತ್ತರಾಧಿಕಾರಿಗಳಾಗಿ ಚಾಲನೆ ನೀಡಿದರು.

ಜ್ಯೋತಿಬಾ ಫುಲೆಯವರನ್ನು ಭಾರತದ ನಿಜವಾದ ಮಹಾತ್ಮ ಎಂದು ಗಾಂಧೀಜಿ ಕೂಡ ಶ್ಲಾಘಿಸಿದ್ದರು.ಆದರೆ ರಾಷ್ಟ್ರೀಯ ವಾದಿ ಚರಿತ್ರಕಾರರು ತಿಲಕ,ಗೋಖಲೆ,ರಾಜಾರಾಮ ಮೋಹನರಾಯರಿಗೆ ನೀಡಿದ ಪ್ರಾಶಸ್ತ್ಯ ವನ್ನು ಫುಲೆ ದಂಪತಿಗೆ ನೀಡಲಿಲ್ಲ.

ಜ್ಯೋತಿಬಾ ಮತ್ತು ಸಾವಿತ್ರಿಬಾಯಿ ಚರಿತ್ರೆ ತುಂಬಾ ತಡವಾಗಿ ಬೆಳಕಿಗೆ ಬಂದ ನಂತರ ಈಗ ಮಹಾರಾಷ್ಟ್ರ ಸರಕಾರವೇ ಫುಲೆ ಜಯಂತಿಯನ್ನು ಆಚರಿಸುತ್ತದೆ.ಬಿಜೆಪಿ ,ಕಾಂಗ್ರೆಸ್ ಸೇರಿದಂತೆ ಬಹುತೇಕ ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳ ಕಾರ್ಯಕ್ರಮ ಗಳಲ್ಲಿ ವೇದಿಕೆಯ ಮೇಲೆ ಫುಲೆ ದಂಪತಿಗಳ ಭಾವಚಿತ್ರಗಳು ಎಲ್ಲೆಡೆ ಕಾಣುತ್ತಿವೆ.

ಸಾಮಾಜಿಕ ಬದಲಾವಣೆಗೆ ಹೋರಾಡುವವರ ವಯಕ್ತಿಕ ಬದುಕು ಇತರರಿಗೆ ಮಾದರಿಯಾಗಬೇಕು. ಅನ್ಯಾಯದ ವಿರುದ್ಧ ಪ್ರತಿರೋಧದ ಜೊತೆಗೆ ಹೇಗೆ ಬದುಕಬೇಕು ಎಂಬುದಕ್ಕೆ ಉಳಿದವರಿಗೆ ಮಾದರಿಯಾಗಬೇಕು.ಜ್ಯೋತಿಬಾ ಮತ್ತು ಸಾವಿತ್ರಿ ಫುಲೆ ಅವರ ದಾಂಪತ್ಯ ಜೀವನ ಆದರ್ಶಮಯವಾಗಿತ್ತು.ಅವರ ನಡುವಿನ ಪರಸ್ಪರ ತಿಳುವಳಿಕೆ ,ಹೊಂದಾಣಿಕೆ,ಇತರರಿಗೆ ಮಾದರಿಯಾಗಿತ್ತು. ಕಮ್ಯುನಿಸ್ಟ್ ಚಳವಳಿಯಲ್ಲೂ ಏ.ಕೆ.ಗೋಪಾಲನ್,ಸುಶಿಲಾ ಗೋಪಾಲನ್,ಎಸ್.ಎ. ಡಾಂಗೆ,ಉಷಾತಾಯಿ ಡಾಂಗೆ,ಪೂರ್ಣಚಂದ್ರ ಜೋಶಿ ಕಲ್ಪನಾದತ್ತ (ಜೋಶಿ) ಎಂ.ಫರೂಕಿ,ವಿಮಲಾ ಫರೂಕಿ ,ದಾಂಪತ್ಯ ಹಾಗೂ ಸಮಾಜವಾದಿ ಚಳವಳಿಯಲ್ಲಿ ಮಧು ಲಿಮಯೆ,ಮಧು ದಂಡವತೆ, ಸ್ನೇಹಲತಾ ಪಟ್ಟಾಭಿರಾಮ ರೆಡ್ಡಿ ಅಂಥವರ ದಾಂಪತ್ಯ ಜೀವನ ಆದರ್ಶಪ್ರಾಯವಾಗಿತ್ತು.ಇವರೆಲ್ಲ ಸ್ನೇಹಿತರಂತೆ ಬದುಕಿದರು.

ಜ್ಯೋತಿಬಾ ಮತ್ತು ಸಾವಿತ್ರಿಬಾಯಿ ಫುಲೆ ದಂಪತಿಗೆ ಮಕ್ಕಳಾಗಲಿಲ್ಲ.ಆದರೆ ಅದಕ್ಕೆ ಬೇಸರಿಸಿಕೊಳ್ಳದೇ ಕಾಶಿಬಾಯಿ ಎಂಬ ವಿಧವೆಗೆ ಹುಟ್ಟಿದ ಮಗುವನ್ನೇ ಸಾವಿತ್ರಿಬಾಯಿ ದತ್ತು ತೆಗೆದುಕೊಳ್ಳುತ್ತಾರೆ.ಆ ಮಗುವಿಗೆ ಯಶವಂತ ಎಂದು ಹೆಸರನ್ನಿಟ್ಟು ವಾರಸುದಾರಿಕೆ ನೀಡುತ್ತಾರೆ.ಮುಂದೆ ಆ ಮಗುವನ್ನು ಓದಿಸಿ ವೈದ್ಯನನ್ನಾಗಿ ಮಾಡುತ್ತಾರೆ.ಆಗ ಎಲ್ಲೆಡೆ ಪ್ಲೇಗ್ ಕಾಯಿಲೆ ಹಬ್ಬಿ ಜನ ಸಾಯತೊಡಗಿದಾಗ ಡಾಕ್ಟರ್ ಮಗ ಯಶವಂತನೊಂದಿಗೆ ಸಾವಿತ್ರಿಬಾಯಿ ರೋಗಿಗಳ ಸೇವೆಯಲ್ಲಿ ತೊಡಗಿಸಿಕೊಳ್ಳುತ್ತಾರೆ.

ಶಿಕ್ಷಕ ದಿನಾಚರಣೆಯನ್ನು ಸಾವಿತ್ರಿಬಾಯಿ ಫುಲೆ ಜನ್ಮದಿನವಾದ ಜನವರಿ 3 ನೇ ತಾರೀಕು ಆಚರಿಸಬೇಕೆಂದು ಗದುಗಿನ ತೋಂಟದ ಮಠದ ಸಿದ್ಧಲಿಂಗ ಸ್ವಾಮಿಗಳು ಹಿಂದೊಮ್ಮೆ ಹೇಳಿದ್ದರು. ಹಾಗೆಂದು ರಾಧಾಕೃಷ್ಣನ್ ಗೌರವಾನ್ವಿತರೆಂದಲ್ಲ. ಅವರನ್ನು ಗೌರವಿಸುತ್ತಲೇ ಹದಿನೆಂಟನೇ ಶತಮಾನದಲ್ಲಿ ಹೆಣ್ಣು ಮಕ್ಕಳಿಗೆ ಮೊದಲು ಶಾಲೆ ತೆರೆದು ಅಕ್ಷರ ಕಲಿಸಿದ ಸಾವಿತ್ರಿಬಾಯಿ ಫುಲೆ ಜನ್ಮದಿನ ಶಿಕ್ಷಕ ದಿನಾಚರಣೆಗೆ ಹೆಚ್ಚು ಸೂಕ್ತವಾಗಿದೆ. ಈ ಬಗ್ಗೆ ಸರ್ಕಾರದ ಮೇಲೆ ಒತ್ತಡ ತರಬೇಕು.

**ಕುಡಿತದ ವಿರುದ್ಧ ಮಹಾತ್ಮ ಗಾಂಧೀಜಿ ಸಮರವನ್ನೇ ಸಾರಿದ್ದರು. ಸ್ವಾತಂತ್ರ್ಯಾನಂತರ ಭಾರತವನ್ನು ಆಳಿದ ಯಾವ ಪಕ್ಷವೂ ಗಾಂಧಿ ಶುರುಮಾಡಿದ್ದ ಸಮರವನ್ನು ಮುಂದುವರಿಸಲಿಲ್ಲ. ಈಗ ಆಡಳಿತದ ಭಾರ ಹೊತ್ತಿರುವ ಬಿಜೆಪಿಯೂ ಈ ವಿಚಾರದಲ್ಲಿ ಸಂಬಂಧವೇ ಇಲ್ಲ ಎಂಬಂತೆ ಕೂತಿದೆ. ಏತನ್ಮಧ್ಯೆ ಆಂಧ್ರ ಪ್ರದೇಶ ಬಿಜೆಪಿ ಅಧ್ಯಕ್ಷ ಸೋಮು ವೀರರಾಜು, ಪಕ್ಷ ಅಧಿಕಾರಕ್ಕೆ ಬಂದರೆ ಮದ್ಯದ ದರವನ್ನು ಗಣನೀಯವಾಗಿ ಇಳಿಸುವ ಮಾತಾಡಿದ್ದಾರೆ. ಖಾದ್ಯತೈಲ, ಪೆಟ್ರೋಲು ದರ ಅವರ ನಜರಿನಲ್ಲಿ ಇಲ್ಲ.**

# ಆಂಧ್ರ ಬಿಜೆಪಿಯಲ್ಲೀಗ ಹೆಂಡದ್ದೆ ಮಾತು




ರಾಜಸೂತ್ರ
ಎಂ.ಕೆ. ಭಾಸ್ಕರ ರಾವ್
ಹಿರಿಯ ಪತ್ರಕರ್ತರು

ಭಾರತೀಯ ಜನತಾ ಪಕ್ಷದ ಮೂಲ ರಾಷ್ಟ್ರೀಯ ಸ್ವಯಂ ಸೇವಕ ಸಂಘ. ಸಂಘ ಪರಿವಾರದ ರಾಜಕೀಯ ಕವಲಾಗಿ ಹುಟ್ಟಿಕೊಂಡ ಭಾರತೀಯ ಜನಸಂಘ, ಈಗ ದೇಶವನ್ನು ಆಳುತ್ತಿರುವ ಬಿಜೆಪಿಯ ಪೂರ್ವಾಶ್ರಮದ ಹೆಸರು. ಶಿಸ್ತು, ಸಂಯಮ, ಸನ್ನಡತೆ, ಸದಾಶಯ, ಪ್ರಾಮಾಣಿಕತೆ, ಸ್ವಚ್ಛ ಸಂಸ್ಕಾರವೇ ಮುಂತಾದವು ಆರ್‌ಎಸ್‌ಎಸ್‌ನ ಸ್ವಯಂ ಆರೋಪಿತ ಗುಣ ವಿಶೇಷಗಳು. ಆ ಸಂಘಟನೆಯ ಭಾಗವಾಗಿ ಐವತ್ತು ವರ್ಷದ ಹಿಂದೆ ಜನಸಂಘ ಜನ್ಮ ತಳೆದಾಗ "ನಮ್ಮದು ಹೊಸ ರಾಜಕೀಯ ಸಂಸ್ಕೃತಿ" ಎನ್ನುವುದು ಅದರ ಘೋಷಾ ವಾಕ್ಯವಾಗಿತ್ತು. ಈಗ ಆ ಘೋಷಣೆ ಮುಕ್ಕಾಗಿದೆ. ಈ ಐದು ದಶಕಾವಧಿಯಲ್ಲಿ ಅದು ಹೇಳುತ್ತಿದ್ದ ಆಚಾರ, ಮಂಡಿಸುತ್ತಿದ್ದ ವಿಚಾರಗಳೆಲ್ಲವೂ ಕಿತ್ತು ಕಿಲುಬೆದ್ದು ಹೋಗಿವೆ. ಆರ್‌ಎಸ್ಸೆಸ್ ಆಗಲಿ, ಬಿಜೆಪಿಯಾಗಲಿ ಅಥವಾ ಸಂಘ ಪರಿವಾರದ ಮತ್ತಾವುದೆ ಶಾಖೆಯಾಗಿರಲಿ ಆ ಆದರ್ಶದ ಮಾತುಗಳನ್ನು ಆಡುವುದಿಲ್ಲ. ರಾಜಕೀಯದಲ್ಲಿ ಗುರಿ ಮುಟ್ಟುವುದಕ್ಕೆ ಹತ್ತಾರು ದಾರಿಗಳನ್ನು ರಾಜಕಾರಣ ಹುಡುಕುತ್ತಲೆ ಇರುತ್ತದೆ. ಅಂಥ ಒಂದು ಹುಡುಕಾಟದ ಭಾಗ "ನಮ್ಮದು ಹೊಸ ರಾಜಕೀಯ ಸಂಸ್ಕೃತಿ" ಎನ್ನುವುದಾಗಿತ್ತು. ಜನ ಅದನ್ನು ನಂಬಿದರು ಅದರ ಫಲ ಕೇಂದ್ರವಲ್ಲದೆ 26 ರಾಜ್ಯಗಳಲ್ಲಿ ಭಾರತೀಯ ಜನತಾ ಪಕ್ಷ ಅಧಿಕಾರದಲ್ಲಿ ಇರುವುದು.



ಜಗತ್ತಿನಲ್ಲಿ ಅತ್ಯಧಿಕ ಸದಸ್ಯರನ್ನು ಹೊಂದಿರುವ ಪಕ್ಷ ಬಿಜೆಪಿ ಎನ್ನುತ್ತಾರೆ. ಅದರ ಪ್ರಕಾರ ಅದರ ಸದಸ್ಯರ ಸಂಖ್ಯೆ ಹತ್ತು ಕೋಟಿಯನ್ನು ದಾಟಿದೆ. ಸದಸ್ಯತ್ವ ನೋಂದಣಿ ಕಾರ್ಯ ಸತತ ನಡೆದಿರುವುದರಿಂದ ಸಂಖ್ಯೆ ಇನ್ನೂ ಹೆಚ್ಚಿನದು ಎನ್ನಬಹುದು. ಸಂಖ್ಯಾಬಲ ಹೆಚ್ಚುವುದರೊಂದಿಗೆ ಘೋಷಿತ ಆದರ್ಶಗಳು, ಗುಣವಿಶೇಷಗಳು ಹಳ್ಳ ಹಿಡಿಯುವುದು ಜಗನ್ನಿಯಮ. ಸಂಖ್ಯೆ ಎನ್ನುವುದು ಮೇಲ್ನೋಟಕ್ಕೆ ಕಾಣಿಸುವಂತೆ ಬಲ ಅಲ್ಲ. ಅದು ಅಕ್ಷರಶಃ ದುರ್ಬಲ. ಬಿಜೆಪಿಗೆ ತಾನು ಅಧಿಕಾರಕ್ಕೆ ಬರುವ ಪೂರ್ವದಲ್ಲಿ ಆಡುತ್ತಿದ್ದ ಮಾತೆಲ್ಲವೂ ಈಗ ಮರೆತು ಹೋಗಿದೆ. ಹೊಸ ಹೊಸ ಘೋಷಣೆಗಳು ಬಂದು ಹಳೆಯ ಘೋಷಣೆಗಳು ಮರೆತು ಹೋಗುವಂತಾಗುತ್ತದೆ. ಬಿಜೆಪಿಯಲ್ಲಿ ಈಗ ಆಗುತ್ತಿರುವುದು ಇದಲ್ಲದೆ ಮತ್ತೇನೂ ಅಲ್ಲ.



ದೇಶವನ್ನು ದೇಶ ಎಂದು ಕರೆಯದೆ ಭಾರತ ಮಾತಾ ಎನ್ನುವುದು ಬಿಜೆಪಿಯ ಆದರ್ಶಗಳಲ್ಲಿ ಒಂದು. ಸ್ವಾತಂತ್ರ್ಯ ಪೂರ್ವದಲ್ಲಿದ್ದ ದೇಶದ ಭೂಪಟವನ್ನು ಮತ್ತೆ ಸಾಕಾರಗೊಳಿಸುವುದು ತನ್ನ ಮುಂದೆ ಅದು ಇಟ್ಟುಕೊಂಡಿರುವ ಹಲವು ಗುರಿಗಳಲ್ಲಿ ಒಂದಷ್ಟೆ ಅಲ್ಲ ಭಾರೀ ಮಹತ್ವಾಕಾಂಕ್ಷೆಯದು. ಆ ಭೂಪಟವನ್ನು ಮರಳಿ ಸ್ಥಾಪಿಸುವುದೆಂದರೆ ಪಾಕಿಸ್ತಾನ ಮತ್ತು ಬಾಂಗ್ಲಾ ದೇಶವನ್ನು ಪುನಃ ಭಾರತದಲ್ಲಿ ವಿಲೀನಗೊಳಿಸುವುದು! ಘೋಷಣೆ ಕೇಳಲು ಚಂದ. ಎಷ್ಟರಮಟ್ಟಿಗೆ ಇದನ್ನು ನಂಬಬಹುದು ಎನ್ನುವುದು ಜನರ ವಿವೇಚನೆಗೆ ಬಿಟ್ಟಿದ್ದು. ಇದು ಕಾರ್ಯ ಸಾಧ್ಯವೆ...? ಆದರೆ ಇಂಥ ಘೋಷಣೆಯನ್ನೂ ನಂಬುವ ಕೋಟಿ ಕೋಟಿ ಜನರಿದ್ದಾರೆ ಎನ್ನುವುದೇ ಬಿಜೆಪಿ ಬಲ! ಇದುವರೆಗೆ ಮೌಲ್ಯದ ವಿಚಾರದಲ್ಲಿ ತುಟಿ ಅಂಚಿನ ಮಾತನ್ನಾದರೂ ಆಡುತ್ತಿದ್ದ ಬಿಜೆಪಿ ಈಗ ಅದಕ್ಕೂ ಎಳ್ಳುನೀರನ್ನು ಬಿಟ್ಟಿರುವುದು ಸ್ಪಷ್ಟವಾಗುತ್ತಿದೆ. ಈ ನಿಟ್ಟಿನಲ್ಲಿ ಕಳೆದ ವಾರದ ಪತ್ರಿಕೆಗಳಲ್ಲಿ ಅಂಥ ಮಹತ್ವ ಪಡೆಯದೆ ಸಣ್ಣದಾಗಿ ಪ್ರಕಟವಾದ ಸುದ್ದಿಯೊಂದರತ್ತ ಗಮನ ಹರಿಸುವುದು ಬಿಜೆಪಿ ಆಡುತ್ತಿರುವ ನೀತಿ ನಿಯತ್ತು ಮೌಲ್ಯಗಳ ಓತಪ್ರೋತ ಹೇಳಿಕೆಗಳ ದೃಷ್ಟಿಯಿಂದ ಮುಖ್ಯವಾದುದು ಎನಿಸುತ್ತಿದೆ. ಈ ಮಾತು ಹೆಂಡಕ್ಕೆ ಸಂಬಂಧಿಸಿದ್ದು ಎನ್ನುವುದು ಗಮನ ಸೆಳೆಯುವುದಕ್ಕೆ ಕಾರಣವಾಗಿರುವ ಬೆಳವಣಿಗೆ. ಹೆಂಡಕ್ಕೂ ಬಿಜೆಪಿಗೂ ಸಂಬಂಧ ಇಲ್ಲ ಎಂದೇನೂ ಅಲ್ಲ. ಹೆಂಡದ ವಿಚಾರದಲ್ಲಿ ಅದು ತೀರಾ ಮಡಿಯನ್ನು ಬೆಳೆಸಿಕೊಂಡಿಲ್ಲ. ಪಕ್ಷದ ಬೇಕು ಬೇಡಗಳ ಪಟ್ಟಿಯಲ್ಲಿ ಹೆಂಡದ ನಿಷೇಧವೇನೂ ಇಲ್ಲ. ಇಷ್ಟಕ್ಕೂ ಬಿಜೆಪಿ ಗೌರವಿಸುವ ದೇವಾನುದೇವತೆಗಳೇ ಹೆಂಡದ ದಾಸಾನುದಾಸರೂ ಆಗಿದ್ದಾರೆ. ಸುರಾಪಾನ ಎಂದು ಪವಿತ್ರ ನಾಮದಲ್ಲಿ ಅದನ್ನು ಗೌರವಿಸುವುದು ನಮ್ಮ ಆರ್ಷೇಯ ಪರಂಪರೆ. ಹೆಂಡ, ಸಾರಾಯಿ,ಶೇಂದಿ, ವ್ಹಿಸ್ಕಿ, ಬ್ರಾಂದಿ, ಬಿಯರು ಮುಂತಾದವುಗಳ ಪ್ರಸ್ತಾಪ ಬಂದಾಗ ದೇಶದ ಅಗ್ರಗಣ್ಯ ಸಮಾಜವಾದಿ ನಾಯಕರಲ್ಲಿ ಒಬ್ಬರಾಗಿದ್ದ ರಾಮ ಮನೋಹರ ಲೋಹಿಯಾ ನೆನಪಾಗುತ್ತಾರೆ. ಈ ನೆನಪಿಗೆ ಕಾರಣ ಪುಟ್ಟದೊಂದು ಕಥೆ. ಆ ಕಥೆಯನ್ನೊಮ್ಮೆ ಅವಲೋಕಿಸಿ ಬಿಜೆಪಿಯ ಹೆಂಡದ ಪುರಾಣಕ್ಕೆ ಹೊರಳೋಣ.

ಲೋಹಿಯಾ ನೇತೃತ್ವದ ಸಮಾಜವಾದಿ ಪಕ್ಷದ ಸಭೆ ದೆಹಲಿಯಲ್ಲಿ ನಡೆದಿತ್ತು. ಅದರಲ್ಲಿ ನಮ್ಮ ರಾಜ್ಯದ ಸಮಾಜವಾದಿ ಪಕ್ಷದ ಕೆಲವು ನಾಯಕರು ಭಾಗವಹಿಸಿದ್ದರು. ಕರ್ನಾಟಕದ ತಂಡದಲ್ಲಿ ಶಾಂತವೇರಿ ಗೋಪಾಲಗೌಡ, ಜೆ.ಎಚ್. ಪಟೇಲ, ಕೆ.ಜಿ. ಮಹೇಶ್ವರಪ್ಪ ಕೂಡಾ ಇದ್ದರು. ಸಭೆ ಅನೇಕ ಸಂಗತಿಗಳನ್ನು ಚರ್ಚಿಸಿತು, ದೇಶವನ್ನು ಕಾಡುತ್ತಿರುವ ಹತ್ತಾರು ರೀತಿಯ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳ ಕುರಿತಂತೆ ಹಕ್ಕೊತ್ತಾಯದ ನಿರ್ಣಯಗಳನ್ನು ಅಂಗೀಕರಿಸಿತು. ಮತ್ತೆ ನಡೆದ ಪಕ್ಷದ ಆಂತರಿಕ ಆತ್ಮಾವಲೋಕನ ಸಭೆಯಲ್ಲಿ ಸಮಾಜವಾದಿಗಳ ಕುಡಿತದ ಚಟದ ಬಗೆಗೂ ಒಂದಿಷ್ಟು ಕಾವೇರಿದ ಚರ್ಚೆ ನಡೆಯಿತು. ಸಾರ್ವಜನಿಕ ಬದುಕಿನಲ್ಲಿ ಕುಡಿತದಿಂದ ಪ್ರಯೋಜನಕ್ಕಿಂತ ಹಾನಿಯೇ ಹೆಚ್ಚು. ಅದನ್ನು ಯಾರೆಲ್ಲ ಅಭ್ಯಾಸ ಮಾಡಿಕೊಂಡಿದ್ದೀರೊ ಅವರೆಲ್ಲರೂ ಅದನ್ನು ಬಿಡಬೇಕೆಂಬ ಠರಾವನ್ನು ಮಂಡಿಸುವ ಹಂತಕ್ಕೂ ಸಭೆ ಹೋಯಿತು. ಅವಸರದಲ್ಲಿ ನಿರ್ಣಯ ಬೇಡ ಎಂಬುದು ಕೆಲವರ ಸಲಹೆಯಾಗಿತ್ತು. ಅಂಥ ಸಲಹೆಯನ್ನು ಮಂಡಿಸಿದವರಲ್ಲಿ ನಮ್ಮ ಪಟೇಲರು ಒಬ್ಬರು.



ಪಟೇಲರಂತೆಯೆ ಕುಡಿತದ ಸಹವಾಸವಿದ್ದ ಅನೇಕರು ಸಭೆಯಲ್ಲಿದ್ದರಾದರೂ ಅವರಲ್ಲಿ ಯಾರೊಬ್ಬರಿಗೂ ಪಟೇಲರಿಗೆ ಇರುವ ಧೈರ್ಯವಿರಲಿಲ್ಲ. ಹಾಗಾಗಿ ಅವರೆಲ್ಲ ಮೌನಕ್ಕೆ ಶರಣಾದರು. ಆ ಪೈಕಿ ಮತ್ತೆ ಕೆಲವರು ತಮ್ಮ ಕೆಲಸವನ್ನು ಪಟೇಲರು ಮಾಡಿಕೊಡುತ್ತಾರೆಂಬ ವಿಶ್ವಾಸದಲ್ಲಿ ಮೌನಕ್ಕೆ ಜೋತುಬಿದ್ದರು. ಕುಡಿತ ಬಿಡುತ್ತೇನೆಂದು ಇಲ್ಲಿ ಮಾತು ಕೊಟ್ಟು ತಮ್ಮತಮ್ಮ ರಾಜ್ಯಗಳಿಗೆ ಹೋಗುವವರಲ್ಲಿ ಬಹುತೇಕರು ವಚನಭ್ರಷ್ಟರಾಗುತ್ತಾರೆ. ಹಾಗಾಗಿ ಅಂಥ ಒತ್ತಡದ ಹೇರಿಕೆ ಸಲ್ಲದೆಂದು ಪಟೇಲರು ಧೈರ್ಯವಾಗೆ ಹೇಳಿ ಕುಳಿತರು. ಲೋಹಿಯಾರಿಗೆ ಪಟೇಲರ ಮಾತಿನಲ್ಲಿ ತಥ್ಯವಿದೆ ಎನ್ನಿಸಿ ಆ ವಿಚಾರದಲ್ಲಿ ಸಂಯಮದ ಉಸಾಬರಿಯನ್ನು ಸದಸ್ಯರಿಗೇ ಬಿಟ್ಟು ವಿಷಯಕ್ಕೆ ಮಂಗಳ ಹಾಡಿದರೆನ್ನುವುದು ಕಥೆ.



ಈಗ ಮತ್ತೆ ಬಿಜೆಪಿ ಹೆಂಡದ ಪುರಾಣದತ್ತ ನಮ್ಮ ಪ್ರಯಾಣ. ಪ್ರಕಟಿತ ಸುದ್ದಿಯ ರೀತ್ಯ ಇದು ವರದಿಯಾಗಿರುವುದು ವಿಜಯವಾಡಾದಿಂದ. ಆಂಧ್ರಪ್ರದೇಶದಲ್ಲಿ ಒಂದಿಷ್ಟು ಸೀಟನ್ನಾದರೂ ಗೆಲ್ಲಲೇಬೇಕೆಂದು ಹೊರಟಿರುವ ಬಿಜೆಪಿ ಅದಕ್ಕಾಗಿ ಇನ್ನಿಲ್ಲದಂಥ ಕಸರತ್ತನ್ನು ನಡೆಸಿದೆ. ಆಂಧ್ರದಲ್ಲೀಗ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ನಾಯಕ ಜಗನ್‌ಮೋಹನ್ ರೆಡ್ಡಿ ಸರ್ಕಾರ ಆಡಳಿತ ನಡೆಸುತ್ತಿದೆ. ಸರ್ಕಾರದ ಬುಡವನ್ನು ಅಭದ್ರಗೊಳಿಸಿ ಆಡಳಿತ ಸೂತ್ರವನ್ನು ಕೈಗೆ ತೆಗೆದುಕೊಳ್ಳುವ ಧಾವಂತದಲ್ಲಿ ತೆಲುಗುದೇಶಂ ಪಕ್ಷವಿದೆ. ಅದರ ಮುಖಂಡ ಮಾಜಿ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಕೈತಪ್ಪಿ ಹೋಗಿರುವ ಅಧಿಕಾರವನ್ನು ಮರು ವಶಪಡಿಸಿಕೊಳ್ಳುವುದಕ್ಕಾಗಿ ಮೈಕೈಯನ್ನೆಲ್ಲ ಪರಪರ ಕೆರೆದುಕೊಳ್ಳುತ್ತಿದ್ದಾರೆ. ಆಳುವ ಪಕ್ಷ ಹಾಗೂ ಅಧಿಕಾರ ಇಲ್ಲದೆ ಅಳುವ ಪಕ್ಷಗಳ ನಡುವೆ ಬೇಳೆ ಬೇಯಿಸಿಕೊಳ್ಳುವ ತರಾತುರಿಯಲ್ಲಿರುವ ಭಾರತೀಯ ಜನತಾ ಪಕ್ಷ ಇದೀಗ ಹೆಂಡವನ್ನು ಮುಂದಿಟ್ಟುಕೊಂಡು ಓಟು ಕೇಳುವಷ್ಟರ ಮಟ್ಟಕ್ಕೆ ಕುಸಿದಿದೆ. ಹೇಳುವುದು ಆಚಾರ ತಿನ್ನೋದು ಬದನೆಕಾಯಿ ಎಂಬಂತಿದೆ ಅದರ ನೈತಿಕ ದಿವಾಳಿತನ. ಈ ಪ್ರಕರಣದ ಬೆಳವಣಿಗೆ ಹೀಗಿದೆ ಓದಿ:

ವಿಜಯವಾಡಾದಲ್ಲಿ ಆಂಧ್ರ ಪ್ರದೇಶ ಬಿಜೆಪಿ ಆಶ್ರಯದಲ್ಲಿ ಪ್ರಜಾ ಆಗ್ರಹ ಸಭಾ ಎಂಬ ಕಾರ್ಯಕ್ರಮ ನಡೆಯಿತು. ಅದರಲ್ಲಿ ಮುಖ್ಯ ಆಕರ್ಷಣೆಯಾಗಿ ಪಾಲ್ಗೊಂಡಿದ್ದವರು ರಾಜ್ಯ ಬಿಜೆಪಿ ಅಧ್ಯಕ್ಷ ಸೋಮು ವೀರರಾಜು. ಹಾಲಿ ಸರ್ಕಾರ ಅದನ್ನು ಮಾಡಿಲ್ಲ ಇದನ್ನು ಮಾಡಿಲ್ಲ ಎಂದು ಟೀಕಿಸುವ, ಅದನ್ನು ಮಾಡಬೇಕು ಇದನ್ನು ಮಾಡಬೇಕೆಂದು ಒತ್ತಾಯ ಮಾಡುವುದು ಇಂಥ ಆಗ್ರಹ ಸಭೆಗಳ ಉದ್ದೇಶ. ಅದರಲ್ಲಿ ತಪ್ಪೇನೂ ಇಲ್ಲ. ವಿರೋಧ ಪಕ್ಷಗಳು ಮಾಡುವ ಮತ್ತು ಮಾಡಲೇಬೇಕಾದ ಕೆಲಸ ಅದು. ಪ್ರಜಾಪ್ರಭುತ್ವದಲ್ಲಿ ಆಳುವ ಪಕ್ಷದ ಕಣ್ಣುಕಿವಿ ತೆರೆಸುವ ಕೆಲಸವನ್ನು ವಿರೋಧ ಪಕ್ಷಗಳು ಮಾಡಬೇಕು ಇದರಲ್ಲಿ ರಾಜೀಭಾವ ಸಲ್ಲದು. ಆ ದೃಷ್ಟಿಯಿಂದ ವಿಜಯವಾಡಾದಲ್ಲಿ ನಡೆದ ಪ್ರಜಾ ಆಗ್ರಹ ಸಮಾವೇಶ ಮೆಚ್ಚುವ ಕೆಲಸ. ಚಿತ್ರವನ್ನು ಮಸಿ ನುಂಗಿತು ಎನ್ನುತ್ತಾರಲ್ಲ ಹಾಗಾಯಿತು ಸಭೆ ಅಂತಿಮ ಫಲಶ್ರುತಿ.ಹಾಲಿ ಸರ್ಕಾರಕ್ಕೆ ಐದು ವರ್ಷ ಭರ್ತಿಯಾಗುತ್ತಿದ್ದಂತೆ ಅಂದರೆ 2024ರ ಜೂನ್ ತಿಂಗಳಿಗೆ ಮುನ್ನ ಆಂಧ್ರ ವಿಧಾನ ಸಭಾ ಚುನಾವಣೆ ನಡೆಯಲಿದೆ. ಸಭೆಯ ಸದಸ್ಯ ಬಲ 175. ಇದರಲ್ಲಿ 151 ಸ್ಥಾನ ಆಡಳಿತಾರೂಢ ವೈಎಸ್‌ಆರ್ ಕಾಂಗ್ರೆಸ್ ಕೈಲಿದೆ. ಮೂರನೇ ಎರಡಕ್ಕಿಂತ ಹೆಚ್ಚಿನ ಬಲ ಜಗನ್ ಸರ್ಕಾರಕ್ಕೆ ಇದೆ. ಮುಖ್ಯ ವಿರೋಧ ಪಕ್ಷ ತೆಲುಗು ದೇಶಂ 23 ಶಾಸಕರನ್ನು ಹೊಂದಿದೆ. ಎನ್‌ಡಿಎದ ಅಂಗಪಕ್ಷವಾಗಿರುವ ಜನಸೇವಾ ಪಾರ್ಟಿ ಒಂದು ಸೀಟನ್ನು ಗೆದ್ದು ಮರ್ಯಾದೆ ಉಳಿಸಿಕೊಂಡಿದೆ. ಸೂಪರ್ ಸ್ಟಾರ್ ಎಂದು ಕರೆಯುವ ಚಿತ್ರನಟ ಪವನ್‌ಕಲ್ಯಾಣ್ ಮುಖಂಡತ್ವದ ಪಕ್ಷ ಇದು. ಕಳೆದ ಚುನಾವಣೆಯಲ್ಲಿ ಬಿಜೆಪಿ,ಕಾಂಗ್ರೆಸ್, ಸಿಪಿಐ, ಸಿಪಿಎಂನದು ಸೊನ್ನೆಸಾಧನೆ. ಆ ರಾಜ್ಯದಲ್ಲಿ ತಥಾಕಥಿತ ರಾಷ್ಟ್ರೀಯ ಪಕ್ಷಗಳನ್ನು ಎಲ್ಲಿಡಬೇಕೊ ಅಲ್ಲೇ ಇಟ್ಟಿದ್ದಾರೆ ಮತದಾರರು. ಇದೇನೇ ಇದ್ದರೂ ರಾಜಕೀಯ ಯಾವಾಗ ಯಾವೆಲ್ಲ ಬಗೆಯ ತಿರುವು ಪಡೆಯುತ್ತದೊ ಭವಿಷ್ಯ ನುಡಿಯಲಾಗದು. ಹೀಗೆ ನೋಡಿದಾಗ ಅಧಿಕಾರಕ್ಕೆ ಬರುವ ಕನಸಿನ ದಾರಿಯಲ್ಲಿ ಬಿಜೆಪಿ ನಡೆಸಿರುವ ಯತ್ನ ಆಕ್ಷೇಪಾರ್ಹವೇನಲ್ಲ. ಆದರೆ ಅದಕ್ಕಾಗಿ ವಾಮ ಮಾರ್ಗ ಹಿಡಿಯುವ ನಡವಳಿಕೆ ಮಾತ್ರ ಖಂಡಿತಕ್ಕೂ ಆಕ್ಷೇಪಾರ್ಹ, ಖಂಡನೀಯ.

ವಿಜಯವಾಡಾದ ಪ್ರಜಾ ಆಗ್ರಹ ಸಭೆಯಲ್ಲಿ ಮಾತಾಡುತ್ತ ಪಕ್ಷದ ಅಧ್ಯಕ್ಷ ಸೋಮು ವೀರರಾಜು ರಾಜ್ಯದ ಜನ ಬಿಜೆಪಿಯನ್ನು ಅಧಿಕಾರಕ್ಕೆ ತಂದರೆ ಮದ್ಯದ (ಹೆಂಡ ಇತ್ಯಾದಿ) ದರವನ್ನು ಗಣನೀಯವಾಗಿ ಇಳಿಸುವುದಾಗಿ ಭರವಸೆ ನೀಡಿ ಸಭೆಯನ್ನು ಚಕಿತಗೊಳಿಸಿದ್ದಾರೆ. ಆಂಧ್ರ ಪ್ರದೇಶದಲ್ಲಿ ಒಂದು ಕೋಟಿ ಓಟು ಬಿದ್ದರೆ ಬಿಜೆಪಿ ಅಧಿಕಾರಕ್ಕೆ ಬರುತ್ತದೆ. ಮದ್ಯದ ಬೆಲೆಯನ್ನು ಈಗ ಇರುವ ಯದ್ವಾತದ್ವಾ ದರದ ಬದಲಿಗೆ 75 ರೂಪಾಯಿಗೆ ಇಳಿಸಲಿದೆ ಎಂದು ಅವರು ಘೋಷಿಸಿದ್ದಾರೆ. ಪಕ್ಷಕ್ಕೆ ಇನ್ನೂ ಹೆಚ್ಚಿನ ಬಹುಮತ ದೊರೆತಲ್ಲಿ ಆದಾಯ ಸಂಪನ್ಮೂಲ ನೋಡಿಕೊಂಡು ಮದ್ಯದ ದರವನ್ನು 50 ರೂಪಾಯಿಗೇ ಇಳಿಸುವುದನ್ನೂ ಪಕ್ಷ/ ಸರ್ಕಾರ ಪರಿಶೀಲಿಸಲಿದೆ ಎಂದು ಅವರು ಹೇಳಿದ್ದಾರೆ. ಅವರ ಈ ಹೇಳಿಕೆಗೆ ಸಾರ್ವಜನಿಕ ವಲಯದಿಂದ ವ್ಯಾಪಕ ಸ್ವರೂಪದ ಟೀಕಾತ್ಮಕ ಪ್ರತಿಕ್ರಿಯೆ ಬಂದಿದೆ. ಅಧಿಕಾರಕ್ಕಾಗಿ ಏನನ್ನೂ ಮಾಡಲು ಹೇಸದ ಹೇಯ ರಾಜಕೀಯಕ್ಕೆ ಬಿಜೆಪಿ ಮುಂದಾಗಿದೆ ಎನ್ನುವುದು ಅದರ ವಿರುದ್ಧ ಮುಖ್ಯವಾಗಿ ಕೇಳಿಬರುತ್ತಿರುವ ಆರೋಪ.

ಕನಿಷ್ಟ ಪ್ರಮಾಣದಲ್ಲಾದರೂ ಸಾಮಾನ್ಯ ಪ್ರಜ್ಞೆ,ರಾಜಕೀಯ ಪಕ್ಷಗಳಲ್ಲಿ ಇರಬೇಕೆಂದು ಜನ ಬಯಸುತ್ತಾರೆ. ಹಣ, ಹೆಂಡದ ಆಮಿಷವನ್ನೊಡ್ಡಿ ಓಟು ಗಳಿಸುವ ಪ್ರವೃತ್ತಿಗೆ ದೇಶದ ಯಾವ ಪಕ್ಷವೂ ಹೊರತಾಗಿಲ್ಲ. ಬಿಜೆಪಿ ಅಥವಾ ಕಾಂಗ್ರೆಸ್ಸನ್ನು ಮಾತ್ರವೇ ಈ ಕಾರಣಕ್ಕಾಗಿ ಪ್ರತ್ಯೇಕಿಸಿ ಟೀಕಿಸುವುದರಲ್ಲೂ ಅರ್ಥವಿಲ್ಲ. ಅದೇನೇ ಇರಲಿ, ಸಾಮಾಜಿಕ, ಕೌಟುಂಬಿಕ ಬದುಕಿಗೆ ಮದ್ಯ ವ್ಯಸನ ಮಾಡಿರುವ ಮಾಡುತ್ತಿರುವ ಹಾನಿಗೆ, ಹಾವಳಿಗೆ ಪುಂಖಾನುಪುಂಖ ನಿದರ್ಶನಗಳಿವೆ. ಸ್ತ್ರೀ ಸಮುದಾಯದ ಬಹುದೊಡ್ಡ ಕವಲು ಮದ್ಯ ಮಾರಾಟ, ಸೇವನೆ ವಿರುದ್ಧ ಸಿಡಿದು ನಿಂತಿದೆ. "ಯತ್ರ ನಾರ್ಯಸ್ತು ಪೂಜ್ಯಂತೆ ತತ್ರ ರಮಂತೆ ದೇವತಾಃ" ಎನ್ನುವುದು ಸಂಘ ಪರಿವಾರ ಮುಖ್ಯವಾಗಿ ಬಳಸುವ ಬೀಜ ಮಂತ್ರಗಳಲ್ಲಿ ಒಂದು. ಆದರೆ ಸ್ತ್ರೀ ಕುಲಕ್ಕೆ ಬೇಡವಾಗಿರುವ ಚಟವೊಂದನ್ನು ರಾಜಕೀಯಕ್ಕೆ ನಿರ್ಲಜ್ಜ ರೀತಿಯಲ್ಲಿ ಬಳಸಿಕೊಳ್ಳಲು ಹೊರಟಿರುವ ಬಿಜೆಪಿ ಮುಖಂಡ ಸೋಮು ವೀರರಾಜು ಯಾವ ರೀತಿಯ ಸಂದೇಶವನ್ನು ರವಾನಿಸುವುದಕ್ಕೆ ಮುಂದಾಗಿದ್ದಾರೋ...?

ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ 2014ರಲ್ಲಿ ಖಾದ್ಯ ತೈಲದ ಬೆಲೆ ಕೆಜಿಗೆ 90 ರೂಪಾಯಿ ಇದ್ದುದು ಈಗ 300ಕ್ಕೆ ಏರಿದೆ. ಪೆಟ್ರೋಲ್, ಡೀಸೆಲ್ ಬೆಲೆಯಂತೂ ಆಕಾಶದತ್ತ ನೆಗೆಯುತ್ತಲೇ ಇದೆ. ಜನರ ಬದುಕನ್ನು ದಿನೇದಿನೇ ದುರ್ಭರಗಳಿಸುತ್ತಿರುವ ಅಗತ್ಯ ವಸ್ತುಗಳ ಬೆಲೆ ಇಳಿಕೆ ಮಾತನ್ನಾದರೂ ಆಡಬೇಕಿದ್ದ ಆಡಳಿತ ಅಧ್ಯಕ್ಷರಾದವರು ಜನರ ದುಃಖ ದುಮ್ಮಾನಕ್ಕೂ ಕಷ್ಟಕೋಟಲೆಗೂ ತಮಗೂ ಸಂಬಂಧವೇ ಇಲ್ಲ ಎಂಬಂತೆ ಇರುವುದು ನಮ್ಮ ದೇಶದ ವಿಪರೀತಗಳಲ್ಲಿ ಒಂದು.

# ರಾಜಕೀಯ
# ದಿವ್ಯನಿರ್ಲಕ್ಷ್ಯ
# ಬಿದ್ದ ಮಹದಾ

ಉತ್ತರ ಕರ್ನಾಟಕ ಅದರಲ್ಲೂ ಬರಗಾಲ ಪ್ರದೇಶಗಳಲ್ಲಿ ಕುಡಿಯುವ ನೀರು ಹಾಗೂ ನೀರಾವರಿ ಪ್ರದೇಶಗಳನ್ನಾಗಿ ನಿರ್ಮಾಣ ಮಾಡಲು ಸರ್ಕಾರಗಳು ಹಮ್ಮಿಕೊಂಡಿರುವ ಯೋಜನೆಗಳು ಇನ್ನೂ ಕೆಲವು ನೆನಗುದಿಗೆ ಬಿದ್ದಿವೆ. ಮಹದಾಯಿ ಯೋಜನೆ ಗೋವ ಸರ್ಕಾರದ ಅಡ್ಡಿಯಿಂದಾಗಿ ನೆನಗುದಿಗೆ ಬಿದ್ದಿದೆ ಅದೇ ಭದ್ರಾ ಯೋಜನೆಯೂ ಕೂಡ ಅದು ಕುಂಟುತ್ತಾ ಸಾಗುತ್ತಿದೆ.

ನಾಡಿನ ಜಲಸಂಪನ್ಮೂಲವನ್ನು ವ್ಯರ್ಥಗೊಳಿಸದೇ ಜನರ ಅಭಿವೃದ್ದಿಗೆ ಬಳಸಬೇಕು. ಈ ವಿಷಯದಲ್ಲಿ ಸಂಕುಚಿತ ಪ್ರಾದೇಶಿಕ ಭಾವನೆಗಳನ್ನು ಮೀರಬೇಕು. ಆತಂಕ-ವಿವಾದಗಳಿದ್ದಲ್ಲಿ ವಿಷಯ ತಜ್ಞರ ತಿರ್ಮಾನವನ್ನು ಒಪ್ಪಿಕೊಂಡು ಹೋಗಬೇಕು. ಆಳುವವರು ವಿಶಾಲ ಮನೋಭಾವವನ್ನು 'ಕೊಡು-ಕೊಳ್ಳುವ' ಮನೋಭಾವ ಮುತ್ಸದ್ದಿತನ ತೋರಬೇಕು. ಇಂತಹ ಪ್ರಭುದ್ದತೆ ಮತ್ತು ಆಳುವವರ ಇಚ್ಚಾಶಕ್ತಿಯ ಕೊರೆಯಿಂದಾಗಿ ಮಹದಾಯಿ ತಿರುವು ಯೋಜನೆ ಮತ್ತು ಕಳಸ-ಬಂಡೂರಿ, ನಾಲಾ ಯೋಜನೆ ಮುಂತಾದ ಯೋಜನೆಗಳು ನೆನೆಗುದಿಗೆ ಬಿದ್ದಿದೆ.

ಇಲ್ಲಿಯವರೆಗೆ ಆಡಳಿತ ನಡೆಸಿದ ಕೇಂದ್ರ-ರಾಜ್ಯ ಯಾವುದೇ ಕಾರಣಕ್ಕೂ ಗೊವಾ ಮತದಾರರನ್ನು ಎದುರು ಹಾಕಿಕೊಳ್ಳದ ಈ ಪಕ್ಷಗಳ ನಾಯಕರು ರಾಜ್ಯದಲ್ಲಿ ಇಂತ ಕೆಟ್ಟ ಸಂಪ್ರದಾಯದಲ್ಲಿ ಕೇವಲ ಮೇಕೆ ದಾಟು ಯೋಜನೆ ಕುರಿತು ಹೋರಾಟವನ್ನು ಹಮ್ಮಿಕೊಂಡಿದೆ ಅದು ಕೇವಲ ಬೂಟಾಟಿಕೆ .

ಈ ಈ ಮಹದಾಯಿ ಯೋಜನೆ ಜಾರಿಗೆ ಕುರಿತು ಇಡೀ ಚಿತ್ರರಂಗವೇ ದಂಗೆ ಎದ್ದು ಬಂದಿತ್ತು ರಾಜಕೀಯ ಪಕ್ಷಗಳಿಗಿಂತ ಚಿತ್ರರಂಗವೇ ಹೋರಾಟ ನಡೆಸಿದ್ದು ಇದೆ ಅದನ್ನು ಹೊರೆತು ಪಡೆಸಿದರೆ ಕಳಸಾ -ಬಂಡೂರಿ ಹೋರಾಟ ಸಮಿತಿ ವರ್ಷಗಟ್ಟಲೇ ಪ್ರತಿಭಟನೆಯನ್ನು ಹಮ್ಮಿಕೊಂಡಿತ್ತು ಆದರೆ ಅದಕ್ಕೆ ಸೊಪ್ಪು ಹಾಕದ ರಾಜಕೀಯ ಪಕ್ಷಗಳೂ ಈಗ ಮೇಕೆದಾಟು ಯೋಜನೆ ಒತ್ತಾಯಕ್ಕೆ ಹೋರಾಟ ಹಮ್ಮಿಕೊಂಡಿರುವ ಉದ್ದೇಶವಾದರೂ ಏನು ಎನ್ನುವುದು ಎಲ್ಲರಿಗೂ ತಿಳಿದಿರುವ ವಿಷಯವೇ.

## ಯೋಜನೆಗಳ ಏನು ಹೇಳುತ್ತವೆ

ಮೇಲಿಂದ ಮೇಲೆ ಬರಗಾಲಕ್ಕೆ ತುತ್ತಾಗುತ್ತಿದ್ದ ಗದಗ ಜಿಲ್ಲೆಯ ನರಗುಂದ, ರೋಣ, ಧಾರವಾಡ ಜಿಲ್ಲೆಯ ನವಲಗುಂದ ಹಾಗೂ ಬೆಳಗಾವಿ ಜಿಲ್ಲೆಯ ಸವದತ್ತಿ ಬೈಲಹೊಂಗಲ ತಾಲೂಕುಗಳಿಗೆ ನೀರಾವರಿಯ ಅಗತ್ಯತೆ ಇತ್ತು. ಈ ಭಾಗದ ಕುಡಿಯುವ ನೀರಿನ ಅಭಾವ ಹೇಳತೀರದಾಗಿತ್ತು. ಅದಕ್ಕಾಗಿ ರೂಪಗೊಂಡದ್ದು ಮಲಪ್ರಭಾ ನೀರಾವರಿ ಯೋಜನೆ. ಸವದತ್ತಿ ಹತ್ತಿರ 'ನವಿಲು ತೀರ್ಥ ಬಳಿ ಮಲಪ್ರಭಾ ನದಿಗೆ ಅಣೆಕಟ್ಟೆ ನಿರ್ಮಿಸಿ 5.27 ಲಕ್ಷ ಎಕರೆ ಭೂಮಿಗೆ ನೀರು ಒದಗಿಸುವ ಯೋಜನೆ ಇದಾಗಿತ್ತು. ಯೋಜನೆಯ ಕಾರ್ಯ 1961 ರಲ್ಲಿ ಪ್ರಾರಂಭಗೊಂಡು 1972-73ರ ಸುಮಾರಿಗೆ ಪೂರ್ಣಗೊಂಡಿತು. ಈ ಜಲಾಶಯ 37 ಟಿಎಂಸಿ ನೀರಿನ ಸಂಗ್ರಾಹಕ ಸಾಮರ್ಥ್ಯ ಹೊಂದಿದೆ. ಆದರೆ ಇಲ್ಲಿಯವರೆಗೆ ಜಲಾಶಯ ಸಂಪೂರ್ಣ ಭರ್ತಿಯಾಗಿದ್ದು 3-4 ಬಾರಿ ಮಾತ್ರ. ಹೀಗಾಗಿ ಘೋಷಿಸಿದ ಕ್ಷೇತ್ರಗಳಿಗೆ ನಿರೀಕ್ಷಿಸಿದ ಪ್ರಮಾಣದಲ್ಲಿ ನೀರು ಒದಗಿಸಲು ಸಾಧ್ಯವಾಗುತ್ತಿಲ್ಲ. ಇಷ್ಟಾಗಿ ರೋಣ ತಾಲೂಕಿನ 1.11 ಲಕ್ಷ ಎಕರೆ ಭೂಮಿಗೆ ನೀರು ಒದಗಿಸಲು ಘೋಷಿಸಿದ್ದರೂ ನೀರು ಲಭ್ಯವಾಗಿಲ್ಲ. ಮಲಪ್ರಭಾ ಜಲಾಶಯ(ರೇಣುಕಾಸಾಗರ)ದಲ್ಲಿ ನೀರಿನ ಸಂಗ್ರಹ ಕಡಿಮೆಯಾದ ಕಾರಣ ಮಳೆಯ ಕೊರತೆ ಒಂದು ಕಡೆಯ ಸಮಸ್ಯೆಯಾದರೆ, ನದಿ ನೀರು ಜಲಾಶಯ ತಲುಪುವ ಪೂರ್ವದಲ್ಲೇ ರೈತರಿಂದ ದೊಡ್ಡ ಪ್ರಮಾಣದಲ್ಲಿ ಬಳಕೆಯಾಗುವುದು ಇನ್ನೊಂದು ಕಡೆಯ ಸಮಸ್ಯೆ. ಇದರೊಂದಿಗೆ ಮಲಪ್ರಭಾ ಜಲಾಯನ ಪ್ರದೇಶ ಕಿರಿದಾಗಿದೆ.

ರೇಣುಕಾಸಾಗರದ ನೀರಿನ ಕೊರತೆಯನ್ನು ನೀಗಲು ಸಿದ್ಧವಾದ ಯೋಜನೆಯೇ ಮಹದಾಯಿ ತಿರುವು ಯೋಜನೆ. ಮಲಪ್ರಭಾ ನದಿಯಂತೆ ಮಹದಾಯಿ ನದಿ ಕೂಡಾ ಬೆಳಗಾವಿ ಜಿಲ್ಲೆ ಖಾನಾಪೂರ ತಾಲೂಕಿನಲ್ಲಿ ಉಗಮವಾಗಿದೆ. ಸಹ್ಯಾದ್ರಿ ಬೆಟ್ಟದಲ್ಲಿ ಸಮುದ್ರ ಮಟ್ಟದಿಂದ 914 ಮೀ. ಎತ್ತರದಲ್ಲಿ ಹುಟ್ಟಿದ ಈ ನದಿ ಕನರ್?ಟಕದಲ್ಲಿ 29 ಕಿ.ಮೀ. ಕ್ರಮಿಸಿ ಗೋವಾ ರಾಜ್ಯದಲ್ಲಿ ಹರಿದು ಅರಬ್ಬಿ ಸಮುದ್ರ ಸೇರುತ್ತದೆ. ಈ ನದಿಗೆ ಗೋವಾದಲ್ಲಿ 'ಮಾಂಡೋವಿ' ಎಂದು ಹೆಸರು. ಮಹದಾಯಿ ನದಿಗೆ ಹಲತಾರಾ, ಕಳಸಾ, ಬಂಡೂರಿ, ಕಾರಂಜೋಳ, ಬೊಮ್ಮನರಿ ದೂದ ಸಾಗರ ಹೀಗೆ ಅನೇಕ ಉಪನದಿಗಳಿಂದ ಕೂಡಿದ ನದಿ ಕಣಿವೆ ಆಗಿದೆ. ಇದು ಹೆಚ್ಚು ಮಳೆಬೀಳುವ ಪ್ರದೇಶವಾಗಿದ್ದು ಸರಾಸರಿ 3,134 ಮಿಲಿಮೀಟರ್ ಮಳೆ ಬೀಳುತ್ತದೆ. ಮಹಾದಾಯಿ ನದಿ ಕಣಿವೆಯಿಂದ ಕಾಲುವೆ ಮೂಲಕ ಮಲಪ್ರಭಾ ನದಿಗೆ ನೀರು ವರ್ಗಾಯಿಸುವುದೇ ಈ ಯೋಜನೆಯ ಉದ್ದೇಶ. ಗೋವಾದ ವಿರೋಧ

1978ರಲ್ಲಿಯೇ ಈ ಯೋಜನೆ ಸಿದ್ಧವಾದರೂ ಕಾರ್ಯರೂಪಕ್ಕೆ ಬರಲಿಲ್ಲ. ಇದನ್ನೊಂದು ಜಲವಿದ್ಯುತ್ ಯೋಜನೆಯಾಗಿ ಮಾರ್ಪಡಿಸಿ ಮಹಾದಾಯಿ ಜಲಾಯನ ಪ್ರದೇಶದಿಂದ 9 ಟಿಎಂಸಿ ನೀರನ್ನು ಮಲಪ್ರಭಾಗೆ ವರ್ಗಾಯಿಸಿ ವಿದ್ಯುತ್ ಉತ್ಪಾದನೆಗೂ ಯೋಜಿಸಲಾಗಿತ್ತು. (5-11-1988)1988 ರಲ್ಲಿ ಇದಕ್ಕೆ ಕರ್ನಾಟಕ ಸರ್ಕಾರ ಅನುಮೋದನೆ ನೀಡಿತು. ಆದರೆ ಗೋವಾ ಸರ್ಕಾರದ ತೀವ್ರಆದರೆ ಗೋವಾ ರ

ಸರಕಾರದ ತೀವ್ರ ವಿರೋಧದಿಂದ ಯೋಜನೆಗೆ ತಡೆಯಾಯಿತು. ಮಹಾದಾಯಿ 2,032 ಚ.ಕಿ.ಮೀ. ಜಲಾನಯನ ಪ್ರದೇಶ ಹೊಂದಿದ್ದು ಅದರಲ್ಲಿ ಕರ್ನಾಟಕದ ಪಾಲು 412 ಚ.ಕಿ.ಮೀ. ಕೇಂದ್ರದ ಜಲ ಆಯೋಗದ ಸಮೀಕ್ಷೆಯಂತೆ ನದಿಯಲ್ಲಿ ಒಟ್ಟು 210 ಟಿಎಂಸಿ ನೀರು ಲಭ್ಯವಿದ್ದು ಕರ್ನಾಟಕ 45 ಟಿಎಂಸಿ ನೀರಿನ ಪಾಲಿನ್ನು ಹೊಂದಿದೆ. ಗೋವಾ ಸರ್ಕಾರ ಮ

ನದಿಗೆ ಜಲವಿದ್ಯುತ್ ಆಗಲಿ, ಇತ

ಯೋಜನೆಯನ್ನೂ ರೂಪಿಸಿಲ್ಲ. ಕ

ತನ್ನ ಪಾಲಿನ ನೀರು ಪಡೆಯಲು

ರೂಪಿಸಿದರೂ ಅದಕ್ಕೆ ಗೋವಾ ಅ

'ತಾನೂ ತಿನ್ನ ಪರರಿಗೂ ಕೂಡ'

ಇದೆ ಅಲ್ಲವೆ?

## ಕಳಸಾ-ಬಂಡೂರಿ ಯೋ

ಕಳಸಾ ಹಳ್ಳವು ಕರ್ನಾಟಕದಲ್ಲಿ

ದಕ್ಷಿಣಾಭಿಮುಖವಾಗಿ ಹರಿದು ಗ

ಮಹದಾಯಿ ನದಿಯನ್ನು ಸೇರುತ್ತ

ಕರ್ನಾಟಕದಲ್ಲಿ 24 ಚದರ ಕಿ.ಮೀ

ಪ್ರದೇಶ ಹೊಂದಿದ್ದು ಕೆಲವು ಉಪ

ಕರ್ನಾಟಕದಲ್ಲಿ ಹುಟ್ಟಿ ಗೋವಾದ

ಹಳ್ಳವನ್ನು ಸೇರುತ್ತವೆ. ಈ ಹಳ್ಳದಿ

ಟಿಎಂಸಿ ನೀರನ್ನು ಪಡೆಯುವ ಉ

ತಯಾರಿಸಲಾಗಿದೆ. ಕಳಸಾ ಯೋ

ಅಣೆಕಟ್ಟೆಗಳನ್ನು ನಿರ್ಮಿಸುವುದು.

(1) ಕಳಸಾ ಹಳ್ಳಕ್ಕೆ ಅಣೆಕಟ್ಟು

ಕಾಲುವೆ ನಿರ್ಮಾಣ.

(2) ಹಳತಾರ ಹಳ್ಳಕ್ಕೆ ಅಣೆಕಟ

ಸಂಗ್ರಹವಾದ ನೀರನ್ನು 5.5 ಕಿ.ಮ


ಮೂಲಕ ಕಳಸಾ ಅಣೆಕಟ್ಟೆಗೆ ಸಾಗಿ

ಇದರ ಒಟ್ಟು ವೆಚ್ಚ ಯೋಜನೆ

ರೂ.ಗಳು. ಆದರೆ ಈಗ ಅದರ ವ

ಗಳು. ಇಲ್ಲಿಯವರೆಗೆ ಮಾಡಿದ ವೆ


ಆದರೂ ಯೋಜನೆ ಅಪೂರ್ಣವಾ




ಸರ್ಕಾರಗಳು ಒಂದು ನೀರಿನ ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ ಇಚ್ಚಾಶಕ್ತಿಯನ್ನು ತೋರದೆ ಯೋಜನೆಯ ಅನುಷ್ಠಾನಕ್ಕೆ ದಿವ್ಯ ನಿರ್ಲಕ್ಷ್ಯ, ನಿರಾಸಕ್ತಿ ತೋರಿದಲ್ಲಿ ಆ ಯೋಜನೆ ಹೇಗೆ ನೆನೆಗುದಿಗೆ ಬೀಳುತ್ತದೆ ಎಂಬುದಕ್ಕೆ ಮಹದಾಯಿ ತಿರುವು ಯೋಜನೆ ಒಂದು ಉದಾಹರಣೆ. ಜನರಿಗೆ ಅತ್ಯಂತ ಅಗತ್ಯವಾದ ಒಂದು ಕುಡಿಯುವ ನೀರಿನ ಯೋಜನೆ ಎರಡು-ಮೂರು ದಶಕ ಕಳೆದರೂ ಜಾರಿಯಾಗಲಿಲ್ಲ. ಅಷ್ಟೆ ಅಲ್ಲ ಸರ್ಕಾರಗಳು ಸಮಸ್ಯೆಯನ್ನು ಕ್ಲಿಷ್ಟಗೊಳಿಸಿವೆ ಕಗ್ಗಾಂಟಾಗಿಸಿವೆ. ಜನಹಿತ ಮರೆತು ತಮ್ಮ ಹೊಣೆಗೇಡಿತನ ಮೆರೆದಿವೆ

ಆದರೆ ಈಗ ಕಾಂಗ್ರೆಸ್ ಪಕ್ಷ ಕೇವಲ ಮೇಕೆದಾಟು ಯೋಜನೆ ಜಾರಿಗೆ ಒತ್ತಾಯಿಸಿ ಕಾಲುಜಾತ ಹಮ್ಮಿಕೊಂಡಿದೆ ಉತ್ತರ ಕರ್ನಾಟಕದ ಇಂತ ಮಹತ್ವದ ಯೋಜನೆ ಬಗ್ಗೆ ಕಾಳಜಿ ಇಲ್ಲದ ಈ ರಾಜಕೀಯ ಪಕ್ಷಗಳು ಕೇವಲ ಮತಗಳಿಕೆಗೆ ಆ ಭಾಗದ ಜನರನ್ನು ಯೋವುದೋ ಕಾರಣಕ್ಕೆ ಓಲೈಸಲು ಈ ಕಾರ್ಯವನ್ನು ಕೈಗೊಂಡಿದೆ ಹಾಗಾದರೆ ಉತ್ತರ ಕರ್ನಾಟಕದ ಈ ಮಹತ್ವದ ಯೋಜನೆ ಬಗ್ಗೆ ದಿವ್ಯ ನಿರ್ಲಕ್ಷಯವೇಕೆ? ಈ ಯೋಜನೆ ಜಾರಿ ಕುರಿತು ಕಾಂಗ್ರೆಸ್ ಪಕ್ಷ ಯಾಕೆ ಯೋರಾಟ ಹಮ್ಮಿಕೊಂಡಿಲ್ಲ ಎನ್ನುವುದಕ್ಕೆ ಕಾರಣವೂ ಇದೆ ಯಾಕೆಂದರೆ ಗೋವಾ ಸರ್ಕಾರ ಈ ಯೋಜನೆಗೆ ಅಡ್ಡಿ ಪಡಿಸುತ್ತಿರುವ ಕಾರಣ ಎರಡು ರಾಷ್ಟ್ರೀಯ ಪಕ್ಷಗಳು ಗೋವಾ ಪರವಾಗಿವೆ





# ನಾಯಕರ
# ಕ್ಕೆ ನೆನಗುದಿಗೆ
# ಯಿ ಯೋಜನೆ



ಹದಾಯಿ
ರ ಇನ್ನಾವುದೆ
ರ್?ಟಕ
ಯೋಜನೆ
ತಂಕ ಒಡ್ಡುತ್ತಿದೆ.
ಎನ್ನುವ ನೀತಿ

## ೕಜನೆ :

ಹುಟ್ಟಿ
ೕವಾದಲ್ಲಿ
ದೆ.
. ಜಲಾನಯನ
ಹಳ್ಳಗಳು
ಲ್ಲಿ ಕಳಸಾ
ಂದ 3.56
ದ್ದೇಶದಿಂದ ಯೋಜನೆ
ಜನೆಗೆ ಎರಡು


ಹಾಗೂ 4.8 ಕಿ.ಮಿ. ಉದ್ದದ

ಟ್ಟು ನಿಮರ್?ಸಿ ಅಲ್ಲಿ
ೕ. ಉದ್ದದ ಕಾಲುವೆಯ
ಸುವುದು.
ರೂಪಿಸಿದಾಗ 44 ಕೋಟಿ
ಚ್ಚ 428 ಕೋಟಿ ರೂ.
ಚ್ಚ 125 ಕೋಟಿ ರೂ.ಗಳು.
ಗಿದೆ.



ಬಂಡೂರಿ ಮಹದಾಯಿ ನದಿಯ ಇನ್ನೊಂದು ಉಪನದಿ. ಸಿಂಗಾರ ನಾಲಾ ಹಾಗೂ ವಾಟಿ ನಾಲಾಗಳಿಗೆ ಅಣೆಕಟ್ಟು ಕಟ್ಟಿ ಸಂಗ್ರಹವಾದ ನೀರನ್ನು ಬಂಡೂರಿ ಜಲಾಶಯಕ್ಕೆ ವಗರ್?ಯಿಸುವುದು ಇಲ್ಲಿ ಸಂಗ್ರಹವಾದ 4 ಟಿಎಂಸಿ ನೀರನ್ನು ಕಾಲುವೆ ಮೂಲಕ ಮಲಪ್ರಭಾ ನದಿಗೆ ವಗರ್?ಯಿಸುವುದು. ಬಂಡೂರ ನಾಲಾ ಯೋಜನೆಗೊಳಪಡುವ ಜಲಾನಯನ ಪ್ರದೇಶ 32.25 ಚ.ಕಿ.ಮೀ. ಇದರಿಂದ ಒಟ್ಟು 380 ಹೆಕ್ಟೇರ್ ಭೂಮಿ ಮುಳುಗಡೆ ಆಗಲಿದೆ. ಇದರ ವೆಚ್ಚ ಯೋಜನೆ ತಯಾರಿಸುವಾಗ 49 ಕೋಟಿ ರೂ.ಗಳು. ಈಗ ಅದರ ವೆಚ್ಚ 370 ಕೋಟಿ ರೂ. ಆಗಿದೆ.

ಈ ಎರಡೂ ಯೋಜನೆಗಳಿಂದ ಒಟ್ಟು 7.56 ಟಿಎಂಸಿ ನೀರು ಲಭ್ಯವಾಗಲಿದೆ. ಇದುವೆ ಕಳಸಾ–ಬಂಡೂರಿ ನಾಲಾ ಯೋಜನೆ. ಯೋಜನೆಯ ಅನುಷ್ಠಾನ ತಡವಾಗುವುದರಿಂದ




ನಿರ್ಮಾಣ ವೆಚ್ಚದ ಏರಿಕೆಯಾಗುತ್ತದೆ ಎನ್ನುವುದು ಮೇಲಿನ ಅಂಕಿಅಂಶಗಳಿಂದ ವೇದ್ಯವಾಗುತ್ತದೆ. ಈ ಹಣ ಬಡ ಬೋರೇಗೌಡನ ಹೆಗಲಿಗೆ ಭಾರವಾಗದೆ?

## ಯಾಕೆ ಈ ಯೋಜನೆಗಳು?

ಗೋವಾ ಸರ್ಕಾರದ ನಿರಂತರ ವಿರೋಧದಿಂದಾಗಿ ಮಹದಾಯಿ ತಿರುವು ಯೋಜನೆ ಅನುಷ್ಠಾನಗೊಳ್ಳಲಿಲ್ಲ. ಆದರೆ ರೇಣುಕಾಸಾಗರದಲ್ಲಿ ನೀರಿನ ಕೊರತೆ ನೀಗಲು ಮಹದಾಯಿ ನದಿ ಕೊಳ್ಳದಿಂದ ಸ್ವಲ್ಪ ನೀರನ್ನು ವರ್ಗಾಯಿಸಲೇಬೇಕೆಂಬ ಉದ್ದೇಶದಿಂದ ಕಳಸಾ–ಬಂಡೂರಿ ನಾಲಾ ಯೋಜನೆ ರೂಪಿಸಲಾಯಿತು. ಗೋವಾ ಗಡಿಯಿಂದ ಈಚೆಗೆ ಈ ಎರಡು ನಾಲೆಗಳಿಗೆ ಆಣೆ ಕಟ್ಟಿ ನಿರ್ಮಿಸಿ ನೀರು ಪಡೆಯುವ ಯೋಜನೆ ಇದಾಗಿದೆ. ಇದಕ್ಕೂ ಗೋವಾದ ತಕರಾರು ಇದೆ.

ಒಂದು ಹಂತದಲ್ಲಿ ಗೋವಾ ಮತ್ತು ಕರ್ನಾಟಕ ಸರಕಾರ ನಡುವೆ ಜಲವಿದ್ಯುತ್ ಯೋಜನೆಗೆ ಒಪ್ಪಂದವಾಗಿತ್ತು. ದಿ. 10–9–1996 ರಂದು ಗೋವಾ ಸಕರ್?ರದ ನೀರಾವರಿ ಮಂತ್ರಿ ಹಾಗೂ ಕರ್ನಾಟಕ ನೀರಾವರಿ ಸಚಿವರ ಒಂದು ಸಭೆ ನಡೆದು ಜಲವಿದ್ಯುತ್ ಯೋಜನೆ ಮತ್ತು ಕಳಸಾ–ಹರತಾರ ನದಿಗಳಿಂದ ನೀರು ವರ್ಗಾವಣೆ ಕುರಿತು ಚರ್ಚೆಯಾಗಿ ಕಳಸಾ ಯೋಜನೆಯಿಂದ 1.5 ಟಿಎಂಸಿ ನೀರನ್ನು ಮಾಂಡೋವಿ ಯೋಜನೆಗೆ ಹರಿಸುವ ಕರಾರಿನೊಂದಿಗೆ ಈ ಯೋಜನೆಗೆ ಒಪ್ಪಂದವಾಯಿತು. ಆದರೆ 5–3–1997 ರಂದು ಗೋವಾ ಸರ್ಕಾರ ನೀರು ವರ್ಗಾಯಿಸುವುದಕ್ಕೆ ಒಪ್ಪಿಗೆ ಆಗಿಲ್ಲ ಎಂದು ತಿಳಿಸಿತು.

## ಗೋವಾದ ವಾದವೇನು?

ಮಹದಾಯಿ ನೀರಿನ ಕೊರತೆಯನ್ನು ಅನುಭವಿಸುತ್ತಿರುವ ಒಂದು ಕಣಿವೆ ಪ್ರದೇಶವಾಗಿದೆ. ಆದ್ದರಿಂದ ನೀರಿನ ಕೊರತೆ ಇರುವ ಕಣಿವೆಯಿಂದ ನೀರನ್ನು ಬೇರೆಡೆಗೆ ವರ್ಗಾಯಿಸುವುದು ಸೂಕ್ತವಲ್ಲ.

ಮಹದಾಯಿ ನದಿ ನೀರನ್ನು ಬೇರೆಡೆಗೆ ವರ್ಗಾಯಿಸಿದರೆ ಪಶ್ಚಿಮ ಘಟ್ಟದ ಪರಿಸರದ ಮೇಲೆ ತೀವ್ರ ಪರಿಣಾಮ ಉಂಟಾಗುವುದು. ಆಕಾರಣಕ್ಕಾಗಿ ಈ ಯೋಜನೆಗೆ ಆ ಸರ್ಕಾರ ಅಡ್ಡಿಪಡಿಸುತ್ತಿದೆ.

## ಆಣೆಕಟ್ಟು ಸುರಕ್ಷತಾ ಕಾಯ್ದೆ ಜಾರಿ ಏನು ಹೇಳುತ್ತದೆ

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಏಳು ದಶಕಗಳ ನಂತರ, ಅಣೆಕಟ್ಟುಗಳ ಸುರಕ್ಷತೆಗೆ ಸಂಬಂಧಿಸಿದ ಮಸೂದೆಗೆ ಈ ತಿಂಗಳ ಪ್ರಾರಂಭದಲ್ಲಿ ರಾಜ್ಯಸಭೆ ಅನು ಮೋದನೆ ನೀಡಿದೆ. 2019ರ ಆಗಸ್ಟ್ ತಿಂಗಳಿನಲ್ಲಿ ಇದನ್ನು ಲೋಕಸಭೆ ಅಂಗೀಕರಿಸಿತ್ತು. ರಾಷ್ಟ್ರಪತಿಯವರ ಅಂಕಿತದ ನಂತರ 'ಅಣೆಕಟ್ಟು ಸುರಕ್ಷತಾ ಅಧಿನಿಯಮ– 2021' ವಿಧ್ಯುಕ್ತವಾಗಿ ಜಾರಿಗೆ ಬರಲಿದೆ.

ಕೇಂದ್ರೀಯ ಜಲ ಆಯೋಗದ ಮೂಲದಂತೆ, ನಮ್ಮ ದೇಶದಲ್ಲಿ 5,745 ಬೃಹತ್ ಅಣೆಕಟ್ಟುಗಳಿವೆ. ಇವುಗಳಲ್ಲಿ 100 ವರ್ಷ ಮೀರಿರುವ ಸುಮಾರು 400 ಅಣೆಕಟ್ಟುಗಳಿದ್ದು, ಅವುಗಳ ಸುರಕ್ಷತೆಯ ಬಗ್ಗೆ ಅತಿ ಹೆಚ್ಚಿನ ಕಾಳಜಿ ವಹಿಸಬೇಕಾದ ತುರ್ತು ಅಗತ್ಯವಿದೆ. ಇದಕ್ಕೆ ಕಾರಣ ಇದುವರೆವಿಗೂ ಸಂಭವಿಸಿರುವ ಬೃಹತ್ ಅಣೆಕಟ್ಟುಗಳ ಬಿರಿತ, ಕುಸಿತ, ಒಡೆತ ಮುಂತಾದ ವೈಫಲ್ಯಗಳ 40 ಗಂಭೀರ ಪ್ರಕರಣಗಳು.

1979ರಲ್ಲಿ ಗುಜರಾತ್‌ನ ಮೋರ್ವಿ ಪಟ್ಟಣದ ಸಮೀಪವಿರುವ ಮಚು ಅಣೆಕಟ್ಟು ಒಡೆದು 12,000 ಮನೆಗಳು ಕೊಚ್ಚಿಹೋಗಿ, ಸುಮಾರು 2,000 ಮಂದಿ ಸಾವನ್ನಪ್ಪಿದರು. ಈ ಭೀಕರ ಅವಘಡದ ನಂತರ ಎಚ್ಚೆತ್ತ ಹಲವಾರು ರಾಜ್ಯ ಸರ್ಕಾರಗಳು, ರಾಜ್ಯ ಮಟ್ಟದಲ್ಲಿ 'ಅಣೆಕಟ್ಟು ಸುರಕ್ಷತಾ ಸಂಸ್ಥೆ'ಗಳನ್ನು ಸ್ಥಾಪಿಸಿ ಸುರಕ್ಷತಾ ಕ್ರಮಗಳನ್ನು ಕೈಗೊಂಡವು. ಇಂದು 18 ರಾಜ್ಯಗಳಲ್ಲಿ ಅಲ್ಲದೆ, ನ್ಯಾಷನಲ್ ಹೈಡ್ರೊಎಲೆಕ್ಟ್ರಿಕ್ ಪವರ್ ಕಾರ್ಪೊರೇಷನ್, ಭಾಕ್ರಾ– ಬಿಯಾಸ್, ದಾಮೋದರ್ ವ್ಯಾಲಿ, ಕೇರಳ ರಾಜ್ಯ ವಿದ್ಯುತ್ ಮಂಡಳಿ ಮತ್ತು ಉತ್ತರಾಖಂಡ ಜಲವಿದ್ಯುತ್ ನಿಗಮಗಳಲ್ಲಿ ಅಣೆಕಟ್ಟು ಸುರಕ್ಷತಾ ಸಂಸ್ಥೆಗಳು ಅಸ್ತಿತ್ವದಲ್ಲಿದ್ದರೂ ಅವುಗಳ ಕೆಲಸ ಕಾರ್ಯಗಳಲ್ಲಿ ಅನೇಕ ಕೊರತೆಗಳಿವೆ. ಎಲ್ಲಕ್ಕಿಂತ ಮುಖ್ಯವಾಗಿ ಈ ಸಂಸ್ಥೆಗಳು ಸಲಹೆಗಳನ್ನು ನೀಡಬಹುದೇ ವಿನಾ ಅಣೆಕಟ್ಟುಗಳ ಸುರಕ್ಷತೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಅಧಿಕಾರ ಅವುಗಳಿಗಿಲ್ಲ.

ಅಣೆಕಟ್ಟುಗಳ ಸುರಕ್ಷತೆಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನಿರ್ದಿಷ್ಟ ಹಾಗೂ ಸ್ಪಷ್ಟವಾದ ಜವಾಬ್ದಾರಿಗಳನ್ನು ನೀಡಲು ಅಗತ್ಯವಾದ ಕಾನೂನು ಮತ್ತು ಸಾಂಸ್ಥಿಕ ಚೌಕಟ್ಟನ್ನು ಈ ಅಧಿನಿಯಮ ಒದಗಿಸಲಿದೆ. ಅಣೆಕಟ್ಟುಗಳ ವೈಫಲ್ಯ ದಿಂದಾಗುವ ಅವಘಡಗಳನ್ನು ತಡೆಯಲು ಬೃಹತ್ ಅಣೆ ಕಟ್ಟುಗಳ ಮೇಲೆ ಕಣ್ಗಾವಲು, ಪರಿಶೀಲನೆ, ದಿನನಿತ್ಯದ ಕಾರ್ಯಾಚರಣೆ, ನಿರ್ವಹಣೆಗೆ ಅಗತ್ಯವಾದ ಎಲ್ಲ ವ್ಯವಸ್ಥೆಗಳನ್ನೂ ಕಲ್ಪಿಸಲಿದೆ.

ಕೇಂದ್ರದ ಹಂತದಲ್ಲಿ 'ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಸಮಿತಿ' ಮತ್ತು 'ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಪ್ರಾಧಿಕಾರ' ಎಂಬ ಎರಡು ಸಂಸ್ಥೆಗಳು ರಚನೆಯಾಗಲಿವೆ. ರಾಷ್ಟ್ರೀಯ ಸಮಿತಿ, ಅಣೆಕಟ್ಟುಗಳ ಸುರಕ್ಷತೆಗೆ ಸಂಬಂಧಿಸಿದ ನೀತಿ–ನಿಲುವುಗಳು, ವಿಧಿ ವಿಧಾನಗಳು, ಸುರಕ್ಷತೆ ಮತ್ತು ಅವಘಡ ನಿಯಂತ್ರಣ ಗಳಿಗೆ ಅಗತ್ಯವಾದ ಮಾರ್ಗದರ್ಶಿ ಸೂತ್ರಗಳನ್ನು ಸಿದ್ಧಪಡಿಸಲಿದೆ. ರಾಷ್ಟ್ರೀಯ ಸುರಕ್ಷತಾ ಪ್ರಾಧಿಕಾರ ಈ ಎಲ್ಲ ನೀತಿ ನಿಯಮಗಳನ್ನು ಅನುಷ್ಠಾನಗೊಳಿಸಲಿದೆ. ಈ ಸಂಬಂಧ ಪ್ರಾಧಿಕಾರ ನೀಡುವ ಆದೇಶ ಎಲ್ಲ ರಾಜ್ಯ ಸರ್ಕಾರಗಳಿಗೂ ಕಡ್ಡಾಯವಾಗಿ ಅನ್ವಯವಾಗಲಿದೆ. ಇದೇ ರೀತಿ ರಾಜ್ಯ ಮಟ್ಟದಲ್ಲೂ 'ರಾಜ್ಯ ಅಣೆಕಟ್ಟು ಸುರಕ್ಷತಾ ಸಂಸ್ಥೆ' ಮತ್ತು ರಾಜ್ಯ ಅಣೆಕಟ್ಟು ಸುರಕ್ಷತಾ ಸಮಿತಿ ಅಸ್ತಿತ್ವಕ್ಕೆ ಬರಲಿವೆ. ಇವುಗಳ ಕರ್ತವ್ಯಗಳನ್ನು ಸ್ಪಷ್ಟವಾಗಿ ನಿರೂಪಿಸಲಾಗಿದ್ದು, ಒಟ್ಟಾರೆಯಾಗಿ ಅವು ರಾಜ್ಯದ ವ್ಯಾಪ್ತಿ ಯಲ್ಲಿನ ಅಣೆಕಟ್ಟುಗಳ ನಿಗಾವಣೆ, ಕಾರ್ಯಾಚರಣೆ, ನಿರ್ವಹಣೆಯ ಜವಾಬ್ದಾರಿಗಳನ್ನು ನಿರ್ವಹಿಸಲಿವೆ.

ದೇಶದಲ್ಲಿ 15 ಮೀಟರ್‌ಗಳಿಗಿಂತ ಎತ್ತರವಿರುವ ಅಥವಾ 10–15 ಮೀಟರ್‌ಗಳಷ್ಟು ಎತ್ತರವಿದ್ದು, ಕನಿಷ್ಠ 10 ಲಕ್ಷ ಘನ ಮೀಟರ್‌ಗಳಷ್ಟು ನೀರನ್ನು ಸಂಗ್ರಹಿಸಬಲ್ಲ ಅಣೆಕಟ್ಟುಗಳನ್ನು ಬೃಹತ್ ಅಣೆಕಟ್ಟು ಗಳೆಂದು ವರ್ಗೀಕರಿಸಲಾಗಿದೆ. ಈ ಅಧಿನಿಯಮವು ದೇಶದ ಅಂತಹ ಎಲ್ಲ ಅಣೆಕಟ್ಟುಗಳಿಗೆ ಅನ್ವಯವಾಗ ಲಿದೆ. ಅವುಗಳ ಸುರಕ್ಷತೆಗೆ ಇದುವರೆಗೆ ನೀತಿ ನಿಯಮ ಗಳೇ ಇರಲಿಲ್ಲವೆಂದಲ್ಲ. ವರ್ಷದಲ್ಲಿ ಎರಡು ಬಾರಿ, ಮಳೆಗಾಲದ ಮೊದಲು ಮತ್ತು ಆನಂತರ ಅಣೆಕಟ್ಟು ಗಳ ವಿವರವಾದ ಪರೀಕ್ಷೆ, ಕೋಡಿಯ ವ್ಯವಸ್ಥೆ, ಅಣೆಕಟ್ಟೆಯಲ್ಲಿರುವ ಸುರಂಗ, ಕೊಳವೆ ಮಾರ್ಗ, ವಿದ್ಯು ದುತ್ಪಾದನೆಗೆ ನೀರು ಹಾಯಿಸುವ ಪೈಪುಗಳು, ತೂಬು ಗೇಟುಗಳು, ನಿಗಾವಣೆಯ ಸಾಧನಗಳ ಸ್ಥಿತಿಗತಿ, ಇಡೀ ಅಣೆಕಟ್ಟೆಯ ಆರೋಗ್ಯ, ತುರ್ತು ಕಾರ್ಯಾಚರಣೆಯ ಯೋಜನೆಗಳು ಮುಂತಾದ ಎಲ್ಲ ಅಂಶಗಳನ್ನೂ ವ್ಯವ ಸ್ಥಿತವಾಗಿ ಮಾಡಬೇಕಾದ ಕ್ರಮವನ್ನು 'ಅಣೆಕಟ್ಟು ಪುನರ್ವಸತೀಕರಣ ಮತ್ತು ಸುಧಾರಣಾ ಕೈಪಿಡಿ'ಯಲ್ಲಿ ಸ್ಪಷ್ಟವಾಗಿ ನಿರೂಪಿಸಲಾಗಿದೆ. ವರ್ಷದಲ್ಲಿ ಎರಡು ಬಾರಿ ಇಂತಹ ಪರೀಕ್ಷೆ ನಡೆಸಿ ವರದಿಯನ್ನು ಕೇಂದ್ರೀಯ ಜಲ ಆಯೋಗಕ್ಕೆ ಸಲ್ಲಿಸಬೇಕು. ಆದರೆ ಬಹುತೇಕ ರಾಜ್ಯಗಳು ಇಂತಹ ವಿವರವಾದ ಸುರಕ್ಷತಾ ಪರಿಶೀಲನೆ ಕೈಗೊಳ್ಳುವುದೂ ಇಲ್ಲ, ವರದಿಯನ್ನು ಸಲ್ಲಿಸುವುದೂ ಇಲ್ಲವೆನ್ನುವುದು, ಇಂತಹ ವರದಿಗಳನ್ನು ಪರಿಶೀಲಿಸುವ ಭಾರತದ ಮಹಾಲೇಖಪಾಲರ ಕಟುವಾದ ಟೀಕೆ. ಅಣೆಕಟ್ಟುಗಳ ಸುರಕ್ಷತೆಗೆ ಸಂಬಂಧಿಸಿದ ಈ ನಿರಾಶಾದಾಯಕ ಪರಿಸ್ಥಿತಿಯು 2021ರ ಅಧಿನಿಯಮ ಜಾರಿಗೆ ಬಂದ ನಂತರ ನಿಧಾನವಾಗಿಯಾದರೂ ಬದ ಲಾಗುವ ನಿರೀಕ್ಷೆಯಿದೆ.2021ರ ಅಣೆಕಟ್ಟು ಸುರಕ್ಷತಾ ಮಸೂದೆಯನ್ನು ಕೆಲ ರಾಜ್ಯಗಳು ವಿರೋಧಿಸಿದ್ದು ಉಂಟು. ಈ ವಿರೋಧಕ್ಕೆ ಮುಖ್ಯವಾಗಿ ಎರಡು ಕಾರಣಗಳಿವೆ. ರಾಜ್ಯದ ಭೌಗೋಳಿಕ ವ್ಯಾಪ್ತಿಯಲ್ಲಿರುವ ಅಣೆಕಟ್ಟುಗಳ ಸುರಕ್ಷತೆ, ನಿರ್ವಹಣೆಗೆ ಸಂಬಂಧಿಸಿದಂತೆ ಶಾಸನಗಳನ್ನು ಮಾಡುವ ರಾಜ್ಯಗಳ ಹಕ್ಕು, ಅಧಿಕಾರಗಳನ್ನು ಈ ಮಸೂದೆಯು ಮೊಟಕುಗೊಳಿಸುತ್ತದೆ ಎಂಬುದು ಮೊದಲನೆಯ ದೂರು. ಆದರೆ ದೇಶದ ಅಣೆಕಟ್ಟುಗಳ ಒಟ್ಟಾರೆ ಸುರಕ್ಷತೆಯ ದೃಷ್ಟಿಯಿಂದ ಇಂತಹ ಶಾಸನವನ್ನು ಮಾಡುವ ಸಂವಿಧಾನಾತ್ಮಕ ಅಧಿಕಾರ ತನಗಿದೆಯೆಂಬುದನ್ನು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ. ಇನ್ನೊಂದು ಕಾರಣವೆಂದರೆ, ಕೆಲವು ಅಣೆಕಟ್ಟುಗಳಿಗೆ ಸಂಬಂಧಿಸಿದಂತೆ ಇರುವ ವಿಚಿತ್ರ ಪರಿಸ್ಥಿತಿ.

ಅತಿ ಹೆಚ್ಚು ಅಣೆ ಕಟ್ಟುಗಳನ್ನು ಹೊಂದಿರುವ ಭಾರತ, ಅಣೆಕಟ್ಟುಗಳ ಸುರಕ್ಷತೆಯ ದೃಷ್ಟಿಯಿಂದ ಮಾಡಬೇಕಿರುವ ಕೆಲಸಗಳು ಬಹಳಷ್ಟಿವೆ. ನೀರಿನ ಕೊರತೆ ನಿರಂತರವಾಗಿ ಏರುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ, ಪ್ರಜೆಗಳಿಗೆ 'ಜಲ ಸುರಕ್ಷತೆ'ಯ ಭರವಸೆ ನೀಡಿರುವ ಸರ್ಕಾರ, ಸಣ್ಣ, ಮಧ್ಯಮ, ಬೃಹತ್ ಅಣೆಕಟ್ಟುಗಳೆಲ್ಲವನ್ನೂ ಅತಿ ಹೆಚ್ಚಿನ ಮುತುವರ್ಜಿ,ಎಚ್ಚರಿಕೆಗಳಿಂದ ಕಾಯ್ದುಕೊಳ್ಳಬೇಕಾಗಿದೆ. ಹೊಸ ಮಸೂದೆ ದೀರ್ಘಾವಧಿಯಲ್ಲಿ ಈ ಉದ್ದೇಶ ಸಾಧನೆಗೆ ಎಷ್ಟರಮಟ್ಟಿಗೆ ನೆರವಾಗಲಿದೆಯೆಂಬುದನ್ನು ಕಾದು ನೋಡಬೇಕು.

# ೩೦೦೦ ಕೋಟಿ ಹವಾಲಾ ದಂಧೆಗೆ ಲಿಂಕ್ ಯಾವುದು..?

● ಪರಶಿವ ಧನಗೂರು

ಇದುವರೆವಿಗೂ ಬ್ಯಾಂಕ್ ಹೊರತುಪಡಿಸಿ, ಇಡಿ ಮತ್ತು ಐಟಿ ಡಿಪಾರ್ಟ್ಮೆಂಟ್ ಗಳಿಗೂ ಗೊತ್ತಾಗದಂತೆ, ಒಟ್ಟಾರೆಯಾಗಿ ಕಾನೂನು ವ್ಯಾಪ್ತಿಗೆ ಒಳಪಡದಂತೆ ಕಪ್ಪು ಹಣವನ್ನು ಸಾಗಿಸಿ, ಕೋಡ್ ವರ್ಡ್ ಮೂಲಕ ಸಂಬಂಧಪಟ್ಟ ವರಿಗೆ ತಲುಪಿಸುವ ಅಕ್ರಮ ಹಣ ವರ್ಗಾವಣೆಯನ್ನು ಹವಾಲಾ ಎಂದು ಕರೆಯಲಾಗುತ್ತಿತ್ತು. ಆದರೆ ಈಗ ರಾಜ್ಯದಲ್ಲೊಂದು ಸಾವಿರಾರು ಕೋಟಿಯ ಹವಾಲಾ ರಾಕೆಟ್ ದೇಶದ ಪ್ರತಿಷ್ಠಿತ ರಾಷ್ಟ್ರೀಕೃತ ಬ್ಯಾಂಕ್ ಗಳ ಸಹಯೋಗದಲ್ಲೇ ಬಯಲಿಗೆ ಬಂದಿದೆ!

ಇಂಟರ್ ನ್ಯಾಷನಲ್ ಹ್ಯಾಕರ್ ಶ್ರೀಕೀಯ ಬಿಟ್ ಕಾಯಿನ್ ಮತ್ತು ವೆಬ್ಸೈಟ್ ಹ್ಯಾಕಿಂಗ್ ನ ನೂರಾರು ಕೋಟಿ ರೂಪಾಯಿಗಳ ಹಗರಣದಿಂದ ಕಂಗಾಲಾಗಿದ್ದ ಕರ್ನಾಟಕ ಸರ್ಕಾರಕ್ಕೀಗ ಮತ್ತೊಂದು ಸಾವಿರಾರು ಕೋಟಿ ಆರ್ಥಿಕ ಅಪರಾಧ ಪ್ರಕರಣ ನಿದ್ರೆಗೆಡಿಸಲಿದೆ. ಕಮಿಷನ್ ಆಸೆಗೆ ಹಣದ ದಲ್ಲಾಳಿಗಳು ಸೃಷ್ಟಿಸಿದ್ದ ಈ ದಂಧೆ ಈಗ ಪ್ರಪಂಚದಾದ್ಯಂತ ಹೆಮ್ಮರವಾಗಿ ಬೆಳೆದು ಸರ್ಕಾರಗಳಿಗೆ ಸವಾಲೊಡ್ಡುತ್ತಿದೆ! ಎಲ್ಲಾ ದೋ ನಂಬರ್, ಇಲ್ಲೀಗಲ್ ದಂಧೆಗಳಿಗೂ ಹವಾಲಾ ಹಣ ಕೊಂಡಿಯಾಗಿ ಕೆಲಸಮಾಡುತ್ತಿದೆ. ಅರೇಬಿಕ್ ಭಾಷೆಯಲ್ಲಿ 'ನಂಬಿಕೆ' ಎನ್ನುವ ಅರ್ಥ ಕೊಡುವ ಈ 'ಹವಾಲಾ_ 8ನೇ ಶತಮಾನದಲ್ಲೇ 'ಹುಂಡಿ' ಎಂಬ ವರ್ಗಾವಣೆ ವಿಧಾನದಲ್ಲಿ ವ್ಯಾಪಾರ ವಹಿವಾಟಿಗಾಗಿ ಚಾಲ್ತಿಯಲ್ಲಿತ್ತಂತೇ! ಮನೀ ಡೀಮಾನಿಟೈಸೇಷನ್ ನಂತರ ಸ್ವಲ್ಪ ತಣ್ಣಗಾಗಿದ್ದ ಹವಾಲಾ ಹಾವಳಿ ಈಗ ಮತ್ತೆ ಗರಿಗೆದರಿದೆ. ಚಿನ್ನ ಕಳ್ಳಸಾಗಾಣಿಕೆ, ಟೆರರಿಸಂ, ಹವಾಲಾ ಹಣ ವರ್ಗಾವಣೆ ಈ ಮೂರು ಒಂದಕ್ಕೊಂದು ಬೆಸೆದ ಕೊಂಡಿಗಳಾಗಿ ಕೆಲಸಮಾಡುತ್ತಿವೆ.



ಹವಾಲಾ ಎಂಬ ಸಮುದ್ರದಲ್ಲಿ ಕಳ್ಳಕಾಕರ, ದಂಧೆಕೋರರು ಕಪ್ಪುಹಣ ಕೊಳೆಯುತ್ತಿದೆ! ಅದು ಬೆಳ್ಳಗಾಗಲು ಹವಾಲಾ ಹ್ಯಾಂಡ್ಲರ್ಸ್ ಗಳು ವಿವಿಧ ರೀತಿಯ ತಾಂತ್ರಿಕ ಕಸರತ್ತು ನಡೆಸುತ್ತಾ ಕಮಿಷನ್ ಆಸೆಗೆ ದೇಶಾದ್ಯಂತ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಇತ್ತೀಚೆಗೆ ಕೇರಳಕ್ಕೆ ಗಲ್ಫ್ ದೇಶಗಳಿಂದ ವಿಮಾನದಲ್ಲಿ ಚಿನ್ನ ಕಳ್ಳಸಾಗಾಣಿಕೆ ನಡೆಸಿ ಸಿಕ್ಕಿಬೀಳುವ ಪ್ರಕರಣಗಳು ಅಲ್ಲಿನ ಮುಖ್ಯಮಂತ್ರಿ ಮನೆಯವರೆಗೂ ತಲುಪಿದ್ದವು! ಹವಾಲಾ ಹಗರಣದ ಗಲಾಟೆಗಳು ಕೇರಳದ ವಿಧಾನಸಭೆಯಲ್ಲಿ ಗದ್ದಲವನ್ನೇ ಎಬ್ಬಿಸಿದ್ದವು. ಈ ಮಟ್ಟಿಗಿನ ಕುಖ್ಯಾತಿ 'ಹವಾಲಾ ದಂಧೆ' ಯ ವಿಷಯದಲ್ಲಿ ಹಿಂದಿನಿಂದಲೂ ಕೇರಳರಾಜ್ಯಕ್ಕಿದೆ. ಗಲ್ಫ್ ರಾಷ್ಟ್ರಗಳ ನಂಟು, ಹವಾಲಾ ಹಣದ ಗಂಟು ಇಂದು ಭಾರತದ ಆರ್ಥಿಕತೆಯನ್ನು ದೇಶತೊರೆದ ಒಬ್ಬ ಪಾತಕಿ ದಾವೂದ್ ಇಬ್ರಾಹಿಂ ಕೂಡ ಹವಾಲದೆಸರಲ್ಲಿ ಅಲುಗಾಡಿಸಿ ನೋಡುವಷ್ಟು ವಿಚಿತ್ರವಾಗಿದೆ! ಏಜೆಂಟರ ಮೂಲಕ ಗಡಿಗಳಾಚೆಯೂ ನಿಮಿಷಗಳಲ್ಲಿ ಹಣ ವರ್ಗಾವಣೆ ಮಾಡುವ ತೆರಿಗೆ ವಂಚಕರ ಈ ಕೋಡ್ ವರ್ಡ್ ಜಾಲವು ಈಗ ಭಾರತದಲ್ಲಿ ಭದ್ರವಾಗಿ ನೆಲೆಯೂರಿರುವ ಎಲ್ಲಾ ಲಕ್ಷಣಗಳು ಗೋಚರಿಸುತ್ತಿವೆ.



## ಕಿಂಗ್ ಪಿನ್‌ಗಳಿಗೆ ಹುಡುಕಾಟ

ಬೆಂಗಳೂರು ನಗರದಲ್ಲಿ ಕೇವಲ ಮೂರು ತಿಂಗಳಲ್ಲೇ ಬರೋಬ್ಬರಿ ಮೂರು ಸಾವಿರ ಕೋಟಿಗೂ ಅಧಿಕ ಅಕ್ರಮ ಹಣ ವರ್ಗಾವಣೆ ನಡೆಸಿ ಹವಾಲಾ ದಂಧೆ ನಡೆಸಿರುವ ಪ್ರಕರಣ ಬೆಂಗಳೂರು ದಕ್ಷಿಣ ವಿಭಾಗದ ಪುಟ್ಟೇನಹಳ್ಳಿ ಪೊಲೀಸರಿಂದ ಬೆಳಕಿಗೆ ಬಂದಿದೆ! ಜೆಪಿ ನಗರದ ಪುಟ್ಟೆನಹಳ್ಳಿಯ ಸುತ್ತಲಿನ






ಏರಿಯಾಗಳಲ್ಲಿ ನಾಲ್ಕು ಜನರನ್ನು ಬಾಡಿಗೆ ಮನೆಯಲ್ಲಿಟ್ಟು ಆವರ ಮೂಲಕ ಸಾವಿರಾರು ಕೋಟಿ ರೂಪಾಯಿಗಳ ಹವಾಲಾ ದಂಧೆ ನಡೆಸಿರುವ ಕಿಂಗ್ ಪಿನ್ ಗಳಿಗಾಗಿ ಇನ್ನೂ ಹುಡುಕಾಟ ನಡೆದಿದೆ. ಇಡೀ ದೇಶವೇ ಬೆಚ್ಚಿ ಬೀಳುವಂತ ಈ ಪ್ರಕರಣದ ಬಗ್ಗೆ ಸರ್ಕಾರ ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳು ತಳೆದಿರುವ ನಿಲುವಿನಿಂದ ಹಲವಾರು ಅನುಮಾನಗಳು ಮೂಡುತ್ತಿವೆ. ಪುಟ್ಟೇನಹಳ್ಳಿಯ ಪೊಲೀಸ್ ಇನ್ಸ್ಪೆಕ್ಟರ್ ಕಿಶೋರ್ ಕುಮಾರ್ ಹಾಗೂ ತಂಡ ಹಗಲು ರಾತ್ರಿ ಎನ್ನದೆ ಶ್ರಮಪಟ್ಟು ಭೇದಿಸಿರುವ ಈ ಕೋಟ್ಯಂತರ ರೂಪಾಯಿಯ ಆರ್ಥಿಕ ಅಪರಾಧ ಪ್ರಕರಣದ ಬಗ್ಗೆ ರಾಜ್ಯದ ಗೃಹಸಚಿವರು ಮತ್ತು ರಾಜ್ಯ ಪೊಲೀಸ್ ಇಲಾಖೆ ಅತಿ ಹೆಚ್ಚಿನ ಆಸಕ್ತಿ ವಹಿಸಿ ತನಿಖೆಯ ಕಾರ್ಯಾಚರಣೆಯನ್ನು ಇನ್ನೊಂದು ಹಂತಕ್ಕೆ ಕೊಂಡೊಯ್ಯಲು ಬೆಂಬಲ ಮತ್ತು ಎಲ್ಲಾ ರೀತಿಯ ಸಹಕಾರವನ್ನು ನೀಡಬೇಕಿತ್ತು. ತಮ್ಮ ರಾಜಕೀಯ ಕೆಸರೆರಚಾಟದಲ್ಲಿ ಇಂತಹ ಗಂಭೀರ ಅಪರಾಧ ಪ್ರಕರಣಗಳನ್ನು ಗಣನೆಗೆ ತೆಗೆದುಕೊಳ್ಳದೆ ರಾಜ್ಯ ಸರ್ಕಾರ ತಪ್ಪುಮಾಡುತ್ತಿದೆ ಎನಿಸುತ್ತಿದೆ. ಏಕೆಂದರೆ ಇತ್ತೀಚೆಗೆ ಈ ಹವಾಲಾ ದಂಧೆಯ ಹಿಂದೆ ದೇಶದ್ರೋಹಿ ಟೆರರಿಸ್ಟ್ ಸಂಘಟನೆಗಳು ಹೆಚ್ಚಾಗಿ ತೊಡಗಿಸಿಕೊಂಡಿರುವ ಮಾಹಿತಿಗಳು ಕೇಳಿ ಬರುತ್ತಿವೆ. ಕೋಟ್ಯಂತರ ರೂಪಾಯಿ ಕಪ್ಪುಹಣವನ್ನು ಸಾವಿರಾರು ಅನಾಮಿಕ ಬ್ಯಾಂಕ್ ಖಾತೆಗಳ ಮೂಲಕ ಪ್ರತಿನಿತ್ಯ ವೈಟ್ ಮನಿಯನ್ನಾಗಿಸಿಕೊಂಡು ದೇಶದ ಆರ್ಥಿಕತೆಗೆ ಹೊಡೆತ ನೀಡುತ್ತಿರುವ ಈ ಹವಾಲಾ ದಂಧೆ ಕೋರರ ಹಿಂದೆ ಯಾರ್ಯಾರಿದ್ದಾರೆ? ಇವರ ನಿಜವಾದ ಹಣ ವರ್ಗಾವಣೆ ಮಾಡುವ ಉದ್ದೇಶವೇನು? ಎಂಬುದನ್ನು ಪತ್ತೆ ಹಚ್ಚಿ ನಿಜವಾದ ಅಪರಾಧಿಗಳನ್ನು ಬಂಧಿಸಿ ಜೈಲಿಗಟ್ಟದಿದ್ದರೆ ಮುಂದೊಂದು ದಿನ ದೇಶಕ್ಕೆ ಗಂಡಾಂತರ ತಪ್ಪಿದ್ದಲ್ಲ. ಏಕೆಂದರೆ ಈಗ ಬೆಂಗಳೂರಿನ ಪುಟ್ಟೇನಹಳ್ಳಿ ಪೊಲೀಸರು ಬೇಧಿಸಿರುವ ಈ ಹವಾಲಾ ದಂಧೆಯ ಪ್ರಕರಣ ಸಾಮಾನ್ಯ ಪ್ರಕರಣವಲ್ಲ. ಈ ದಂಧೆಯನ್ನು ರಾಜ್ಯಾದ್ಯಂತ ಇನ್ನೂ 150 ಜನರು ವ್ಯವಸ್ಥಿತವಾಗಿ ಬೇರೆ ಬೇರೆ ಜಿಲ್ಲೆಗಳಿಂದಲೂ ನಡೆಸುತ್ತಿರುವ ಸದ್ದು ಹರಿದಾಡುತ್ತಿದೆ. ಕೇವಲ ಮೂರೇ ತಿಂಗಳಲ್ಲಿ 4ಜನರನ್ನಿಟ್ಟುಕೊಂಡು ದಿನಕ್ಕೆ 30 ರಿಂದ 40 ಲಕ್ಷ ರೂಪಾಯಿಯಂತೆ 3000ಕೋಟಿ ರೂಪಾಯಿ ಹಣವನ್ನು ಸಾವಿರಾರು ವಿವಿಧ ಬ್ಯಾಂಕ್ ಖಾತೆಗಳಿಗೆ ಜಮಾವಣೆ ಮಾಡಿದ್ದಾರೆಂದರೆ ಊಹಿಸಿಕೊಳ್ಳಿ ರಾಜ್ಯಾದ್ಯಂತ 150 ಜನರು ಪ್ರತಿನಿತ್ಯ 30ರಿಂದ 40ಲಕ್ಷದಂತೆ ಎಷ್ಟು ಸಾವಿರ ಕೋಟಿ, ಎಷ್ಟು ಲಕ್ಷ ಕೋಟಿ ಕಪ್ಪು ಹಣವನ್ನು ಬಿಳಿಮಾಡಿಕೊಂಡಿರಬಹುದು? ಇನ್ನೂ



ಪೊಲೀಸರ ಕೈಗೇ ಸಿಗದವರೂ ಈಗಲೂ ದಂಧೆ ಮಾಡುತ್ತಿರಲೂಬಹುದು. ಈ ಲಕ್ಷಾಂತರ ಕೋಟಿ ಬ್ಲಾಕ್ ಮನಿಯ ಮೂಲ ಯಾವುದು? ಇಷ್ಟು ದೊಡ್ಡ ಸವಾಲು ರಾಕೆಟ್ ನಡೆಯುತ್ತಿದ್ದರೂ, ನಮ್ಮ ಹೆಮ್ಮೆಯ ಪೊಲೀಸರು ಅದರ ಬೆನ್ನತ್ತಿದ್ದರೂ, ಸರ್ಕಾರ–ಗೃಹ ಇಲಾಖೆ ತಲೆ ಕೆಡಿಸಿಕೊಳ್ಳುತ್ತಿಲ್ಲವೇಕೆ?

ಜೆಪಿ ನಗರದಲ್ಲಿ ಮನೆ ಮಾಡಿದ್ದ ಅಪರಾಧಿಗಳ ತಂಡಕ್ಕೆ ಸೀಕ್ರೆಟ್ ಕೋಡ್ ವರ್ಡ್ ಮೂಲಕ ಪ್ರತಿನಿತ್ಯ 40 ಲಕ್ಷ ಹಣ ತಲುಪಿಸುತಿದ್ದ ವ್ಯಕ್ತಿಗೆ ಬ್ಯಾಂಕ್ ಗಳ ಮೂಲಕ ಕೇರಳದಿಂದ ಸಾವಿರಾರು ಕೋಟಿ ರೂಪಾಯಿ ಹಣವನ್ನು ತಲುಪಿಸುತಿದ್ದವರು ಯಾರು? ರಾಜ್ಯದ ನಾನಾ ಕಡೆ ಇದೇ ಕೆಲಸ ಮಾಡುತ್ತಿರುವ 150ಜನರಿಗೆ ಪ್ರತಿನಿತ್ಯ ಇನ್ನೆಷ್ಟು ಲಕ್ಷ ಹಣ ವರ್ಗಾವಣೆ ಆಗುತ್ತಿತ್ತು? ಈ ಅಕ್ರಮ ಹಣದ ಲಿಂಕುಗಳು ಮುಸ್ಲಿಂ ರಾಷ್ಟ್ರಗಳಲ್ಲೆ ಚಾಚಿಕೊಂಡಿದ್ದರೂ, ಹಿರಿಯ ಪೊಲೀಸ್ ಅಧಿಕಾರಿಗಳು ತನಿಖೆಗಾಗಿ ವಿಶೇಷ ತನಿಖಾ ತಂಡ ರಚಿಸಲಿಲ್ಲವೇಕೆ? ಇಡಿ ಅಧಿಕಾರಿಗಳ ತನಿಖೆಗಾಗಿ ಕಾಯುತ್ತಿರುವ ಪುಟ್ಟೇನಹಳ್ಳಿ ಠಾಣೆಯ ಪೊಲೀಸರು ಈಗಾಗಲೇ ಸಾವಿರಾರು ಅಕ್ರಮ ಬ್ಯಾಂಕ್ ಖಾತೆಗಳನ್ನು ಸೀಜ್ ಮಾಡಿ ಜಪ್ತಿಮಾಡಿಕೊಂಡಿದ್ದು, ನಾಲ್ವರನ್ನು ಬಂಧಿಸಿ ದಂಧೆಯ ಕಿಂಗ್ ಪಿನ್ ಗಳಿಗಾಗಿ ಬಲೆಬೀಸಿರುವ ಸುದ್ದಿಯಿದೆ.ಆ ಕಳ್ಳರೂ ಈಗಾಗಲೇ ದೇಶ ತೊರೆದು ಪರಾರಿಯಾಗಿರುವ ಬ್ರೇಕಿಂಗ್ ನ್ಯೂಸ್ ಗಳೂ ಹರಿದಾಡುತ್ತಿವೆ! ಹಾಗಾದರೆ ಇಷ್ಟು ದೊಡ್ಡ ಹವಾಲಾ ಹಗರಣದ ಹಿಂದೆ ಯಾರ್ಯಾರಿದ್ದಾರೆ? ಕೇರಳ ಹವಾಲಾ ದಂಧೆಕೋರರ ರಾಜಧಾನಿ ಆಗುತ್ತಿದೆಯಾ? ದೇಶದ್ರೋಹಿ ಭಯೋತ್ಪಾದಕರಿಗೂ ಈ ಹವಾಲಾ ರಾಕೆಟ್ಟಿಗೂ ಏನಾದರೂ. ನೇರವಾದ ನಂಟಿದೆಯಾ? ಗೃಹ ಇಲಾಖೆ ಈ ಪ್ರಕರಣವನ್ನು ದೇಶದ ಭದ್ರತೆಯ ದೃಷ್ಟಿಯಿಂದ ನೋಡಬೇಕಿದೆ. ಕೇವಲ ಎರಡು ಲಕ್ಷ ರೂಪಾಯಿ ಬಡವರ ಬ್ಯಾಂಕ್ ಖಾತೆಗಳಿಗೆ ಹಾಕಿಕೊಂಡರೆ ಅಲರ್ಟ್ ಆಗುವ ತೆರಿಗೆ ಅಧಿಕಾರಿಗಳು, ಬ್ಯಾಂಕ್ ಸಿಬ್ಬಂದಿಗಳು, ರಾಜ್ಯಾದ್ಯಂತ ಇಷ್ಟು ಸಾವಿರಾರು ಕೋಟಿ ರೂಪಾಯಿ ದುಡ್ಡು ವಿವಿಧ ಬ್ಯಾಂಕ್ ಖಾತೆಗಳಿಗೆ ಬಂದು ಬೀಳುತ್ತಿದ್ದರೂ ಇಷ್ಟು ದಿನ ಮಾಹಿತಿಯೇ ಇಲ್ಲದಂತೆ ಸುಮ್ಮನಿರಲು ಕಾರಣವಾದರೂ ಏನು? ಬ್ಯಾಗುಗಳ ತುಂಬಾ, ಉಡನ್ ಬಾಕ್ಸ್ ಗಳ ತುಂಬಾ ಲಕ್ಷಾಂತರ ರೂಪಾಯಿ ಹಣ ತುಂಬಿಕೊಂಡು ಬಂದು, ಡೆಪಾಸಿಟ್ ಎಟಿಎಂ ಯಂತ್ರಗಳ ಬಳಿ ಮಚ್ಚುಗಳನ್ನಿಟ್ಟುಕೊಂಡು, ದೇಶದ ಯಾವುದೋ ಮೂಲೆಯ ಬ್ಯಾಂಕಿನ ಅಕೌಂಟಿಗೆ ಅಕ್ರಮ ಹಣ ವರ್ಗಾವಣೆ ಮಾಡುತ್ತಿದ್ದರೂ, ತಿಳಿಯಲಾಗದೇ ನಿದ್ರೆ ಮಾಡುತ್ತಿರುವ ಬ್ಯಾಂಕ್ ಅಧಿಕಾರಿಗಳನ್ನು ನಂಬಬೇಕೋ, ಕಾಸಿನ ಕಾವಲುಗಾರರಾದ ತೆರಿಗೆ ಅಧಿಕಾರಿಗಳ ಜಾಣಮರೆವಿಗೆ ಯಾರ ಬಳಿ ದೂರಬೆಕೋ ಓದುಗರೇ ಹೇಳಬೇಕು.

ದೇಶದ 25 ಪ್ರಮುಖ ಬ್ಯಾಂಕುಗಳಿಗೂ ತಲೆನೋವು ತಂದಿರುವ ಈ ಪ್ರಕರಣ ಬೆಂಗಳೂರಿನ ಪುಟ್ಟೇನಹಳ್ಳಿಯ ಪೊಲೀಸ್ ಠಾಣೆಯ ವ್ಯಾಪ್ತಿಗೆ ಮಾತ್ರ ಸೇರಿದ್ದಲ್ಲ ಈಗದು ಇಡೀ ಭಾರತದ ಎಲ್ಲಾ ರಾಜ್ಯಗಳಲ್ಲೂ ನಡೆಯುತ್ತಿರುವ ಶಂಕೆ ಬಲವಾಗುತ್ತಿದೆ.

## ಯಾರ ಸಂಚು ಇದು?

ಭಾರತದ ಅರ್ಥ ವ್ಯವಸ್ಥೆಯನ್ನೇ ಅಲುಗಾಡಿಸಲು ಯಾರೋ ಮಾಡಿರುವ ಸಂಚಿನಂತೆ ಭಾಸವಾಗುತ್ತಿದೆ. ಈ ಪ್ರಕರಣದಲ್ಲಿ ವಿದೇಶಿ ವ್ಯಕ್ತಿಗಳ ಕೈವಾಡವಿರುವ ಅನುಮಾನ ಮೂಡುತ್ತಿದೆ. ಯಾವ್ಯಾವುದಕ್ಕೋ ಎಸ್.ಐ.ಟಿ. ರಚನೆ ಸಿ ಐ.ಡಿ.ತನಿಖೆ ಮಾಡಲು ಹೊರಡುವ ಪೊಲೀಸ್ ಇಲಾಖೆ ಇಡೀ ದೇಶದ ಆಂತರಿಕ ಭದ್ರತೆಯ ವಿಷಯವಾಗಿರುವ ಇಂತಹ ಪ್ರಕರಣದ ಬಗ್ಗೆ ಸುಮ್ಮನಿರುವುದು ಎಷ್ಟು ಸರಿ? ಜಾರಿ ನಿರ್ದೇಶನಾಲಯ ಆಳಕ್ಕಿಳಿದು ಈ ಪ್ರಕರಣದ ತನಿಖೆಯನ್ನು ಕೈಗೊಳ್ಳಲೇಬೇಕಿದೆ. ಅರಬ್ ದೇಶಗಳಿಗೂ ಈ ಹವಾಲಾ ದಂಧೆಯ ನಂಟಿರುವುದು, ಕೇರಳವೇ ಇದರ ಕೇಂದ್ರ ಸ್ಥಾನದಂತೆ ಗೋಚರಿಸುತ್ತಿರುವುದು ಹಲವು ಗಂಭೀರ ಪ್ರಶ್ನೆಗಳಿಗೆ ಕಾರಣವಾಗಿದೆ. ದೇಶದ ಗಡಿಗಳಾಚೆಗೂ ಹಬ್ಬಿರುವ ಈ ಅಕ್ರಮ ಹಣ ವರ್ಗಾವಣೆ ದಂಧೆಮ ನಿಜವಾದ ಕಿಂಗ್ ಪಿನ್ ಗಳ್ಯಾರು ಎಂಬುದನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗಳು ಪತ್ತೆಹಚ್ಚಬೇಕಿದೆ. ಭಾರತದಲ್ಲಿರುವ ಸಾಮಾನ್ಯ ಜನರ



ಬ್ಯಾಂಕ್ ಖಾತೆಗಳಿಗೆ ನಿತ್ಯ 4 ಲಕ್ಷ ರೂಪಾಯಿ ಹಣ ತುಂಬಿಸಿ ವೈಟ್ ಮಾಡುತ್ತಿರುವ ಉದ್ದೇಶವೇನು? ಅಂತಿಮವಾಗಿ ಈ ವೈಟಾಗುತ್ತಿರುವ ಮನಿ ಯಾರ ಮಡಿಲನ್ನು ಸೇರುತ್ತಿದೆ? ಭಯೋತ್ಪಾದಕ ಚಟುವಟಿಕೆ ಗಳಿಗೆ, ದೇಶದ್ರೋಹಿ ಕ್ರತ್ಯಗಳಿಗೆ ಬಳಕೆಯಾಗುತಿದ್ದರೆ ಗತಿಯೇನು? ಪುಟ್ಟೇನಹಳ್ಳಿ ಪೊಲೀಸರಿಂದ ಬಂಧಿತರಾಗಿರುವ ಫೈಸಲ್, ಸಾಹಿಲ್, ಫಜಲ್, ಮುನಾಫ್ ಹಿಂದೆ ಇರುವ ಪ್ರಮುಖ ಆರೋಪಿಗಳನ್ನು ಬಂಧಿಸಿದರೆ ಮಾತ್ರ ಈ ಸಾವಿರಾರು ಕೋಟಿ ರೂಪಾಯಿಗಳ ಹವಾಲಾ ದಂಧೆಯ ಪ್ರಕರಣಕ್ಕೆ ತಾರ್ಕಿಕ ಅಂತ್ಯ ಸಿಕ್ಕಂತಾಗುತ್ತದೆ. ಪುಟ್ಟೇನಹಳ್ಳಿ ಠಾಣೆಯ ಪೊಲೀಸರ ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿರುವ ಮಾಹಿತಿ ಪ್ರಕಾರ ಕೇರಳ ಮೂಲದ ಕ್ಯಾಲಿಕಟ್ ಜಿಲ್ಲೆಯ ರಿಯಾಜ್ ಮತ್ತು ಸಹೋದರರು ಈ ಹವಾಲಾ ದಂಧೆಯ ಕಿಂಗ್ ಪಿನ್ ಗಳು ಎಂದು ಅಂದಾಜಿಸಲಾಗಿದೆ. ವಾಟ್ಸನ್ ಗ್ರೂಪ್ ಗಳನ್ನು ಮಾಡಿ ಅವುಗಳ ಮೂಲಕ ಬ್ಯಾಂಕ್ ಖಾತೆಗಳಿಗೆ ನಂಬರ್ ಗಳನ್ನು ಕಳುಹಿಸಿ ಎಸ್.ಬಿ.ಐ.ಬ್ಯಾಂಕ್ ಯೂನಿಯನ್ ಬ್ಯಾಂಕ್, ಹೆಚ್.ಡಿ.ಎಫ್.ಸಿ. ಮಹಾರಾಷ್ಟ್ರ ಬ್ಯಾಂಕ್, ಆಕ್ಸಿಸ್ ಬ್ಯಾಂಕ್, ಇಂಡಿಯನ್ ಬ್ಯಾಂಕ್, ಫೆಡರಲ್ ಬ್ಯಾಂಕ್, ಕೆನರಾ ಬ್ಯಾಂಕ್, ಕೊಟಕ್ ಮಹೀಂದ್ರಾ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ, ಐ.ಡಿ.ಬಿ.ಐ ಬ್ಯಾಂಕ್.ಪಂಜಾಬ್ ನ್ಯಾಷನಲ್ ಬ್ಯಾಂಕ್, ಓವರ್ ಸೀಸ್ ಬ್ಯಾಂಕ್, ಮುಂತಾದ ರಾಷ್ಟ್ರೀಕೃತ ಬ್ಯಾಂಕುಗಳ ಅನಾಮಿಕ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ

# ವಿಜಯನಗರ ಕಾಲದ ಶೌಚಾಲಯಗಳು





ಪರಿಶೋಧನೆ

ಡಾ.ಎಸ್.ವೈ.ಸೋಮಶೇಖರ್
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಆಧುನಿಕ ಯುಗದಲ್ಲಿ ನೈರ್ಮಲ್ಯ ಮತ್ತು ಶುಚಿತ್ವಕ್ಕೆ ವಿಶೇಷ ಆದ್ಯತೆಯನ್ನು ನೀಡುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ. ಅದರಲ್ಲೂ ಬಯಲು ಬಹಿರ್ದೆಸೆಯನ್ನು ನಿರ್ಮೂಲ ಮಾಡಲು ಸರ್ಕಾರಗಳು ಇನ್ನಿಲ್ಲದ ಪ್ರಯತ್ನ ಮಾಡುತ್ತಿವೆ. ಸ್ವಚ್ಛ ಭಾರತ ನಿರ್ಮಾಣಕ್ಕೆ ಸುಸ್ಥಿರ ಆರೋಗ್ಯ ಮುಖ್ಯ, ಇದಕ್ಕೆ ಸ್ವಚ್ಛ ಪರಿಸರ ಅತ್ಯಗತ್ಯವೆಂಬುದನ್ನು ನಿತ್ಯವೂ ಬಿತ್ತರಿಸುತ್ತಿದೆ. ಈ ಪರಿಪಾಠ ಇಂದು ನಿನ್ನೆಯದಲ್ಲ. ಶೌಚಾಲಯದ್ದೂ ಒಂದು ಇತಿಹಾಸವೇ. ಭಾರತದ ಮಟ್ಟಿಗೆ ನಗರೀಕರಣವೆಂಬುದು ಸಿಂಧೂ ನಾಗರೀಕತೆಯಷ್ಟೇ ಪ್ರಾಚೀನ. ಅಂದಿನ ಜನರು ನೈರ್ಮಲ್ಯಕ್ಕೆ ನೀಡಿದ ಮಹತ್ವ ಅನನ್ಯವಾದದ್ದು. ಅಂತೆಯೇ ನಂತರ ಕಾಲದಲ್ಲೂ ಸ್ವಚ್ಛತೆಗೆ ವಿಶೇಷ ಆದ್ಯತೆಯನ್ನು ಆಯಾ ಕಾಲದ ಆಡಳಿತ ನೀಡುತ್ತಾ ಬಂದಿದೆ. ಅಂತಹ ಪ್ರಯತ್ನವನ್ನು ಕೈಗೊಂಡವರಲ್ಲಿ ವಿಜಯನಗರ ಅರಸರೂ ಮುಖ್ಯರಾಗಿದ್ದಾರೆ.

ವಿಜಯನಗರ ಅಥವಾ ಹಂಪೆಯು ಮಧ್ಯಯುಗದ ಪ್ರಸಿದ್ಧ ರಾಜಧಾನಿಯೆಂಬುದು ತಿಳಿದ ವಿಷಯ. ಇದರ ಹರಹು ಉಪಪಟ್ಟಣಗಳನ್ನು ಗಮನಿಸಿ ಹೇಳುವುದಾದರೆ ಇಪ್ಪತ್ತೈದು ಚದರ ಕಿ.ಮೀ. ವಿಸ್ತೀರ್ಣವನ್ನೇ ಹೊಂದಿದ್ದಿತು. ಇದು ದಕ್ಷಿಣ ಭಾರತದ ಬಹುದೊಡ್ಡ ನಗರ ಮಾತ್ರವಲ್ಲದೆ ದೇಶೀಯ ಮತ್ತು ವಿದೇಶೀಯ ಮಾರುಕಟ್ಟೆಯೂ ಆಗಿತ್ತು. ಇದೊಂದು ರಾಜಧಾನಿಯಾಗಿ ಆಡಳಿತ ಕೇಂದ್ರವಲ್ಲದೆ ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಚಟುವಟಿಕೆಗಳ ಆಗರವೂ ಆಗಿತ್ತು. ಇದರಿಂದ ಇಲ್ಲಿ ಅಪಾರ ಜನಸಂಖ್ಯೆ ನೆಲೆಸಿ, ನಗರವೂ ವಿಸ್ತಾರವಾಗಿ ಬೆಳೆಯಿತು. ನಗರ ಬೆಳೆದಂತೆಲ್ಲಾ ಜನಸಂಖ್ಯೆಗೆ ಅನುಗುಣವಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಅನಿವಾರ್ಯ. ಈ ಹಿನ್ನೆಲೆಯಲ್ಲಿ ಜನಸಂಖ್ಯೆಯ ಅವಶ್ಯಕತೆಗೆ ಅನುಗುಣವಾಗಿ ನಗರದಲ್ಲಿ ಉಪಪಟ್ಟಣಗಳೂ ನಿರ್ಮಾಣವಾದವು. ಪಟ್ಟಣದ ಬೆಳವಣಿಗೆಗೆ ಅನುಗುಣವಾಗಿ ಜನರಿಗೆ ಅಗತ್ಯವಾದ ನೀರಿನ ಸರಬರಾಜಿಗಾಗಿ ತೊಟ್ಟಿ, ಬಾವಿ, ಕೊಳ, ಹೊಂಡ, ಕೆರೆ ಮತ್ತು ಕಾಲುವೆಗಳನ್ನು ನಿರ್ಮಿಸುವುದು ಅನಿವಾರ್ಯವಾದದ್ದನ್ನು ಹಂಪೆ–ವಿಜಯನಗರ ಪರಿಸರದಲ್ಲಿ ಕಾಣುತ್ತೇವೆ. ಇದಕ್ಕೆ ಇಂದಿಗೂ ಉಳಿದುಬಂದಿರುವ ನೀರಿನ ಸಂಗ್ರಹಾಗಾರಗಳು ಪ್ರಮುಖ ಸಾಕ್ಷ್ಯಗಳಾಗಿವೆ. ಇವುಗಳಲ್ಲಿ ವರ್ಷದುದ್ದಕ್ಕೂ ನೀರಿರಲು ಕೆರೆಗಳನ್ನು, ಕೆರೆಗಳು ಸದಾ ತುಂಬಿರಲು ಅಣೆಕಟ್ಟೆ ಮತ್ತು ಅವುಗಳ ಜೋಡಣೆಗೆ ಕಾಲುವೆಗಳನ್ನು ತೋಡಿಸಿದ್ದರು. ಒಟ್ಟಿನಲ್ಲಿ ನಗರಕ್ಕೆ ನೀರನ್ನು ಹರಿಸುವ ಬಹುದೊಡ್ಡ ಯೋಜನೆಯನ್ನೇ ವಿಜಯನಗರ ಅರಸರು ಹಮ್ಮಿಕೊಂಡಿದ್ದರೆನ್ನಬಹುದು. ಈ ಬಗೆಯಲ್ಲಿ ಕೈಗೊಂಡ ನೀರಿನ ಯೋಜನೆಗಳು ಹಂಪೆ ಪರಿಸರವನ್ನು ಇಂದಿಗೂ ಹಚ್ಚಹಸಿರಾಗಿಸಿವೆ.

ನೀರಿನ ಪೂರೈಕೆಯು ವ್ಯವಸ್ಥೆಗೊಂಡಂತೆ ಅದರ ಬಳಕೆಯತ್ತಲೂ ವಿಜಯನಗರ ಅರಸರು ಗಮನ ಹರಿಸಿದ್ದರು. ನೀರನ್ನು ಅರಮನೆ, ಜನವಸತಿ, ಸಾರ್ವಜನಿಕ ಸ್ಥಳ, ದೇಗುಲ ಮೊದಲಾದೆಡೆ ಸಂಗ್ರಹಿಸಲು ಕೊಳ, ಬಾವಿ, ತೊಟ್ಟಿಗಳನ್ನು ನಿರ್ಮಿಸಿದ್ದರು. ಅವುಗಳಿಗೆ ಕಲ್ಲು ಮತ್ತು ಗಾರೆಗಚ್ಚಿನ ಕಾಲುವೆ, ಸುಟ್ಟ ಮಣ್ಣಿನ ಕೊಳವೆಗಳ ಮೂಲಕ ಅಚ್ಚುಕಟ್ಟಾಗಿ ಸರಾಗವಾಗಿ ಹರಿಸುವ ವ್ಯವಸ್ಥೆಯನ್ನೂ ಕಲ್ಪಿಸಿದ್ದುದು ವಿಜಯನಗರ ಅರಸರ ಸಾಧನೆಯೇ ಸರಿ. ಇದು ಒಂದೆಡೆಯಾದರೆ ವಿಜಯನಗರವೆಂಬ ಮಹಾಪಟ್ಟಣದಲ್ಲಿ ಇದ್ದ ಜನರ ಮಲಮೂತ್ರಗಳ ನಿರ್ವಹಣೆಯ ಶೌಚಾಲಯಗಳು ಹೇಗಿದ್ದವೆಂಬ ಕುತೂಹಲ ಹಾಗೂ ಅಂದು ಕೈಗೊಂಡ ಕ್ರಮಗಳೇನೆಂಬ ಪ್ರಶ್ನೆಗಳು ಸಹಜವಾಗಿಯೇ ಮೂಡುತ್ತವೆ. ಮಹಾನಗರದಲ್ಲಿ ನೀರೇನೋ ಕೆರೆ, ಕಾಲುವೆಗಳ ಮೂಲಕ ವ್ಯವಸ್ಥಿತವಾಗಿ ಹರಿದುಬರುತ್ತಿತ್ತು. ಆದರೆ ನೈರ್ಮಲ್ಯವೂ ಅಗತ್ಯ ತಾನೆ. ಬಳಸಿದ ಮತ್ತು ಕಲುಷಿತ ನೀರಿನ ನಿರ್ವಹಣೆಯೂ ಅತ್ಯಗತ್ಯ. ಇಂತಹ ವ್ಯವಸ್ಥೆಯ ಕುರುಹುಗಳನ್ನು ವಿಜಯನಗರದಲ್ಲಿ ಕಾಣುತ್ತೇವೆ. ನೀರನ್ನು ಇಂಗಿಸುವ, ಇಲ್ಲವೆ ವ್ಯವಸ್ಥಿತವಾಗಿ ಹರಿದು ಹೋಗಲೆಂದು ನಿರ್ಮಿಸಿದ ಚರಂಡಿಗಳು ನಗರದಾದ್ಯಂತ ಕಂಡುಬರುತ್ತವೆ. ಅಲ್ಲದೆ ಬಹಿರ್ದೆಸೆಗೆಂದು ನಿರ್ಮಿಸಿದ ಶೌಚಾಲಯಗಳ ಅಳಿದುಳಿದ ಅವಶೇಷಗಳು ನಗರದ ಕೆಲಭಾಗಗಳಲ್ಲಿ ಇಂದಿಗೂ ಉಳಿದುಬಂದಿವೆ. ಆದರೆ ಅವು ಹೆಚ್ಚಾಗಿ ಅರಸರು ಮತ್ತು ಅಧಿಕಾರಿಗಳ ವಸತಿಗಳಲ್ಲಿ ಮಾತ್ರ ಉಳಿದುಬಂದಿವೆ. ಇದಕ್ಕೆ ಶೌಚಾಲಯ ಕಟ್ಟಡಕ್ಕೆ ಬಳಸಿದ ಕಲ್ಲು, ಗಾರೆಗಳು ಕಾರಣವಾಗಿವೆ. ವಿಜಯನಗರ ಪಟ್ಟಣದಲ್ಲಿ ಉಳಿದುಬಂದಿರುವ ಈ ಶೌಚಾಲಯಗಳೋ, ಇಂದಿನ ಆಧುನಿಕ ಶೌಚಾಲಯಗಳಿಗಿಂತ ಕಡಿಮೆಯೇನೂ ಇಲ್ಲ. ಅತ್ಯಂತ ವ್ಯವಸ್ಥಿತವಾಗಿ ನಿರ್ಮಿಸಿದ ಪ್ರತ್ಯೇಕ ಕೋಣೆಗಳೇ ಆಗಿವೆ. ಇವು ಸ್ನಾನದ ಕೋಣೆಗಳಿಗೆ ಅಂಟಿಕೊಂಡಂತಿವೆ. ಇವುಗಳ ನಿರ್ಮಿತಿಯು ಅಂದಿನವರ ಶುಚಿತ್ವ ಮತ್ತು ನೈರ್ಮಲ್ಯಕ್ಕೆ ಹಿಡಿದ ಕನ್ನಡಿಯಾಗಿವೆ. ನೈರ್ಮಲ್ಯ ಅಥವಾ ಶುಚಿತ್ವವೆಂದರೆ ರೋಗಗಳ ಹರಡುವಿಕೆಯನ್ನು ತಡೆಗಟ್ಟಿ, ಸಾರ್ವಜನಿಕ ಆರೋಗ್ಯವನ್ನು ರಕ್ಷಿಸಬಲ್ಲ ವಿಧಾನ. ನೈರ್ಮಲ್ಯವು ಮಾನವರ ಮಲ, ಮೂತ್ರ ಹಾಗೂ ಅದರ ತ್ಯಾಜ್ಯಜಲದ ನಿರ್ವಹಣೆಯೇ ಆಗಿದೆ. ಶೌಚಾಲಯದ ನಿರ್ವಹಣೆ ಸಾಮಾನ್ಯ ವಿಷಯವೇನಲ್ಲ. ಇದು ಉತ್ತಮ ಆರೋಗ್ಯದ ಭಾಗವೇ ಆಗಿದೆ. ರೋಗ ಬಂದ ಮೇಲೆ ಸಾಮಾನ್ಯವಾಗಿ ಅದನ್ನು ವಾಸಿ ಮಾಡಲು ಯತ್ನಿಸುವ, ಹಣ ವ್ಯಯಿಸುವ ಪರಿಪಾಠವೇ ನಮ್ಮಲ್ಲಿ ಹೆಚ್ಚು. ಆದರೆ ರೋಗಕ್ಕೆ ಕಾರಣಗಳನ್ನು ಹುಡುಕಿ ಅದಕ್ಕೆ ಪರಿಹಾರ ಕಂಡುಕೊಳ್ಳುವ ಪ್ರಯತ್ನಗಳು ಇಂದಿಗೂ ಕಡಿಮೆಯೆಂದೇ ಹೇಳಬೇಕು. ಇಂದು ನೈರ್ಮಲ್ಯ ನಿರ್ವಹಣೆಯೇ ಸ್ವಚ್ಛ ಭಾರತದ ಕಲ್ಪನೆಗೆ ದೊಡ್ಡ ಸವಾಲಾಗಿದೆ. ಈ ನಿಟ್ಟಿನಲ್ಲಿ ನೋಡಿದಾಗ ಪ್ರಾಚೀನರ ಕ್ರಮಗಳು ಅನುಕರಣೀಯ ಮಾದರಿಗಳೆಂಬುದನ್ನು ಮರೆಯುವಂತಿಲ್ಲ. ಆದಕಾರಣ ಶೌಚಾಲಯ ಹಾಗೂ ಸ್ವಚ್ಛ ಪರಿಸರಗಳು ಜನಜೀವನದ ಗುಣಮಟ್ಟದ ಮಾಪಕವೂ, ಅಭಿವೃದ್ಧಿಯ ದ್ಯೋತಕವೂ ಹೌದು. ಇದನ್ನು ವ್ಯವಸ್ಥಿತವಾಗಿ ನಿರ್ವಹಿಸಿದವರಲ್ಲಿ ವಿಜಯನಗರದ ಅರಸರು ಪ್ರಮುಖರಾಗಿದ್ದಾರೆ. ಇದು ವಿಜಯನಗರ ಪಟ್ಟಣದಲ್ಲಿ ನಿರ್ಮಿಸಿದ ಶೌಚಾಲಯಗಳಿಂದ ದೃಢವಾಗುತ್ತದೆ. ತೆರೆದ ಬಯಲಿನ ಮಲಮೂತ್ರ ವಿಸರ್ಜನೆಯು ಕಾಲರಾ, ಮಲೇರಿಯಾ, ಅತಿಸಾರ, ಮುಂತಾದ ಜಲಜನ್ಯ ರೋಗಗಳಿಗೆ ಕಾರಣ. ಈ ಸಮಸ್ಯೆಗೆ ಶೌಚಾಲಯ ನಿರ್ವಹಣೆಯು ಪ್ರಮುಖ ಪರಿಹಾರ. ವಿಜಯನಗರದ ಅರಸರು ತಮ್ಮ ರಾಜಧಾನಿಯಾದ್ಯಂತ ಅನೇಕ ಶೌಚಾಲಯಗಳನ್ನು ನಿರ್ಮಿಸಿದ್ದರು, ಆದರೆ ಕಾಲದ ದವಡೆಗೆ ಸಿಕ್ಕು ಅವು ನಾಶವಾಗಿದ್ದು, ಕೆಲವೇ ಪ್ರದೇಶಗಳಲ್ಲಿ ಅದರಲ್ಲೂ ರಾಜಮಾನ್ಯರ ವಸತಿ ನೆಲೆ, ವೀರಹರಿಹರರಾಯನ ಅರಮನೆ, ಮಹಾನವಮಿ ದಿಬ್ಬ, ದಣ್ಣಾಯನ ಆವರಣ, ರಾಜಾಂಗಣದಲ್ಲಿ ಮಾತ್ರ ಗತವನ್ನು ಕುರಿತು ಹೇಳುವ ಶೌಚಾಲಯದ ಕುರುಹುಗಳು ಕಾಣಸಿಗುತ್ತವೆ. ಅವುಗಳನ್ನು ಉತ್ಖನನದ ಮೂಲಕ ಬೆಳಕಿಗೆ ತಂದ ಶ್ರೇಯ ರಾಜ್ಯ ಮತ್ತು ಕೇಂದ್ರ ಪುರಾತತ್ವ ಇಲಾಖೆಗಳಿಗೆ ಸಲ್ಲುತ್ತದೆ.

ಹಜಾರ ರಾಮಚಂದ್ರ ದೇವಾಲಯದ ಹಿಂಭಾಗದಲ್ಲಿ ಸಂಗಮ ಮನೆತನದ ವೀರಹರಿಹರರಾಯರ ಅರಮನೆಯಿದೆ. ಇದು ಪಟ್ಟಣದ ಅತ್ಯಂತ ವ್ಯವಸ್ಥಿತವಾದ ಕಟ್ಟಡಗಳಲ್ಲಿ ಒಂದು. ಇಲ್ಲಿ ಅರಮನೆಯು ಅನೇಕ ಸುರಕ್ಷಿತ ಸೌಲಭ್ಯಗಳನ್ನು ಹೊಂದಿತ್ತು. ಅರಮನೆಯ ಸುತ್ತಲೂ ಸುಂದರವಾದ ಉದ್ಯಾನವನ, ಎತ್ತರದ ಮತ್ತು ಎರಡು ಮೂರು ಸುತ್ತಿನ ರಕ್ಷಣಾ ಗೋಡೆಗಳಿಂದ ಆವರಿಸಿದ ವಸತಿಯಿದು. ಇದಕ್ಕೆ ಪ್ರತ್ಯೇಕ ಶೌಚಾಲಯವೂ ಇದ್ದುದು ವಿಶೇಷ. ಅರಮನೆಯ ಆಗ್ನೇಯಕ್ಕೆ ಗಾರೆಗಚ್ಚಿನಲ್ಲಿ ನಿರ್ಮಿಸಲಾದ ವಿಶಿಷ್ಟ ರೀತಿಯ ಸೌಲಭ್ಯಗಳಿಂದ ಕೂಡಿದ ಶೌಚಾಲಯವಿದು. ಹಂಪಿಯ ಉತ್ಖನನದಲ್ಲಿ ಇದುವರೆಗೆ ಬೆಳಕಿಗೆ ಬಂದಿರುವ ಎಲ್ಲ ಶೌಚಾಲಯಗಳಿಗಿಂತ ಉತ್ತಮ ರೀತಿಯಲ್ಲಿದೆ. ಶೌಚಾಲಯದ ಬೇಸಿನನ್ನು ಕಲ್ಲು ಮತ್ತು ಗಾರೆಯನ್ನು ಬಳಸಿ ಲಾಳಾಕಾರದಲ್ಲಿ ನಿರ್ಮಿಸಿದ್ದಾರೆ. ಸ್ನಾನದ ಕೋಣೆಗೆ ಹೊಂದಿಕೊಂಡಿರುವ ಈ ಶೌಚಾಲಯದಲ್ಲಿ ಬಹಿರ್ದೆಸೆಗಾಗಿ ಕುಳಿತುಕೊಳ್ಳಲು ಮತ್ತು ನೀರಿನ ಬಿಂದಿಗೆ ಇಡಲು ಅನುವಾಗುವಂತೆ ಸ್ಥಳಾವಕಾಶವನ್ನೂ ಕಲ್ಪಿಸಲಾಗಿದೆ. ಹಾಗೆಯೇ ಮಲಮೂತ್ರದ ಮಲಿನ ನೀರು ಹೊರಹೋಗಲು ಗೋಡೆಯಲ್ಲಿ ಕೊಳವೆಯನ್ನು ಮಾಡಿದ್ದು, ಅದರ ಮೂಲಕ ಹೊರಹೋದ ನೀರಿಗಾಗಿ ಪ್ರತ್ಯೇಕವಾದ ಶೌಚ ಗುಂಡಿಯನ್ನೂ ನಿರ್ಮಿಸಿರುವುದು ಇಲ್ಲಿನ ವಿಶೇಷ. ಇದೇ ಬಗೆಯ ಶೌಚಾಲಯಗಳು ನಗರದಾದ್ಯಂತ ಇವೆ. ಅವುಗಳಲ್ಲಿ ನೆಲಮಾಳಿಗೆ ಶಿವಾಲಯ ಅಥವಾ ಪ್ರಸನ್ನ ವಿರೂಪಾಕ್ಷ ದೇವಾಲಯದ ಈಶಾನ್ಯಕ್ಕಿರುವ ಸ್ಥಳವನ್ನು ರಾಜಮಾನ್ಯರ ವಸತಿನೆಲೆಯೆಂದು ಗುರುತಿಸಿದ್ದಾರೆ. ಅಲ್ಲಿ ಅನೇಕ ರಾಜಮಾನ್ಯರ ಭವನಗಳಿವೆ. ಅವುಗಳಲ್ಲಿ ಎರಡು ಕಡೆ ಶೌಚಾಲಯ ಕೊಠಡಿಗಳು ಕಂಡುಬಂದಿದೆ. ಅವುಗಳಲ್ಲಿ ಒಂದು ಕೊಠಡಿಯು 3ಮೀ. ಉದ್ದ, 2ಮೀ. ಅಗಲವಾಗಿದ್ದು, ಅದನ್ನು ಕಲ್ಲು ಮತ್ತು ಗಾರೆ ಬಳಸಿ ನಿರ್ಮಿಸಿದ್ದಾರೆ. ಇದರ ಒಳಗೆ ಪಾನವಟ್ಟದಂತೆ ಗೋಚರಿಸುವ ಕಲ್ಲಿನಲ್ಲಿ ಕಡೆದ ಶೌಚಾಲಯದ ಬೇಸಿನ್ ಇದೆ. ಅದು 45 ಸೆಂ.ಮೀ ವೃತ್ತಾಕಾರವಾಗಿ ಮತ್ತು ಮಲಿನನೀರು ಹೊರಹೋಗಲು ಅನುವಾಗುವಂತೆ 50 ಸೆಂ.ಮೀ. ಉದ್ದವಾಗಿದೆ. ಹಾಗೆಯೇ ಮಲಿನ ನೀರು ಹೊರಹೋಗಿ ಒಳಚರಂಡಿಗೆ ಸೇರುವಂತೆ ಮಾಡಿದ್ದಾರೆ. ಇದೇ ಬಗೆಯ ಶೌಚಾಲಯಗಳನ್ನು ದಣ್ಣಾಯಕನ ಆವರಣ, ಮಹಾನವಮಿ ದಿಬ್ಬ ಮೊದಲಾದೆಡೆ ಕಾಣಬಹುದಾಗಿದೆ. ಅಲ್ಲಿನ ಶೌಚಾಲಯಗಳೂ ವ್ಯವಸ್ಥಿತವಾದ ಬೇಸಿನ್, ಶೌಚಗುಂಡಿಗಳನ್ನು ಹೊಂದಿದ್ದುದು ಗಮನಾರ್ಹ. ಒಟ್ಟಿನಲ್ಲಿ ಅಳಿದುಳಿದ ಇಂತಹ ಕೆಲವೇ ಶೌಚಾಲಯಗಳು ಅಂದಿನ ನಗರೀಕರಣ ಮತ್ತು ನೈರ್ಮಲ್ಯೀಕರಣ ವ್ಯವಸ್ಥೆಯನ್ನು ಅರಿಯಲು ಸಾಧ್ಯತೆಯನ್ನು ಒದಗಿಸಿವೆ. ವಿಜಯನಗರ ಅರಸರು ತಮ್ಮ ರಾಜಧಾನಿ ಪಟ್ಟಣದ ಸ್ವಾಸ್ಥ್ಯವನ್ನು ಕಾಪಾಡಲು ಅಳವಡಿಸಿಕೊಂಡ ನೈರ್ಮಲ್ಯೀಕರಣದ ಬಹುಮುಖ್ಯ ಭಾಗವಾದ ಶೌಚಾಲಯಗಳ ನಿರ್ಮಾಣ, ನಿರ್ವಹಣೆ ಹಾಗೂ ಶುಚಿತ್ವಕ್ಕೆ ನೀಡಿದ ಆದ್ಯತೆ ಮತ್ತು ಮಾರ್ಗೋಪಾಯಗಳು ಅನುಸರಣೀಯವಾಗಿವೆ.

---

ಮಾಡಿಸಿಕೊಳ್ಳುತಿದ್ದ ಇವರು ಹಣ ಡೆಪಾಸಿಟ್ ಮಾಡಿದ ರಸೀದಿಗಳನ್ನು ಫೋಟೋ ತೆಗೆದು ಸಿ.ಕೆ. ಮತ್ತು ಎಫ್.ಎಂ.ಎಫ್. ಎಂಬ ಎರಡು ಸೀಕ್ರೆಟ್ ವಾಟ್ಸಾಪ್ ಗ್ರೂಪ್ ಗಳಿಗೆ ಕಳುಹಿಸಿಕೊಳ್ಳುತ್ತಿದ್ದರು..

## ಅಬ್ಬಾ..! 800 ಬ್ಯಾಂಕ್‌ಗಳ ಖಾತೆಗೆ ವರ್ಗಾವಣೆ..!

ಕೇರಳದ ರಿಯಾಜ್ ವಾಟ್ಸಾಪ್ ಮೂಲಕ ನೀಡುತ್ತಿದ್ದ ಕೋಡ್ ವರ್ಡ್ ಮತ್ತು ಬೆಂಗಳೂರಿನ ಕಲಾಸಿಪಾಳ್ಯದ ನಗರತ್ ಪೇಟೆಯ ವಿಳಾಸವಿದ್ದ ಸ್ಥಳಕ್ಕೆ ತೆರಳಿದರೆ ನಿತ್ಯ ಹಣ ವರ್ಗಾವಣೆ ಮಾಡುತ್ತಿ ಕೇರಳದ ರಿಯಾಜ್ ಊರಿನವನೇ ಆದ ಸ್ನೇಹಿತ ಫಸಲ್ ನ ಕೈಗೆ ದಿನನಿತ್ಯವೂ 35ರಿಂದ 40ಲಕ್ಷ ಕಪ್ಪುಹಣವನ್ನು ಬಾಕ್ಸ್ ಮೂಲಕ ಕೊಡಲಾಗುತ್ತಿತ್ತು! ಪ್ರತಿನಿತ್ಯ ಹಣ ಡೆಪಾಸಿಟ್ ಮಾಡುವ ಕೆಲಸಕ್ಕೆ ನೇಮಿಸಿಕೊಂಡಿದ್ದವರಿಗೆ ತಲೆಮರೆಸಿಕೊಂಡು ಪರಾರಿಯಾಗಿರುವ ಕೇರಳದ ರಿಯಾಜ್ ಬ್ರದರ್ಸ್ ನಿತ್ಯ ಊಟ ಖರ್ಚುವೆಚ್ಚದ ಜೊತೆಗೆ ದಿನಕ್ಕೆ ತಲಾ ಒಬ್ಬರಿಗೆ ಸಾವಿರ ರೂಪಾಯಿ ಸಂಬಳ ನಿಗದಿಪಡಿಸಿದ್ದ! ತನ್ನದೇ ಹಣದಲ್ಲಿ ಅಡ್ವಾನ್ಸ್ ಕೊಟ್ಟು ಬಾಡಿಗೆ ಮನೆ ಮಾಡಿಕೊಟ್ಟು ಬಾಡಿಗೆಯನ್ನೂ ತಾನೇ ಕಟ್ಟುತ್ತಿದ್ದ! ಇವರು ನಿತ್ಯ ಓಡಾಡಲೂ ಎರಡು ಎಲ್ಲೋ ಬೋರ್ಡ್ ಬೈಕ್ ಗಳನ್ನು ಬಾಡಿಗೆಗೆ ಕೊಡಿಸಿದ್ದ! ಈಗ ಪುಟ್ಟೇನಹಳ್ಳಿ



ಪೊಲೀಸರು ಡೆಪಾಸಿಟ್ ಎಟಿಎಂ ಮೆಷಿನ್ ಗಳಿಂದ ನಿತ್ಯ ವಿವಿಧ ಬ್ಯಾಂಕ್ ಖಾತೆಗಳಿಗೆ 35ಲಕ್ಷ ಹಣ ವರ್ಗಾವಣೆ ಮಾಡುತ್ತಿದ್ದ ನಾಲ್ಕು ಜನರನ್ನು ಬಂಧಿಸಿ ಅವರು ನೀಡಿದ ಮಾಹಿತಿ ಮೇರೆಗೆ 2000ಕ್ಕೂ ಅಧಿಕ ಬ್ಯಾಂಕ್ ಖಾತೆಗಳನ್ನು ಪತ್ತೆಹಚ್ಚಿ 800 ಬ್ಯಾಂಕ್ ಅಕೌಂಟ್ ಗಳನ್ನು ಈಗಾಗಲೇ ಸೀಜ್ ಮಾಡಿ ಜಪ್ತಿ ಮಾಡಿದ್ದರೂ ಕೂಡ ಯಾರೊಬ್ಬರೂ ನಮ್ಮ ಬ್ಯಾಂಕ್ ಖಾತೆಗಳಿಂದ ಹಣತೆಗೆಯಲು ಸಾಧ್ಯವಾಗುತ್ತಿಲ್ಲ ಎಂದು ಬ್ಯಾಂಕುಗಳಿಗೆ ಹೋಗಿ ದೂರು ನೀಡಿಲ್ಲವಂತೇ! ಹೇಗಿದೆ ನೋಡಿ ಇವರ ಸೀಕ್ರೆಟ್ ನೆಟ್ವರ್ಕ್! ಇಷ್ಟೆಲ್ಲಾ ವ್ಯವಸ್ಥಿತವಾಗಿ ಈ ದಂಧೆಯನ್ನು ಸಾಕಿ ಸಲುಹುತ್ತಿರುವ ಮನೆಹಾಳರಿಂದ ನಮ್ಮ ದೇಶದ ವಿದೇಶಿ ವಿನಿಮಯಕ್ಕೂ ಹೊಡೆತ ಬೀಳುತ್ತಿದೆ.

## ಅಪರಾಧಿಗಳಿಗೆ ಶಿಕ್ಷೆಯೇ ಆಗುತ್ತಿಲ್ಲ.

ಆರ್ಥಿಕತೆಗೂ ದಕ್ಕೆ ಯಾಗುತ್ತಿದೆ. ಹವಾಲಾ ನೆಗ್ಲೆಕ್ಟ್ ಮಾಡಿ ಸುಮ್ಮನಾಗುವ ವಿಷಯವೇ ಅಲ್ಲ. ಈ ದೇಶದಲ್ಲಿ ಈ ಹಿಂದೆಯೂ 1991ರಲ್ಲಿ ಮೂದಲ ಬಾರಿಗೆ ರಾಷ್ಟ್ರ ರಾಜಕಾರಣದಲ್ಲಿ 18 ಮಿಲಿಯನ್ ಡಾಲರ್ ಹವಾಲಾ ಹಗರಣದ ಸದ್ದು ಮಾಡಿ ಭಾರತದ ಹಣಕಾಸು ಜಗತ್ತನ್ನು ನಡುಗಿಸಿತ್ತು. ಜೈನ್ ಡೈರಿ ಎಂದೆ ಪ್ರಸಿದ್ಧಿ ಪಡೆದಿದ್ದ ಈ ಹವಾಲಾ ಪ್ರಕರಣದಲ್ಲಿ ದೊಡ್ಡ ದೊಡ್ಡ ರಾಜಕಾರಿಣಿಗಳಾದ ಎಲ್ಲಾ.ಕೆ.ಅಡ್ವಾಣಿ.ಪಿ.ವಿ ನರಸಿಂಹ ರಾವ್. ಶರದ್ ಯಾದವ್, ಮದನ್ ಲಾಲ್ ಖುರಾನಾ. ಎ.ಸಿ.ಶುಕ್ಲಾ.ಬಲರಾಂಜಾಕ್ಷಿಡ್.

ಶಿವಶಂಕರ್. ಮುಂತಾದವರ ಹೆಸರು ಬಂದು ರಾಜಕೀಯ ರಾಡಿಯಾಗಿತ್ತು. ಈಗಲೂ ನಮ್ಮ ದೇಶದಲ್ಲಿ ಅಕ್ರಮ ಹಣ ವರ್ಗಾವಣೆ ಕಾಯ್ದೆ ಬಲಿಷ್ಠವಾಗಿದೆ ಆದರೆ ಹಲ್ಲಿಲ್ಲದ ಹಾವಿನಂತಾಗಿದೆ. ಅದಕ್ಕೆ ದೇಶದಲ್ಲಿ ಅಲ್ಲಲ್ಲಿ ಹವಾಲಾ ದಂಧೆಯ ಪ್ರಕರಣಗಳು ಬಯಲಾಗಿ ಸದ್ದು ಮಾಡಿದರೂ, ಶಿಕ್ಷೆ ಯಾಗದೆ ಅಪರಾಧಿಗಳು ಜೈಲಿನಿಂದ ಸಲೀಸಾಗಿ ಹೊರಬರುತ್ತಾರೆ. ಈಗ ಬೆಂಗಳೂರಿನ ಪುಟ್ಟೇನಹಳ್ಳಿ ಠಾಣೆಯ ವ್ಯಾಪ್ತಿಯಲ್ಲಿ ಬೆಳಕಿಗೆ ಬಂದಿರುವ 3000ಕೋಟಿಗೂ ಅಧಿಕ ಅಕ್ರಮ ಹಣ ವರ್ಗಾವಣೆಯ ಹವಾಲಾ ದಂಧೆಯ ಅಪರಾಧಿಗಳಿಗೂ ತಕ್ಕ ಶಿಕ್ಷೆಯಾಗಬೇಕಾದರೆ ಸರಿಯಾದ ತನಿಖೆ ನಡೆಸಿ, ಸಾಕ್ಷಿ ಪುರಾವೆಗಳ ಸಮೇತ ಗಟ್ಟಿಯಾದ ಆರೋಪ ಪಟ್ಟಿ ಸಲ್ಲಿಕೆ ಮಾಡಬೇಕಾಗುತ್ತದೆ ಆ ನಿಟ್ಟಿನಲ್ಲಿ ಗ್ರಹ ಇಲಾಖೆ ಹಾಗೂ ಕರ್ನಾಟಕ ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿಗಳು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಕಾರ್ಯಪ್ರವೃತ್ತರಾಗಬೇಕೆಂದು ನಮ್ಮ ಪತ್ರಿಕೆ ಆಶಿಸುತ್ತದೆ.

●5ನೇ ಪುಟದಿಂದ...

# ಕೈ ಪಾದಯಾತ್ರೆಗೆ ಕಮಲ ಬಿಟ್ಟ ಬಾಣ

ಹಾಗಾಗಿ, ಸ್ವತಃ ಡಿ ಕೆ ಶಿವಕುಮಾರ್ ಅವರ ಮಹಾತ್ವಾಕಾಂಕ್ಷೆ ಮತ್ತು ಆ ಮಹಾತ್ವಾಕಾಂಕ್ಷೆಗೆ ಪೂರಕವಾಗಿ ಯೋಜಸಿರುವ ಮೇಕೆದಾಟು ಪಾದಯಾತ್ರೆ ಪ್ರತಿಪಕ್ಷಗಳಲ್ಲಿ ಕಂಪನ ಹುಟ್ಟಿಸುವ ಮುನ್ನವೇ ಸ್ವಪಕ್ಷ ಕಾಂಗ್ರೆಸ್ಸಿನ ಒಳಗೇ ಕಂಪನ ಹುಟ್ಟಿಸಿದೆ. ಆ ಕಂಪನದ ತೀವ್ರತೆ ಎಷ್ಟು ಎಂಬುದರ ಮೇಲೆ ಅದು ಭೂಕಂಪನವಾಗುವುದೋ ಅಥವಾ ಕೇವಲ ಲಘು ಕಂಪನವಾಗಿ ಮುಗಿದುಹೋಗುವುದು ಎಂಬುದು ನಿಂತಿದೆ!

ಅದೇ ಹೊತ್ತಿಗೆ, ಹಳೇ ಮೈಸೂರು ಭಾಗದಲ್ಲಿ ಮಾತ್ರ ಸದ್ಯಕ್ಕೆ ಅಸ್ತಿತ್ವ ಉಳಿಸಿಕೊಂಡಿರುವ ಜಾತ್ಯತೀತ ಜನತಾ ದಳದ ಮೇಲೆ ಡಿ ಕೆ ಶಿವಕುಮಾರ್ ಅವರ ಈ ಮೇಕೆದಾಟು ಪಾದಯಾತ್ರೆ ಹೇಗೆ ಪರಿಣಾಮ ಬೀರಲಿದೆ? ಜೆಡಿಎಸ್ ಅಸ್ತಿತ್ವಕ್ಕೇ ಅದು ಪೆಟ್ಟುಕೊಡುವ ಸಾಧ್ಯತೆ ಇದೆಯೇ ಎಂಬ ಚರ್ಚೆಯೂ ಇದೆ. ಸ್ವತಃ ಜೆಡಿಎಸ್ ನಾಯಕ ಎಚ್ ಡಿ ಕುಮಾರ ಸ್ವಾಮಿ ಅವರು ಮೇಕೆದಾಟು ಪಾದಯಾತ್ರೆಯ ಕುರಿತು ನೀಡುತ್ತಿರುವ ಉಗ್ರ ಹೇಳಿಕೆಗಳು ಮತ್ತು ಆತಂಕದ ಪ್ರತಿಕ್ರಿಯೆಗಳು ಕೂಡ ಅಂತಹ ಅಪಾಯದ ಮುನ್ಸೂಚನೆ ಈಗಾಗಲೇ 'ದಳಪತಿ'ಗಳಿಗೆ ಸಿಕ್ಕಿದೆ ಎಂಬ ಸುಳಿವು ನೀಡುತ್ತಿವೆ. ಜೆಡಿಎಸ್ ನಾಯಕರ ಟ್ವೀಟ್ ಸಮರ ಮತ್ತು ಮಾಧ್ಯಮ ಹೇಳಿಕೆಗಳಲ್ಲಿ ಮೇಕೆದಾಟು ಯಾತ್ರೆ ಜೆಡಿಎಸ್ ನಲ್ಲಿ ಹುಟ್ಟಿಸಿರುವ ಆತಂಕ ಸ್ಪಷ್ಟವಾಗುತ್ತಿದೆ.

ಆ ಹಿನ್ನೆಲೆಯಲ್ಲೇ ಜೆಡಿಎಸ್ ಕೂಡ ಜಲಧಾರೆ ಯಾತ್ರೆ ಘೋಷಿಸಿದೆ. ವಾಸ್ತವವಾಗಿ ಕಳೆದ ಆಗಸ್ಟ್ ನಲ್ಲಿಯೇ ಜೆಡಿಎಸ್ ನಾಯಕರು ಜಲಧಾರೆ ಯಾತ್ರೆಯ ಬಗ್ಗೆ ಪ್ರಸ್ತಾಪಿಸಿದ್ದರೂ, ಅದನ್ನು ಗಂಭೀರವಾಗಿ ಪರಿಗಣಿಸಿ ತುರ್ತಾಗಿ ಯೋಜಿಸಿ ಅನುಷ್ಠಾನಕ್ಕೆ ಸಿದ್ಧತೆ ಆರಂಭಿಸಿರುವುದು ಮೇಕೆದಾಟು ಪಾದಯಾತ್ರೆ ಘೋಷಣೆಯಾದ ಬಳಿಕವಷ್ಟೇ. ಹಾಗಾಗಿ 'ಮೇಕೆದಾಟು'ಗೆ ಪ್ರತಿಯಾಗಿ ಜೆಡಿಎಸ್ 'ಜಲಧಾರೆ' ದಾಳ ಉರುಳಿಸಿದೆ.

ಮೇಕೆದಾಟು ಯೋಜನೆಯ ಮುಖ್ಯ ಉದ್ದೇಶವೇ ಬೆಂಗಳೂರಿಗೆ ಕುಡಿಯುವ ನೀರು ಒದಗಿಸುವುದಾದ್ದರಿಂದ ಸಹಜವಾಗಿಯೇ ಆ ವಿಷಯ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಮಹತ್ವದ ರಾಜಕೀಯ ಸಂಗತಿಯಾಗಲಿದೆ. ಬೆಂಗಳೂರಿಗೆ ಕುಡಿಯುವ ನೀರು ನೀಡುವ ಇಂತಹ ಯೋಜನೆಗೆ ಡಿಪಿಆರ್ ತಯಾರಿಸಿ ಕೇಂದ್ರದ ಅನುಮತಿ ಕೋರಿದ್ದೆವು. ಬಿಜೆಪಿಯ ಕೇಂದ್ರ ಸರ್ಕಾರ ಸಕಾಲದಲ್ಲಿ ಅನುಮತಿ ನೀಡಲಿಲ್ಲ. ಅಷ್ಟರಲ್ಲಿ ನಮ್ಮ ಅಧಿಕಾರವಧಿಯೇ ಮುಗಿದುಹೋಯಿತು. ಬಳಿಕ ಅಧಿಕಾರಕ್ಕೆ ಬಂದ ಬಿಜೆಪಿ ಯೋಜನೆ ಜಾರಿಗೆ ಮನಸ್ಸು ಮಾಡುತ್ತಿಲ್ಲ ಎಂಬುದನ್ನು ಕಾಂಗ್ರೆಸ್ ಪ್ರಮುಖವಾಗಿ ಬಿಂಬಿಸುವ ಮೂಲಕ ಬೆಂಗಳೂರಿಗರ ಕಣ್ಣಲ್ಲಿ ಬಿಜೆಪಿಯನ್ನು ಭಿನ್ನವಾಗಿ ಚಿತ್ರಿಸಲು ಯತ್ನಿಸುತ್ತಿದೆ. ಯೋಜನೆಗೆ ಕೇಂದ್ರದ ಅನುಮತಿ ಮತ್ತು ಯೋಜನೆ ಅನುಷ್ಠಾನದ ವಿಷಯದಲ್ಲಿ ಕೂಡ ಬಿಜೆಪಿಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಜನತಾ ಕಟಕಟೆಯಲ್ಲಿ ನಿಲ್ಲಿಸುವುದು ಕಾಂಗ್ರೆಸ್ಸಿನ ಲೆಕ್ಕಾಚಾರ.

ಹಾಗಾಗಿ ರಾಜ್ಯದ ಅಧಿಕಾರ ಹಿಡಿಯಲು ನಿರ್ಣಾಯಕವಾಗಿರುವ ಬೆಂಗಳೂರಿನ ವಿಧಾನಸಭಾ ಕ್ಷೇತ್ರಗಳ ಪೈಕಿ ಹೆಚ್ಚಿನ ಸ್ಥಾನಗಳನ್ನು ಪಡೆದಿರುವ ಬಿಜೆಪಿಗೆ ಇದು ಬಿಕ್ಕಟ್ಟಿನ ಪರಿಸ್ಥಿತಿ. ಅದೇ ಕಾರಣಕ್ಕೆ ಕಾಂಗ್ರೆಸ್ ಪ್ರಶ್ನೆಗಳಿಗೆ ನೇರವಾಗಿ ಉತ್ತರಿಸಲಾಗದ ಬಿಜೆಪಿ, ತಾಂತ್ರಿಕ ಅಂಶಗಳನ್ನು, ಡಿಪಿಆರ್ ವಿಷಯವನ್ನು ಮುಂದಿಟ್ಟು ಪ್ರತಿಪಕ್ಷಕ್ಕೆ ತಿರುಗೇಟು ನೀಡುವ ಯತ್ನ ಮಾಡುತ್ತಿದೆ. ಜೊತೆಗೆ ಪಾದಯಾತ್ರೆ ಯಶಸ್ವಿಯಾಗದಂತೆ ಮಾಡಲು ಹಲವು ಪ್ರತಿತಂತ್ರಗಳನ್ನೂ ಹೆಣೆಯುತ್ತಿದೆ.

ಒಟ್ಟಾರೆ, ಮೇಕೆದಾಟು ಪಾದಯಾತ್ರೆ ಕೇವಲ ಮುಂದಿನ ಸಿಎಂ ಗಾದಿಯ ಪೈಪೋಟಿಗೆ ಸೀಮಿತವಾದ ಕಾಂಗ್ರೆಸ್ ಪಕ್ಷದೊಳಗಿನ ಆಂತರಿಕ ಹಾವು ಏಣಿ ಆಟವಾಗಿ ಮುಗಿದುಹೋಗುವುದೆ? ಅಥವಾ ಹಳೇ ಮೈಸೂರು ಭಾಗದ ಜೆಡಿಎಸ್ ತಾಯಿಬೇರನ್ನೇ ಕಿತ್ತು ಹಾಕಿ ಪ್ರಾದೇಶಿಕ ಪಕ್ಷವನ್ನು ಬುಡಮೇಲು ಮಾಡುವುದೆ? ಅಥವಾ ಬೆಂಗಳೂರಿನಲ್ಲಿ ಬಿಜೆಪಿಗೆ ಮರ್ಮಾಘಾತ ನೀಡುವ ಮೂಲಕ ಮುಂದಿನ ಬಾರಿ ಅಧಿಕಾರ ಹಿಡಿಯಲು ದಾಳವಾಗುವುದೇ ? ಎಂಬ ಹಲವು ಪ್ರಶ್ನೆಗಳು ಮೇಕೆದಾಟು ಪಾದಯಾತ್ರೆಯ ಸುತ್ತ ಎದ್ದಿವೆ. ಪಾದಯಾತ್ರೆ ಜ.9ರಂದು ಆರಂಭವಾಗಿ 19ಕ್ಕೆ ಮುಕ್ತಾಯವಾಗುವ ಮುನ್ನವೇ ಬಹುತೇಕ ಈ ಪ್ರಶ್ನೆಗಳಿಗೆ ಒಂದು ಮಟ್ಟದ ಉತ್ತರಗಳೂ ಸಿಗಬಹುದು! ಮೇಕೆದಾಟು ಯೋಜನೆ ರಾಜ್ಯದ ರೈತರ ಹಿತದೃಷ್ಟಿಯಿಂದ ಆಗಲೇ ಬೇಕಾದ ಬಹುಮುಖ್ಯ ಕಾರ್ಯವಾಗಿದೆ. ಅದರಲ್ಲಿ ಎರಡು ಮಾತಿಲ್ಲ. ಈ ಬಗ್ಗೆ ಆಡಳಿತರೂಢ ಬಿಜೆಪಿ ಸರ್ಕಾರ ತಲೆಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಸರ್ಕಾರದ ಪರವಾಗಿ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸರ್ಕಾರದ ಮಟ್ಟದಲ್ಲಿ ಏನೇನು ಪ್ರಕ್ರಿಯೆ ನಡೆಯುತ್ತಿದೆ? ಎಂಬುದರ ಬಗ್ಗೆ ಇದುವರೆಗೆ ಯಾವುದೇ ರೀತಿಯ ಹೇಳಿಕೆಗಳನ್ನು ನೀಡಿಲ್ಲ.

## ಡಿಕೆಶಿಗೆ ಲಾಭ ತಂದುಕೊಡಲಿರುವ ಪಾದಯಾತ್ರೆ

ಒಂದು ವೇಳೆ ಸರ್ಕಾರದ ಮಟ್ಟದಲ್ಲಿ ನಡೆಯುತ್ತಿರುವ ಪ್ರಕ್ರಿಯೆಗಳ ಬಗ್ಗೆ ಸಾರ್ವಜನಿಕವಾಗಿ ತೆರೆದಿಟ್ಟಿದ್ದರೆ ಬಹುಶಃ ಇವತ್ತು ಕಾಂಗ್ರೆಸ್ ಪಾದಯಾತ್ರೆ ಮಾಡುವುದಕ್ಕೆ ಅವಕಾಶವೇ ಸಿಗುತ್ತಿರಲಿಲ್ಲವೇನೋ?. ಆದರೆ ಈ ವಿಚಾರದಲ್ಲಿ ಸರ್ಕಾರ ಜಾಣಮೌನ ವಹಿಸಿದೆ. ಇದರ ಹಿಂದೆ ಯಾವ ರೀತಿಯ ರಾಜಕೀಯ ಅಡಗಿದೆ? ಎಂಬುದು ಸದ್ಯ ರಹಸ್ಯವಾಗಿ ಉಳಿದಿದೆ.

ಇನ್ನು ಪಾದಯಾತ್ರೆಗೆ ಕರೆ ನೀಡಿರುವ ಕೆಪಿಸಿಸಿ ಅಧ್ಯಕ್ಷ ಡಿ. ಕೆ. ಶಿವಕುಮಾರ್‌ಗೆ ರಾಮನಗರದ ಮಟ್ಟಿಗೆ ಮುಂದಿನ ಚುನಾವಣೆಗೆ ಈ ಪಾದಯಾತ್ರೆ ಒಂದಷ್ಟು ಲಾಭ ತಂದುಕೊಡಲಿರುವುದಂತು ಸತ್ಯ. ಜತೆಗೆ ಪಕ್ಷಕ್ಕೂ ಇದು ಮುಂದಿನ ದಿನಗಳಲ್ಲಿ ಸಹಕಾರಿಯಾಗಲಿದೆ. ಪ್ರತಿಯೊಂದು ವಿಚಾರಗಳನ್ನು ಮುಂದಿಟ್ಟುಕೊಂಡು ಸರ್ಕಾರದ ವಿರುದ್ಧ ಹೋರಾಟಕ್ಕಿಳಿದಿರುವ ಕಾಂಗ್ರೆಸ್ ಮೇಕೆದಾಟು ಪಾದಯಾತ್ರೆಯನ್ನು ಪ್ರತಿಷ್ಠೆಯಾಗಿ ಪರಿಗಣಿಸಿದೆ.

## ಮೇಕೆದಾಟು ಯೋಜನೆ ಏಕೆ ಬೇಕು?

ಹೋರಾಟವೇ ಹೊರತು ಇದರ ಹಿಂದೆ ಯಾವುದೇ ಸ್ವಾರ್ಥವಿಲ್ಲ ಎಂದು ಪಕ್ಷದ ನಾಯಕರು ಹೇಳುತ್ತಲೇ ಬರುತ್ತಿದ್ದಾರೆಯಾದರೂ ಈಗಿನ ಪರಿಸ್ಥಿತಿಯಲ್ಲಿ ಏನೇ ಮಾಡಿದರೂ ಅದು ರಾಜಕೀಯವಾಗಿಯೇ ಗೋಚರಿಸುತ್ತದೆ. ಪಾದಯಾತ್ರೆಯನ್ನು ಜೆಡಿಎಸ್ ವಿರೋಧಿಸಿರುವುದರಿಂದ ಮತ್ತು ರಾಮನಗರ ಸೇರಿದಂತೆ ಹಳೆ ಮೈಸೂರು ವ್ಯಾಪ್ತಿಯಲ್ಲಿ ಜೆಡಿಎಸ್ ಇಂದಿಗೂ ಪ್ರಬಲವಾಗಿರುವುದರಿಂದ ಎಲ್ಲೋ ಒಂದು ಕಡೆ ಕಾಂಗ್ರೆಸ್ ನಾಯಕರಿಗೆ ಭಯವಂತು ಇದ್ದೇ ಇದೆ. ಹೀಗಾಗಿಯೇ ಮೇಕೆದಾಟು ಯೋಜನೆ ಏಕೆ ಬೇಕು ಎಂಬುದರ ಬಗ್ಗೆ ನಾಯಕರು ಜನರಿಗೆ ತಿಳಿಸಿಕೊಡುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಅವರು ಹೇಳುವ ಪ್ರಕಾರ ಪ್ರತಿ ವರ್ಷ ಸುಮಾರು 60 ರಿಂದ 80 ಟಿಎಂಸಿ ಪ್ರಮಾಣದ ನೀರು ವ್ಯರ್ಥವಾಗಿ ಸಮುದ್ರ ಸೇರುತ್ತಿದೆಯಂತೆ. ಮೇಕೆದಾಟು ಸಮಾನಾಂತರ ಜಲಾಶಯ ನಿರ್ಮಾಣದಿಂದ ತಮಿಳುನಾಡಿನ ರೈತರ ಹಿತಕಾಯುವ ಜತೆಗೆ ಹಳೇ ಮೈಸೂರು ಭಾಗದ ಎಲ್ಲಾ ಜಿಲ್ಲೆಗಳ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಮಾತ್ರವಲ್ಲದೆ, 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೂ ಅವಕಾಶವಿದೆಯಂತೆ.

## ಸರ್ಕಾರಗಳ ಮೇಲೆ ಒತ್ತಡ ಹೇರಲು ಪಾದಯಾತ್ರೆ


ಪ್ರತಿ ವರ್ಷ ತಮಿಳುನಾಡಿಗೆ 176 ಟಿಎಂಸಿ ನೀರು ಹರಿಸುವಂತೆ ಸುಪ್ರೀಂಕೋರ್ಟ್ ಆದೇಶ ನೀಡಿದೆ. ಆದರೆ ಸಮಾನಂತರ ಜಲಾಶಯ ನಿರ್ಮಿಸದಂತೆ, ವಿದ್ಯುತ್ ಹಾಗೂ ಕುಡಿಯುವ ನೀರಿನ ಯೋಜನೆಗಳನ್ನು ಕೈಗೆತ್ತಿಕೊಳ್ಳದಂತೆ ಎಲ್ಲಿಯೂ ಹೇಳಿಲ್ಲ. ಈ ಯೋಜನೆ ಅನುಷ್ಠಾನಗೊಂಡರೆ ರೈತರಿಗೆ ಉಚಿತ ವಿದ್ಯುತ್ ಅನ್ನು ದಿನಪೂರ್ತಿ ನೀಡಬಹುದು ಎಂಬುದು ಕಾಂಗ್ರೆಸ್ ನಾಯಕರ ಅಭಿಪ್ರಾಯವಾಗಿದೆ.

# ಕಿಂಗ್ ಮೇಕರ್ ಜೆಡಿಎಸ್‌ಗೆ ಇನ್ನು ಕಷ್ಟದ ಕಾಲ..!

●ವತಿಮ




ಜನತಾ ದಳ ಇತಿಹಾಸವನ್ನು ನೋಡುತ್ತಾ ಹೋದರೆ ಒಂದು ರೀತಿ ಈ ಪಕ್ಷದಲ್ಲಿ ಒಂದು ಸೈದ್ಧಾಂತಿಕ ಹೋರಾಟದ ಸಾಮಾಜಿಕ ಕಳಕಳಿಯ ವ್ಯಕ್ತಿಗಳ ದಂಡೆ ಇತ್ತು ನೂರಾರು ನಾಯಕರು ಅದರ ಕೊಂಡಿಯಾಗಿ ಇಡೀ ರಾಜ್ಯವನ್ನೇ ವ್ಯಾಪಿಸಿದ್ದರು.. ರಾಮಕೃಷ್ಣ ಹೆಗಡೆ ಮತ್ತು ಎಚ್.ಡಿ.ದೇವೇಗೌಡ ಅವರ ಕಿತ್ತಾಟದಿಂದ ದಳ ಇಬ್ಭಾಗವಾದಗಲೂ ಕೂಡ ಆಕೆ ಈಕಡೆ ಒಂದಿಷ್ಟು ಅದೇ ನಾಯಕರು ಇದ್ದರು ಆದರೆ ಯಾವಾಗ ದೇವೇಗೌಡರು ಪಕ್ಷವನ್ನು ತಮ್ಮ ಕುಟುಂಬಕ್ಕೆ ಆಪ್ತವಾಗಿ ಮಾಡಿಕೊಂಡಿತೋ ಅಲ್ಲಿಂದ ಜನನಾಯಕರ ದಂಡು ಅನಿವಾರ್ಯವಾಗಿ ಕಾಂಗ್ರೆಸ್ ಮತ್ತು ಬಿಜೆಪಿಗೆ ಗುಳೆ ಹೋದರು..ಆದರೂಎದೆ ಗುಂದದ ದೇವೇಗೌಡರು ಪಕ್ಷದಪಕ್ಕದಲ್ಲೆ ಕುಟುಂಬ ಸದಸ್ಯರನ್ನು ಇಟ್ಟುಕೊಂಡು ಅವರನ್ನು ಬೆಳಸುತ್ತಲೇ ರಾಜ್ಯದ ಇತರೆ ನಾಯಕರನ್ನು ಕಡೆಗಣಿಸುತ್ತಾ ಹೋದರೂ ಏನೇ ನಿರ್ಧಾರಗಳಾದರೂ ಅದು ಕೇವಲ ದೇವೇಗೌಡರಿಂದ ಮಾತ್ರ ಬೇರೆ ಯಾರೇ ನಿರ್ಧಾರಗಳಿಗೆ ಅಲ್ಲಿ ಬೆಲೆ ಇಲ್ಲದಂತಾಯಿತು. ಬೇರೆಯವರ ಕಣ್ಣೊರಿಸಲು ಪಕ್ಷಕ್ಕೆ ಬೇರೆಯವರನ್ನು ಅಧ್ಯಕ್ಷರನ್ನಾಗಿ ಕೂರಿಸಿದರು ಕೂಡ ಅವಿರಿಗೆ ಕಾಸಿನ ಕಿಮ್ಮತ್ತೂ ಇಲ್ಲ ಕೇವಲ ನಾಮಕವಾಸ್ತೆಗೆ ಮಾತ್ರ ಯಾವುದೇ ನಿರ್ಧಾರ ಸೂಚನೆಗಳನ್ನು ನೀಡುವ ಅಧಿಕಾರ ಅವರಿಗೆ ಇರುವುದಿಲ್ಲ ಹೀಗಾಗಿಯೇ ಯಾರೇ ಅಧ್ಯಕ್ಷರಾದರೂ ನಂತರ ಅವರು ಪಕ್ಷವನ್ನು ತೊರೆಯುವುದು ಹಿಂದಿನಿಂದಲೂ ಬಂದ ವಾಡಿಕೆಯಾಗಿದೆ. ಈಗ ಕುಮಾರಸ್ವಾಮಿ ಜೆಡಿಎಸ್ ಅಧ್ಯಕ್ಷರಾಗಿದ್ದಾರೆ. ನಿಜಕ್ಕೂ ಅವರು ಮಾನಸಿಕವಾಗಿ ಅನುಭವಿಸುತ್ತಿರುವ ಕಷ್ಟ ಎಲ್ಲರಿಗೂ ಗೊತ್ತಿದೆ ನಾಮಕಾವಸ್ತೆಗೆ ಪಕ್ಷದ ಅಧ್ಯಕ್ಷರಾದರೂ ಗೌಡರು ಕುಮಾರಸ್ವಾಮಿ ಹೇಳಿದವರಿಗೆ ಚುನಾವಣೆಯಲ್ಲಿ ಬಿ ಪಾರಂಗೆ ಸಹಿ ಹಾಕಬೇಕಷ್ಟೆ ಅಧ್ಯಕ್ಷ ಕೇವಲ ತಲೆಅಲ್ಲಾಡಿಸಲು ಅಷ್ಟೆ ಹೀಗಾಗಿ ಈಗ ಕುಮಾರಸ್ವಾಮಿಯೂ ಕೂಡ ಪಕ್ಷವನ್ನು ತೊರೆಯುವ ದಾವಂತದಲ್ಲಿದ್ದಾರೆ.



ಈಗಾಗಲೇ ಉತ್ತರ ಕರ್ನಾಟಕದ ಕೋನಾರೆಡ್ಡಿ ಪಕ್ಷವನ್ನು ತೊರೆದಿದ್ದಾರೆ ಹೀಗೆ ಒಬ್ಬೊಬ್ಬರಾಗಿ ಪಕ್ಷವನ್ನು ತೊರೆಯುತ್ತಲೆ ಇರುತ್ತಾರೆ.

ಈಗ ಉತ್ತರ ಕರ್ನಾಟಕ ಮತ್ತು ಮಂಗಳೂರು ಭಾಗ ಮಧ್ಯೆಭಾಗದಲ್ಲಿ ಕೇವಲ ಬೆರಳೆಣಿಕೆಯಷ್ಟು ಮಂದಿ ಮಾತ್ರ ಜೆಡಿಎಸ್ ಪಕ್ಷದ ಕಾರ್ಯಕರ್ತರು ನಾಯಕರಿದ್ದಾರೆ ಆದರೆ ಒಂದು ಸೀಟು ಗೆಲ್ಲಿಸುವಷ್ಟು ಆ ಪಕ್ಷಕ್ಕೆ ಈಗ ಇಲ್ಲ ಏನಿದ್ದರೂ ಅದು ಹಳೆ ಮೈಸೂರು ಭಾಗವನ್ನು ಮಾತ್ರ ನಂಬಿಕೊಳ್ಳಬೇಕಿದೆ.

ಹೌದು ಹಳೇ ಮೈಸೂರು ಭಾಗಕ್ಕೆ ಸೀಮಿತಗೊಳಿಸುವ ಯೋಜನೆಯಿದ್ದರೂ, ಪಕ್ಷದ ಸ್ಥಿತಿ ಸಂಪೂರ್ಣ ಬದಲಾಗಿರುತ್ತಿದೆ. ಇಲ್ಲಿಯೂ ಕೂಡ ತಮ್ಮ ಕುಟುಂಬ ಸದಸ್ಯರಿಗೆ ಸ್ಥಾನಮಾನ ಗಳು ನೀಡುವುದರಲ್ಲಿ ಕಾರ್ಯಕರ್ತರನ್ನು ನಿರಂತರವಾಗಿ ಕಡೆಗಣಿಸಿದ್ದರಿಂದಲೇ, ಸಂಘಟನೆಗೆ ಹೊಡೆತ ಬಿದ್ದಿದೆ.




ಹಳೆ ಮೈಸೂರು ಭಾಗದ ನಾಯಕರೇ ಈಗ ಎರಡು ರಾಷ್ಟ್ರೀಯ ಪಕ್ಷಗಳಿಗೆ ಗುಳೆ ಹೋಗಿದ್ದಾರೆ ಚೆಲುವರಾಯಸ್ವಾಮಿ. ಬಾಲಕೃಷ್ಣ,ಜಮೀರ ಅಹಮದ್,ಜಿ.ಟ.ದೇವೇಗೌಡ, ಹೀಗೆ ಒಬ್ಬೊಬ್ಬರಾಗಿ ಕಳಚಿಕೊಳ್ಳುತ್ತಿದ್ದಾರೆ ಆದರೂ ಇನ್ನೂ ನಮ್ಮಲ್ಲಿ ಶಕ್ತಿ ಇದೆ ನಮ್ಮ ಕುಟುಂಬದ ಸದಸ್ಯರಿದ್ದಾರೆ ಅಲ್ಲಿಗೆ ನಾವು ಅವರನ್ನು ಸ್ಪರ್ಧಿಸುತ್ತೇವೆ ಎನ್ನುವ ಮಟ್ಟಿಗೆ ಗೌಡರ ಕುಟುಂಬ ಬಿದ್ದರೂ ಮೀಸೆ ಮಣ್ಣಾಗಿಲ್ಲ ಎನ್ನುವ ಪರಿಸ್ಥಿತಿಯಲ್ಲಿದೆ. ಯಾಕೆಂದರೆ ಗೌಡರಿಗೆ ಬೇಕಿರುವುದು 20–25 ಸೀಟು ಗೆದ್ದರೆ ಸಾಕು ಆ ಮೂಲಕ ಎರಡು ರಾಷ್ಟ್ರೀಯ ಪಕ್ಷಗಳನ್ನು ಆಟ ಆಡಿಸಬಹುದು ತಮ್ಮ ಅಂಕೆಯಲ್ಲಿ ಇಟ್ಟುಕೊಳ್ಳಬಹುದು ಎನ್ನುವುದು ಅವರ ನಿರ್ಧಾರ ಅವರ ಟಾರ್ಗೆಟ್ 150 ಎನ್ನುವದು ಕೇವಲ ಒಂದು ಕನಸಿನ ಮಾತು ಇನ್ನೂ ಆ ಪಕ್ಷದ ಪರಿಸ್ಥಿತಿಯನ್ನು ಗಮನಿಸಿದರೆ 25 ಸ್ಥಾನಗಳ ಮುಂದೆ ದಾಟುವ ಪರಸ್ಥಿತಿಯಂತೂ ಇಲ್ಲವೆ ಇಲ್ಲ ಈಗ ಅದು ದೊಡ್ಡಗೌಡರು,ಕುಮಾರಸ್ವಾಮಿ, ರೇವಣ್ಣ ಉಳಿದಂತೆ ಅವರ ಮಕ್ಕಳು ಪತ್ನಿಯರು ಅವರ ಕುಟುಂಬದ ಇತರ ಸದಸ್ಯರನ್ನು ನಿಲ್ಲಿಸಿ ಗೆಲ್ಲಿಸುವುದಷ್ಟೆ ಅವರ ಮುಂದಿರುವ ಯೋಚನೆ. ಬರುವ ಚುನಾವಣೆಯಲ್ಲಿ ಮತ್ತೊಂದು ಆಟಕ್ಕೂ ಅದು ಸಿದ್ದವಿದೆ ಈ ಎಲ್ಲಾ ಆಟದ ಜೊತಗೆ ಕಳೆದ ವಾರದ ಹಿಂದೆ ಬಂದ ಸ್ಥಳೀಯ ಸಂಸ್ಥೆಗಳ ಚುನಾವನೆ ಫಲಿತಾಂಶ ಇದಕ್ಕೊಂದು ನಿದರ್ಶನವಾಗಬಲ್ಲದು. ಹೌದು, ಎರಡು ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರಿ ನಡೆಸಿದ ಕುಮಾರಸ್ವಾಮಿ ಅವರು, ಕೇವಲ ಒಂದು ಪುರಸಭೆಯಲ್ಲಿ ಗೆಲವು ಸಾಧಿಸಿದ ಮಾತ್ರಕ್ಕೆ 'ಬಿಡದಿ ಪುರಸಭೆ ಚುನಾವಣೆ ನನ್ನ ಶಕ್ತಿ ಹೆಚ್ಚಿಸಿದೆ' ಎನ್ನುವ ಟ್ವೀಟ್ ಮಾಡುತ್ತಾರೆ. ಇನ್ನೊಂದೆಡೆ ಮುಂದಿನ ಚುನಾವಣೆಯಲ್ಲಿ ಸ್ಪಷ್ಟ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಏರುತ್ತೇವೆ ಎನ್ನುವ ಮಾತನ್ನು ಹೇಳುತ್ತಾರೆ. ಆದರೆ ಸ್ಪಷ್ಟಬಹುಮತ ಹೋಗಲಿ, 'ಕಿಂಗ್ ಮೇಕರ್' ಆಗುವ ಸ್ಥಿತಿಯಲ್ಲಿಯೂ ಸದ್ಯಕ್ಕಿಲ್ಲ ಎನ್ನುವ ಅನುಮಾನಗಳು ರಾಜಕೀಯ ವಲಯದಲ್ಲಿ ಶುರುವಾಗಿದೆ.

## ಹಿಂದೆ ಇದ್ದ ನಾಯಕರು ಈಗ ಇಲ್ಲ

ಆದರೆ ಜೆಡಿಎಸ್‌ನ ಇಂದಿನ ಸ್ಥಿತಿಗೂ ಮೊದಲು, ಜನತಾ ದಳ ಪಕ್ಷದ ಪರಿಸ್ಥಿತಿ ಹೀಗಿರಲಿಲ್ಲ. ರಾಜ್ಯಕಂಡ ಅದ್ಭುತ ರಾಜಕೀಯ ನಾಯಕ ರನ್ನು ಕರ್ನಾಟಕಕ್ಕೆ ಮಾತ್ರವಲ್ಲದೇ ದೇಶಕ್ಕೆ ನೀಡಿರುವ ಹಿರಿಮೆ ಈ ಪಕ್ಷಕ್ಕಿತ್ತು. ಈಗಲೂ ವಿಧಾನಸಭೆಯ ಅತ್ಯುತ್ತಮ ಸಂಸದೀಯ ಪಟುಗಳನ್ನು ತಗೆದುಕೊಂಡರೆ ಬಹುತೇಕರು ಜನತಾದಳದ ಮೂಲದವರೇ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಾನೂನು ಮತ್ತು ಸಂಸದೀಯ ಮಾಧುಸ್ವಾಮಿ, ಹಿರಿಯ ಸಚಿವರಾದ ಗೋವಿಂದ ಕಾರಜೋಳ ಮಾತ್ರವಲ್ಲದೇ, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಪ್ರತಿಪಕ್ಷ ನಾಯಕರಾದ ಸಿದ್ದರಾಮಯ್ಯ, ಆರ್.ವಿ ದೇಶಪಾಂಡೆ, ರಮೇಶ್‌ಕುಮಾರ್ ಸೇರಿದಂತೆ ಅನೇಕರ ಮೂಲಕ ಜನತಾಪರಿವಾರ. ಪಕ್ಷ ಇಬ್ಭಾಗವಾಗಿ ಜಾತತೀತ ಜನತಾದಳವಾದ ಬಳಿಕವೂ, ಹಲವು ನಾಯಕರನ್ನು ಹುಟ್ಟಿ ಹಾಕಿರುವ ಕೀರ್ತಿ ಜೆಡಿಎಸ್‌ಗಿದೆ. ಅಂತಹ ಘಟಾನುಘಟಿ ನಾಯಕರಿದ್ದ ಪಕ್ಷಕ್ಕೆ ಇಂದು ನಾಯಕತ್ವದ ಸಮಸ್ಯೆ ಎದುರಾಗಿದೆ.

ನಾಣಯ್ಯ ಅವರು ಹಲವು ಬಾರಿ, 'ದೇವೇಗೌಡರು, ರಾಮಕೃಷ್ಣ ಹೆಗಡೆ ಅವರು ಬೇರೆಯಾಗದಿದ್ದರೆ, ರಾಜ್ಯ ರಾಜಕೀಯದ ಪರಿಸ್ಥಿತಿ ಭಿನ್ನವಾಗಿರುತ್ತಿತ್ತು' ಹೇಳಿದ್ದಾರೆ. ಇದು ಸತ್ಯವೂ ಸಹ. ಆದರೆ ದೇವೇಗೌಡರ ಸಾರಥ್ಯದಲ್ಲಿ ಜೆಡಿಎಸ್ ಕಟ್ಟಿದ ಬಳಿಕವೂ, ಆರಂಭದಲ್ಲಿ ಇದೇ ಅಭಿಪ್ರಾಯ ಅನೇಕರಲ್ಲಿ ಇತ್ತು. ಆದರೆ ಅದಾದ ಬಳಿಕ ದೇವೇಗೌಡರು ಪಕ್ಷದ ವ್ಯಾಪ್ತಿ ರಾಜ್ಯದ ಬದಲಿಗೆ ಹಳೇ ಮೈಸೂರು ಭಾಗ ಅಥವಾ ಅವರ ಕುಟುಂಬ ಸದಸ್ಯರಿಗೆ ಸೀಮಿತಗೊಳಿಸಿ 'ಕಿಂಗ್ ಮೇಕರ್' ಆಗುವ ಲೆಕ್ಕಾಚಾರವನ್ನು ಹಾಕಿಕೊಂಡಿದ್ದರು.



ಕೇವಲ ಹಳೇ ಮೈಸೂರು ಭಾಗಕ್ಕೆ ಮಾತ್ರ ಸೀಮಿತಗೊಳಿಸಿ ಯೋಜನೆ ಮಾಡಿಕೊಂಡಿದ್ದರೂ, ಪಕ್ಷದ ಸ್ಥಿತಿ ಬದಲಾಗಿರುತ್ತಿತ್ತು. ಆದರೆ ಅದನ್ನು ಮಾಡದೇ, ತಮ್ಮ ಕುಟುಂಬ ಸದಸ್ಯರಿಗೆ ಸ್ಥಾನಮಾನಗಳು ನೀಡುವುದಷ್ಟೇ ಅಲ್ಲದೇ, ಪ್ರಾಮಾಣಿಕ ಕಾರ್ಯಕರ್ತರನ್ನು ನಿರಂತರವಾಗಿ ಕಡೆಗಣಿಸಿದ್ದರಿಂದಲೇ, ಪಕ್ಷದ ಸಂಘಟನೆ ಯಲ್ಲಿ ಭಾರಿ ಸಮಸ್ಯೆ ಉಂಟಾಗಿರುವುದು. ಪಕ್ಷದ ಈ ರೀತಿಯ ನಿಲುವಿನಿಂದಾಗಿ ಕೇವಲ ನಾಯಕರನ್ನು ಕಳೆದುಕೊಳ್ಳುವುದು ಮಾತ್ರವಲ್ಲದೇ, ಪಕ್ಷದ ಕಾರ್ಯಕರ್ತರು ವಿಮುಖರಾಗುತ್ತಾ ಸಾಗಿದರು. ಇದರಿಂದ ಚುನಾವಣೆಯಿಂದ ಚುನಾವಣೆಗೆ ಪಕ್ಷದ ಸಾಧನೆ ಕ್ಷೀಣಿಸುತ್ತಾ ಸಾಗಿದೆ ಹೊರತು, ಮೇಲ್ಮುಖವಾಗಿಲ್ಲ. ವಿಧಾನಸಭೆ, ಲೋಕಸಭೆ ಮಾತ್ರವಲ್ಲದೇ, ಜೆಡಿಎಸ್‌ನ ಜೀವಾಳವಾಗಿರುವ ಪಂಚಾಯಿತಿ ಚುನಾವಣೆಯ ಕೆಟ್ಟ ಸಾಧನೆ ನಾಯಕರಿಗೆ ನುಂಗಲಾರದ ತುತ್ತಾಗಿದೆ. 2018ರ ವಿಧಾನಸಭಾ ಚುನಾವಣೆಯಲ್ಲಿ ಮೂರು ಕ್ಷೇತ್ರಗಳನ್ನು ಕಳೆದುಕೊಂಡ ಜೆಡಿಎಸ್, 2019ರ ಲೋಕಸಭಾ ಚುನಾವಣೆ ಯಲ್ಲಿಯೂ ಭಾರಿ ಮುಖಭಂಗ ಅನುಭವಿಸಬೇಕಾಯಿತು. ಸ್ವತಃ ದೇವೇಗೌಡರು ಹಾಗೂ ಮೊಮ್ಮಗ ನಿಖಿಲ್ ಕುಮಾರಸ್ವಾಮಿ ಚುನಾವಣೆ ಯಲ್ಲಿ ಸೋಲನುಭವಿಸಬೇಕಾಯಿತು. ಬಳಿಕ ನಡೆದ ಸಾಲು ಸಾಲು ಉಪಚುನಾವಣೆಯಲ್ಲಿ, ಜೆಡಿಎಸ್ ಮುಖಭಂಗ ಅನುಭವಿಸಿದೆ ಹೊರತು, ಧನಾತ್ಮಕ ಫಲಿತಾಂಶ ಬಂದಿಲ್ಲ. ಹೀಗೆ ನಿರಂತರವಾಗಿ ಸಂಘಟನೆ ಕ್ಷೀಣಿಸುತ್ತಿರುವುದನ್ನು ಸೂಕ್ಷ್ಮವಾಗಿ ಗಮನಿಸಿದರೆ, ಈ ಸ್ಥಿತಿ ಹೀಗೆ ಮುಂದುವರಿದರೆ ಮುಂದಿನ ಚುನಾವಣೆಯಲ್ಲಿ 'ಕಿಂಗ್ ಮೇಕರ್' ಆಗುವ ಜೆಡಿಎಸ್ ಆಸೆಯೂ ಪ್ರಾಯೋಗಿಕವಾಗಿ ಈಡೇರುವುದಿಲ್ಲ ಎನ್ನುವುದು ಸ್ಪಷ್ಟ.

# ಹಸಿವು ಎನ್ನುವ ಮೂರಕ್ಷರದ ಪದ...

ಸ್ಥಿತಿಬಿಂಬ

ಡಾ.ಶಿವಕುಮಾರ್ ಕಂಪ್ಲಿ



ಹಸಿವು ಎನ್ನುವ ಮೂರಕ್ಷರದ ಪದ ಇಡೀ ಮನುಕುಲವನ್ನೇ ನಾಚಿ ತಲೆ ತಗ್ಗಿಸುವಂತೆ ಮಾಡುತ್ತದೆ. "ಹಸಿವಿಗೆ ಲಿಂಗ,ಜಾತಿ,ಧರ್ಮ,ದೇಶಗಳೆಂಬ ಎಲ್ಲೆಗಳಿಲ್ಲ".ಎಂಬ ಮಾತು ಕೆಲವರ ಬಾಯಲ್ಲಿ ಬಂದರೂ ಹಸಿವು ಕೆಳವರ್ಗಗಳನ್ನ, ಅನಾಥರನ್ನ,ಕಾಡಿದಷ್ಟು ಕ್ರೂರವಾಗಿ ಉನ್ನತ ಜನರನ್ನ ಕಾಡಲಾರದು.

ಕನ್ನಡ ಸಾಹಿತ್ಯವು ಕೂಡಾ ತನ್ನ ಧಾರ್ಮಿಕ,ರಾಜಕೀಯ ಚಿತ್ರಣಗಳ ಜೊತೆಗೆ ಸಾಮಾಜಿಕ ಲೋಕವನ್ನ ತೆರೆವಾಗಲೇ ಹಲವು ಹಸಿವುಗಳ ತೆರೆಗಳನ್ನ ತೆರೆದಿದೆ.ವಡ್ಡಾರಾಧನೆಯ ಭದ್ರಬಾಹು ಭಟಾರರ ಕಥೆಯಲ್ಲಿ ಬರುವ ನಂದಿ ಮಿತ್ರನ ಕಥೆ ಬಡವನೊಬ್ಬನ ಆಳದ ಹಸಿವಿನ ಶಕ್ತಿಯನ್ನೇ ತೋರುತ್ತದೆ. ಎಂಟು ಜನ ಹೊರಲಾರದ ಕಟ್ಟಿಗೆ ಹೊರೆಯನ್ನ ದಿನವೂ ಅನ್ನಕ್ಕಾಗಿಯೇ ತಂದು ನಂದಿ ಮಿತ್ರ ತನ್ನ ಒಡೆಯನನ್ನ ಸಿರಿವಂತನನ್ನಾಗಿಸುತ್ತಾನೆ.ಸಿರಿವಂತನಾದ ಆ ಕಾಷ್ಟಕೂಟನ ಪತ್ನಿ ಜಯಂಘಟಿ ಒಂದು ಹಬ್ಬದ ದಿನ ಆ ಸಂಭ್ರಕ್ಕೆ ಕಾರಣನಾದ ನಂದಿಸೇನನಿಗೆ ಹೊಟ್ಟೆತುಂಬ ಊಟ ಹಾಕುತ್ತಾಳೆ.ಪರಿಣಾಮ ಆತ ಒಡೆಯನ ಬಳಿ ಕಡಿಮೆ ಬೆಲೆಯ ಬಟ್ಟೆಯನ್ನಾದರೂ ಕೊಡಿಸು ಎಂದು ಕೇಳುತ್ತಾನೆ.ಇದರ ವಾಸನೆ ಅರಿತ ಕಾಷ್ಟಕೂಟ ಬಂದು ಹೆಂಡತಿಯನ್ನ ವಿಚಾರಿಸಿ ಆಕೆ ಆ ದಿನ ಹಬ್ಬವಾದ್ದರಿಂದ ಹೊಟ್ಟೆ ತುಂಬಾ ಅನ್ನ ಹಾಕಿದೆ ಎನ್ನುತ್ತಾಳೆ.ಇದಕ್ಕೇ ಪತಿ ಕಾಷ್ಟಕೂಟ ಆಕೆಯನ್ನ ಬೆನ್ನು ಬಾರು ಬರುವಂತೆ ಬಡಿಯುತ್ತಾನೆ ಮನೆಯಿಂದಲೇ ಹೊರ ನೂಕುತ್ತಾನೆ.

ಅರವಿಂದ ಮಾಲಗತ್ತಿಯವರ ಗೌರ್ಮೆಂಟ್ ಬ್ರಾಹ್ಮಣದಲ್ಲಿ ಮದುವೆಯ ಮನೆಯಲ್ಲಿ ಅನ್ನ ಕದ್ದು ತರುವವರು,ಸಂಭೋಳಿಯಲ್ಲಿ ಗೆಳೆಯರೊಂದಿ ಕದಿಯಲು ಹೋದ ಹುಡುಗ ಏಟು ತಿನ್ನುವುದು, ಬಿಕ್ಷೆ ಎತ್ತುವುದು ಗಮನಾರ್ಹ ಇಲ್ಲಿನ ಹಸಿವಿ ಕಣ್ಣರಳಿಸೋ ಚಿತ್ರವಾದರೆ, ಇನ್ನೊಂದು ಕರುಳಿರಿವ ಚಿತ್ರವಿದೆ. ಅದು ಹೀನ ಜಾತಿಯ ಹುಡುಗ ಮನೆ ಹೊರಗೆ ಕುಳಿತು ಬೀಸುವ ಗಾಳಿಯೊಡನೆ ಅನ್ನ ತಿನ್ನುವ ದೃಶ್ಯ .ಮನೆಯಾಚೆಗೆ ಕುಕ್ಕುರು ಕುಳಿತು ತಿನ್ನಬೇಕಾದ 'ಕೆಳ' ಕುಲದವ ಅನ್ನದ ರುಚಿ ಸವಿವಾಗಲೇ "ಗಾಳಿ ಬೀಸಲು ಅನ್ನದ ತುಂಬಾ ಮಣ್ಣು ತುಂಬ್ಕಂಡ್ಬುಡ್ತು.ಬಾಯ್ಗಿಕ್ಕಂಡು ಅಗಿದ್ರೆ ಕಲ್ಗಳು ಕರಕರ್ನೆ ಗೋಳಾಡ್ತಿದ್ದವು.ಅನ್ನಾನಾ ಬಿಟ್ಟುಟ್ರೆ ಏನಾನ ಅಂತಾರೆ ಅನ್ಕಂಡು ನಿಧಾನವಾಗಿ ನಮುಲ್ಕೊಂಡು ಅನ್ನನೆಲ್ಲಾ ತಿಂದು ಮುಗಿಸ್ದೆ."



ಊರು ಕೇರಿಯಲ್ಲಿ ಹಸಿವಿನ ಕುಟುಂಬಕ್ಕೆ ಶಾನುಭೋಗರ ಮನೆಯ ತಂಗಳೂ ಸೊಗಸಾಗಿ ಕಾಣುವುದು,ಹಸಿವಿನಿಂದಲೇ ಆ ಜನರು ಅಲ್ಲಿಗೆ ಬಂದ ಅಪರಿಚಿತ ಎಮ್ಮೆಯನ್ನ ಎಗರಿಸಿ ಮುಗಿಸುವುದು,ಅವರಲ್ಲೊಬ್ಬನಿಗೆ ದೇವರು ಮೈಮೇಲೆಯೇ ಬಂದು ತನಗೆ ಬೇಕಾದ್ದ ಕುರಿ ಆರಿಸಿ ತಿನ್ನಲು ಹಂಬಲಿಸುವುದು, ಎಲ್ಲಾ ವಿವರಗಳಿಗೆ ಕಳಸವಿಟ್ಟಂತೆ ಊರು ಕೇರಿಯ ಆರಂಭವೇ ಉಸಿರು ಗಟ್ಟಿಸುತ್ತದೆ. ." ಎಂದಿನಂತೆ ಹುಡುಗರೆಲ್ಲ ನಮ್ಮ ಮನೆಯ ಪಕ್ಕದ ಮೋಟುಗೋಡೆಯ ಮೆಲೆ ನಿಂತು ಅಪ್ಪ ಅಮ್ಮಂದಿರನ್ನು ಕೂಗುತ್ತಿದ್ದಾಗ ನಮಗೆ ಒಂದು ನೋಟ ಕಾಣಿಸಿತು. ಐನೋರ ಹೊಲದಲ್ಲಿ ಇಬ್ಬರು ಮನುಷ್ಯರ ಹೆಗಲ ಮೇಲೆ ನೊಗ ಹೂಡಿ ಇನ್ನಿಬ್ಬರು ಹೊಲ ಊಳುತ್ತಿದ್ದರು. ನೊಗ ಹೊತ್ತ ಆ ಇಬ್ಬರು ಮನುಷ್ಯರು ಎತ್ತುಗಳಂತೆ ಮುಂದೆ ಹೋಗುತ್ತಿದ್ದರೆ ಇನ್ನೊಬ್ಬ ಹಿಂದಿನಿಂದ ಚಾಟಿ ತಿರುಗಿಸುತ್ತ ಉಳುಮೆ ಮಾಡುತ್ತಿದ್ದ ದೃಶ್ಯ ಮೋಜಿನಂತೆ ಕಂಡರೂ ನೊಗ ಹೊತ್ತಿದ್ದ ಇಬ್ಬರು ವ್ಯಕ್ತಿಗಳಲ್ಲಿ ಒಬ್ಬ ನನ್ನ ಅಪ್ಪ ಎಂದು ಗೊತ್ತಿದ್ದ ಕ್ಷಣದಿಂದ ನನ್ನಲ್ಲಿ ವಿಚಿತ್ರವಾದ ಸಂಕಟ ಶುರುವಾಯಿತು. ಹುಡುಗರಿದ್ದ ಜಾಗಕ್ಕೆ ಬಂದ ಕೆಲವು ಹೆಂಗಸರು 'ಪಾಪ ದ್ಯಾವಣ್ಣನಿಗೆ ಎಂಥ ಕಷ್ಟ ಬಂತು' ಎಂದದ್ದು ನನ್ನ ಕಿವಿಗೆ ಬಿದ್ದು ಮನಸ್ಸಿನ ನೋವು ಇಮ್ಮಡಿಯಾಯಿತು. ಗದ್ದೆಯಲ್ಲಿ ಎತ್ತಾಗಿ ದುಡಿದ ನನ್ನಪ್ಪ ಸಂಜೆ ಮನೆಗೆ ಬಂದಾಗ ಅವ್ವ ಅವನ ಭುಜಕ್ಕೆ ಎಣ್ಣೆ ಕಾಯಿಸಿ ಹಚ್ಚುತ್ತಿದ್ದಳು." ತಳವರ್ಗಕ್ಕೆ ಅನ್ನ ಎಂಬ ಶಬ್ದವೇ ಕನಸು. ಕುಂ.ವೀ.ಯವರು ದೇವರ ಹೆಣ ಕಥೆಯ ಶೋಣ್ಣೆ 'ಅನ್ನ' ಎಂಬ ಶಬ್ದ ಕೇಳಿದೊಡನೇ ಅಹ್ಹಹ್ಹಾ ಎಂದು ನಗುತ್ತಾನೆ. ಆತನ ಮನೆಯ ಹಸಿವಿನ ಸವಿಸ್ತಾರವನ್ನ ಬೆಂಕಿ ಕಾಣದ ಒಲೆಯಿಂದ ಹಿಡಿದು ನಾಯಿ ಬೆಕ್ಕು ಮತ್ತು ಕುಟುಂಬದವರೆಲ್ಲರ ಹಸಿವ ಕೆಂಡದ ಬಿಸಿಯನ್ನ ವಿವರಿಸುತ್ತಾರೆ.

ರಾಯಚೂರಿನ ಅಮರೇಶ ಗಿಣಿವಾರರ ಧಣೇರ ಬಾವಿಯಲ್ಲಿ ಹಸಿವಿನ ಅನೇಕ ಚಿತ್ರಗಳ ಸುಡು ವಾಸ್ತವಗಳಿವೆ.ಒಂದು ಕಥೆಯ ಚಿತ್ರವಂತೂ ಕರುಳು ಹಿಂಡುವಂತಿದೆ. " ಹತ್ತಿಯ ಹೊಲಕ್ಕೆ ಗೊಬ್ಬರ ಇಡಲು ಕರೆತಂದಿದ್ದರಂತೆ ಹುಡುಗ ಮಧ್ಯಾಹ್ನದೊತ್ತಿಗೆ ನಿಲೇ ಬಿದ್ದಿದ್ದ. ಆದರೆ ಇದೀಟು ಮುಗಿದರೆ ಆಯಿತು ಅಂತ ಹುರಿದುಂಬಿಸಿ ಊಟವನ್ನೂ ಹಾಕದೇ ದಗದಕ್ಕೆ ಹಚ್ಚಿದ್ದರು. ಕೊನೆಯ ಸಾಲಿಗೆ ಗೊಬ್ಬರ ಇಡುವತ್ತಿಗೆ ಉಳಿದವರಿಗಿಂತ ಹಿಂದೆ ಉಳಿದ ಹುಡುಗ ಅವರು ಮ್ಯಾರಿ ಮುಟ್ಟಿ ಬರೋವತ್ತಿಗೆ ಉಸಿರು ಚಲ್ಲಿದ್ದ. ಮಗನನ್ನ ನೋಡಿ ಸಾಂತವ್ವನ ಕಣ್ಣು ಕತ್ತಲು ಗಟ್ಟಿದಂತಾದವು ಎಳೆಯ ಕಾಲುಗಳನ್ನ ಎತ್ತಲೋ ಒಗೆದು ಮಲಗಿದಂತಿತ್ತು ಕೂಸು. ನಡುವಿಗೆ ಕಟ್ಟಿಕೊಂಡಿದ್ದ ಬಟ್ಟೆಯಲ್ಲಿ ಎರಡು ಹಿಡಿ ಗೊಬ್ಬರವಿತ್ತು. ಬೆರಳು ಮಡಚಿದ ಕೈಯಲ್ಲೂ ಗೊಬ್ಬರವೇ! ದೇವರೇ ಕೂಸಿನ ಅರ್ಧ ತೆಗೆದ ಬಾಯಲ್ಲೂ ಗೊಬ್ಬರವೇ!" ಈ ಚಿತ್ರ ವಡ್ಡಾರಾಧನೆ,ನಯಸೇನನ ಧರ್ಮಾಮೃತದ ಆ ಕಾಲದ ಒಡೆಯರ ರೀತಿ ಈಗಲೂ ಹಾಗೇ ಇರುವುದು ಕೂಲಿಗಳ ಬಾಳು ಅದೇ ನೋವು ಹೊಂದಿರುವುದನ್ನ ಸಾಬೀತುಗೊಳಿಸುತ್ತದೆ.

ಹಸಿವು ಎಂಬ ಈ ಗಂಭೀರ ಸಮಸ್ಯೆ ತೃತೀಯ ರಾಷ್ಟ್ರಗಳನ್ನ ಬೆಂಬಿಡದೆ ಕಾಡುವ ಬೇತಾಳದಂತಿದೆ.ಒಮ್ಮೆ ಜಗತ್ತಿನ ಹಸಿವಿನ ಪಟ್ಟಿ ಬಿಡಿಸಿ ನೋಡಿದರೆ ಅಲ್ಲಿ ಭಾರತೀಯರ ಬಹುದೊಡ್ಡ ಸಾಲನ್ನೂ ಕಾಣಬಹುದು.ನಮಗೆ ಈ ಸಮಸ್ಯೆ ಇಂದು ನಿನ್ನೆಯ ಸೃಷ್ಟಿಯಲ್ಲ ಕಾಲ ಕಾಲಕ್ಕೂ ಹರಿದ ಪರಂಪರೆಯಂತಿದೆ. ಪ್ರಭುಗಳು,ಜಮೀನ್ದಾರರು,ಶ್ರೀಮಂತರು ಒಟ್ಟಾಗಿ ಸೃಷ್ಟಿಸಿದ್ದು.ಅಮಾನವೀಯವಾದ ಈ ಕ್ರೂರ ಜಾಲದ ಹಿಂದೆ ರಾಜಕೀಯ ನೆಲೆಗಳಿವೆ, ಧಾರ್ಮಿಕ ಒತ್ತಡಗಳಿವೆ,ಆರ್ಥಿಕ ವಂಚನೆಗಳಿವೆ. ಹಸಿವಿಗೂ ಉತ್ಪಾದನೆಗೂ ಅದರ ಅಸಮಾನ ಹಂಚಿಕೆಗೂ ನೇರ ನಂಟಿದೆ. ಜಾಗತಿಕ ಮಾರುಕಟ್ಟೆಗಳು ಬಂದು ದುಡಿವ ಕೈಗಳಿಗೆ ಹಸಿವಿನ ನೋವು ಏರಿಸುತ್ತಿವೆ. ಬಾಯಿತುಂಬ ಲಾಭದ ಪದ ಹಾಡುತ್ತಿರುವ ಲಾಭಕೋರರು ಜನರ ರಕ್ಷಣೆಯ ಕೇಂದ್ರಗಳನ್ನ ಕಲುಷಿತಗೊಳಿಸುತ್ತಿದ್ದಾರೆ. ಉತ್ಪಾದನೆಯ ಉದ್ದೇಶವನ್ನೇ ಬುಡಮೇಲುಗೊಳಿಸುತ್ತಿರುವ ಇವರ ನೆರಳಂತಹ ದಲ್ಲಾಳಿಗಳು ಕಾಳುಸಂತೆಕೋರರು ದುಡಿವ ನಾನಾ ಕೈಗಳನ್ನ ಬರಿದುಗೊಳಿಸಿ ಅವರನ್ನ ಆತ್ಮಹತ್ಯೆಯ ಬೀಕರ ಕೂಪಕ್ಕೆ ತಳ್ಳುತ್ತಿದ್ದಾರೆ.ಸಾಲಗಾರರನ್ನಾಗಿಯೇ ಉಳಿಸುತಿದ್ದಾರೆ. ಈಗೀಗ ಬರ ಎಂಬ ಪದದ ಕರಿಯ ಹಸ್ತಗಳು ಹಳ್ಳಿ ಹಳ್ಳಿಗಳನ್ನೂ ಕಾಡಿ ಊರಿಗೆ ಊರನ್ನೇ ಗುಳೆ ಹೊರಡಿಸುತ್ತಿವೆ. ಈ ಕೃತಕ ಹಸಿವನ್ನೇ ಕಂಡ ಅಮಾರ್ತ್ಯ ಸೇನ್ 'ಈ ಕ್ಷಾಮ ಪ್ರಾಕೃತಿಕ ಕಾರಣದಿಂದ ನಿರ್ಮಾಣವಾದುದಲ್ಲ.ಮಾನವ ನಿರ್ಮಿತ ಎನ್ನುತ್ತಾರೆ.ಈ ಕ್ಷಾಮದಲ್ಲಿ ಹಸಿವಿನ ಸಾವುಗಳು ಸಂಭವಿಸುತ್ತಿರುವುದು ಸಾಮಾಜಿಕ,ರಾಜಕೀಯ ವ್ಯವಸ್ಥೆಯ ವೈಫಲ್ಯ ಅಥವಾ ನ್ಯೂನ್ಯತೆಯಿಂದ ಎಂದು ಹೇಳುತ್ತಾರೆ. ಆಳುವ ವರ್ಗದ ತಪ್ಪಾದ ಅಭಿವೃದ್ದಿ ನೀತಿ,ಕೃಷಿ ನೀತಿ,ಆಹಾರ ನೀತಿಗಳು ಮತ್ತು ಕೆಲ ಜನತೆಯ ಲಾಭಕೋರತನದ ಬುದ್ಧಿಯಿಂದಾಗಿ ಇಂತಹ ಕ್ಷಾಮ ನಿರ್ಮಿತವಾಗಿದೆ.'ಎನ್ನುತ್ತಾರೆ.

ಹಿಂದೆ ದಾಸಿಮಯ್ಯ ದೇವರನ್ನ ನೀನೊಮ್ಮೆ ಒಡಲುಗೊಂಡು ನೋಡು ಎಂದು ಸವಾಲು ಹಾಕುವುದು ಮಾನವರ ಹುಸಿತನಕ್ಕೆ ಡಾಂಬಿಕತೆಗೆ ಕಾರಣ ಒಡಲು ಮತ್ತು ಒಡಲ ಹಸಿವೇ ಕಾರಣ ಎನ್ನುವುದಕ್ಕೇ. ಹಸಿವಿನ ನಿವಾರಣೆಯನ್ನ ದೈವೀಕರಣದಿಂದ ನೋಡುವುದು ಉದಾರತನ ಹುಟ್ಟಿಸುವುದರಿಂದ ಅದಕ್ಕೆ ನೀಡುವ ಪ್ರತಿಕ್ರಿಯೆಯೂ ತೆಳುವಾಗಿ ಬಿಡುತ್ತದೆ. ಹಸಿವನ್ನ ಮಾನವೀಕರಣಗೊಳಿಸಿ ಉತ್ಪಾದನೆ ಮತ್ತು ಹಂಚಿಕೆಯ ತಾರತಮ್ಯದಿಂದ ನೋಡಿದಾಗ ಅದರ ಪ್ರಾಯೋಗಿಕ ರೂಪದ ಕರಾಳ ದರ್ಶನ ಎದುರಾಗುತ್ತದೆ. ಹಸಿವಿಗೆ ಬಲಿಯಾದವರು ಯಾರು ಎನ್ನುವ ಪ್ರಶ್ನೆ ಕೂಡಾ ಇಲ್ಲಿ ಮುಖ್ಯವೇ ಅಮಾರ್ತ್ಯ ಸೇನ್ "ಕ್ಷಾಮವು ಮಿಲಿಯಗಟ್ಟಲೆ ಜನರನ್ನ ಕೊಲ್ಲುತ್ತದೆ. ಆದರೆ ಅದು, ಮಂತ್ರಿಗಳನ್ನ,ನೌಕರಶಾಹಿಯನ್ನ,ಅರ್ಥಶಾಸ್ತ್ರಜ್ಞರನ್ನ ಅಂತೆಯೇ ಪತ್ರಕರ್ತರನ್ನು ಕೊಲ್ಲುವುದಿಲ್ಲ."ಹಸಿವಿಗೆ ಬಲಿಯಾಗುವವರು ರೈತರು,ಕೃಷಿ ಕೂಲಿಕಾರರು,ವಲಸೆ ಕಾರ್ಮಿಕರು ಬುಡಕಟ್ಟಿನವರು,ದಲಿತರು ಮಹಿಳೆಯರು ಮಕ್ಕಳು. ಕನ್ನಡದ ದಲಿತ ಬಂಡಾಯ ಬರಹಗಳು ಇಂತಹ ಮೂಲಭೂತ ಪ್ರಶ್ನೆಗಳನ್ನೆತ್ತಿವೆ.ಇವು ಆಹಾರವು ಸರ್ವರ ಹಕ್ಕಾಗಾಬೇಕು ಎನ್ನುತ್ತವೆ.ಹಸಿವ ಮೂಲದ ಭೂಮಿ ಪ್ರಶ್ನೆ ಪ್ರಧಾನವಾಗಬೇಕು ಎನ್ನುತ್ತಾರೆ.

ದೇಹದ ಹಸಿವ ನೋವನ್ನ ದಾಟಿ ಭೀರಕ ಕ್ರೌರ್ಯದ ಸ್ವರೂಪ ಕಾಣುವುದು ಮಾನಸಿಕ ಹಸಿವಿನಲ್ಲಿ.ಹಾಳು ಹಳದಿ ಬಣ್ಣದ ಇದು ವಿಕೃತರೂಪಿ.ಇಲ್ಲಿ ದುಷ್ಟರ ವಿಕೃತ ಆನಂದಕ್ಕೆ ಧರ್ಮದ ಹೆಸರಿನಲ್ಲಿ ಹೆಣ್ಣುಗಳು ದಾಸಿಯ ರೂಪ ಹೊತ್ತರೆ ಸೌಂದರ್ಯವೇ ಸರಕಾಗುವ ಆರ್ಥಲೋಕದಲ್ಲಿ ಚಲುವೆ ಮಾರಾಟದ ಸರಕಾಗುವ ಹಣದ ಕೇಂದ್ರಗಳಲ್ಲೇ ಅಡವಿಡುವ ವಸ್ತುಗಳಾಗುತ್ತ ತಣ್ಣನೆಯ ಕಣ್ಣೀರಾಗುತ್ತಾಳೆ.ಅವಳ ಆವರಣದ ಗಂಡು ನಿರ್ವೀರ್ಯನಾಗುತ್ತಾನೆ.ಕೆಲವು ವೇಳೆಯಂತೂ ಇಲ್ಲಿನ ದೇಹದ ರೂಪಕ್ಕೆ ತಾಯಿ ಮಗುವೆಂಬ ಬೇಧವಿಲ್ಲ,ಹರೆಯ ಮುದಿತನವೆಂಬ ತಾರತಮ್ಯವಿಲ್ಲ. ಹಣ,ನಶೆ,ಅಧಿಕಾರಗಳ ಕೈ ಬಾಯಲ್ಲಿ ಹೆಣ್ಣು ಮಾಂಸದ ಸವಿರುಚಿಯಂತಾಗುತ್ತಿದ್ದಾಳೆ. ಕೆನ್ನೆಯ ಮೇಲೆ ವಿಕೃತರ ಚುಂಬನ ಹೊತ್ತು ಬರುವ ಅಸಹಾಯಕ ರೂಪವಾಗುತ್ತಾಳೆ.ಎಲ್ಲೆಂದರಲ್ಲಿ ಕತ್ತಲು ಬೆಳಕಿನ ಫರಕಿಲ್ಲದೆ ನಡೆವ ಕಾಡು ಮೃಗಗಳ ಬೇಟೆಯಾಗುತ್ತಾಳೆ.ಅಪ್ಪನೇ ಮಗಳ ಬಯಸುವ,ಮಗಳೇ ತಾಯಿಯ ಕೊಲೆಗೆ ಸಂಚು ಹೂಡುವ,ಸೊಸೆಯನ್ನೇ ಪ್ರೇಯಸಿಯಾಗಿ ಕಾಣುವ,ಗಂಡನ ಮೀರಿ ಮತ್ತೊಬ್ಬನನ್ನ ಬಯಸುವ ,ಹೆಂಡತಿಯೇ ಗಂಡನ ಕೊಲೆಗೆ ಸಂಚು ರೂಪಿಸುವ,ಅಜ್ಜನೇ ಮೊಮ್ಮಗಳಂತವಳನ್ನ ಹಾಳು ಮಾಡುವ ವಿಕೃತರೂಪೀ ನಗರದ ಮೂಲೆಗಳಿವು.ನಗರ ಅಭಿವೃದ್ಧಿಯ ಪಲುಕಲ್ಲವೇ..! ಇದಕ್ಕೆ ನಾಚಿ ತಲೆ ತಗ್ಗಿಸಬೇಕಾದ ಸ್ಥಿತಿ ನಮ್ಮದು... ನಿಮ್ಮದು..

## ಎಲ್ಲಿ ಗೆರೆ?



ನಾನು, ನೀನು, ಈ ಉಸಿರು, ನೆತ್ತರು
ಮಾತು, ಲಲ್ಲೆ, ಕನಸು, ಕಾಮನೆ
ಎಲ್ಲಿ ಗೆರೆ?

ಸಣ್ಣ ಖುಷಿ, ಕಣ್ಣಂಚಿನ ಹನಿ
ದ್ವೇಷದ ದಣಿವು, ಈರ್ಷೆಯಾಚೆಯ ಹಿತ
ಕಣ್ಣಲ್ಲಿ ಕರಗಿಸುತ್ತಲೇ ಇರಿವ ಸಂಚು
ಅಪರಿಚಿತ ನೋಟದಲ್ಲೂ ಮಿನುಗುವ ಕಾಳಜಿ
ಯಾವುದು ಇತ್ತು ಯಾವುದು ಹೊಸತು
ಎಲ್ಲಿ ಗೆರೆ?

ಬೆಳಗಿನ ಚಳಿ ಕಾಫಿಗೆ,
ಸುಡು ಹೊತ್ತಿನ ತಣ್ಣೀರಿಗೆ
ಸ್ನಾನಕ್ಕೆ, ಅಲಂಕಾರಕ್ಕೆ, ಘಮ ಘಮ ಅತ್ತರಿಗೆ
ದೇವರ ಮುಂದೆ ಕ್ಯೂನಲ್ಲಿ ಕುದಿವ ಭಕ್ತರಿಗೆ
ಸೋತ ಹೊತ್ತಲ್ಲಿ ತಂದ ಕೈಸಾಲಕ್ಕೆ
ಮಾಟ ಮೈಮಾಟಕ್ಕೆ, ಕುಣಿಸುವ ಕುಲುಕಾಟಕ್ಕೆ
ಎಲ್ಲಿ ಗೆರೆ?

ಜೋಗದ ಧುಮುಕಿಗೆ, ನೊಗಭಾರದ ನಲುಗಿಗೆ
ರಾಗ ಅನುರಾಗಕ್ಕೆ, ಸದ್ದು ಗದ್ದಲಕ್ಕೆ
ಮಿದು ರಹಸ್ಯಗಳಿಗೆ, ಬರೀ ಅಸಹ್ಯಗಳಿಗೆ
ಪದಕ್ಕೆ ಮದಕ್ಕೆ, ನಿಶೆಗೆ ನಶೆಗೆ
ಚಳಿ ತಡೆದು ಬೆಚ್ಚಗಿಡಬಲ್ಲ ಹೊದಿಕೆಗೆ
ಬಿಡಿಸಿದರೆ ಬೆರಗು ಹಚ್ಚಬಲ್ಲ ಮಡಿಕೆಗೆ
ಕಮ್ಮಗಿನ ಮೀನು ಸಾರಿನ ನೆನಪು ಕಾದ
ಮಡಕೆಗೆ
ಎಲ್ಲಿ ಗೆರೆ?

ಅವರು ಇವರು, ಉತ್ತರ ದಕ್ಷಿಣ
ಮಳೆ ಮಾರುತ, ಮೇಘ ಸಂದೇಶ
ಖಾಲಿ ಬೆಂಕಿಪೆಟ್ಟಿಗೆಯೊಳಗಿಟ್ಟ
ಬಂಗಾರ ಬಣ್ಣದ ದುಂಬಿ
ನಮ್ಮೆಲ್ಲರನ್ನೂ ಕಾಯುವ
ಯಾರದೋ ನಿಟ್ಟುಸಿರು
ಎಂಥದೋ ನೇವರಿಕೆಯಲ್ಲಿ ಮೀಯಿಸುವ
ಮುಗುಳ್ನಗು
ಎಲ್ಲಿ ಗೆರೆ?

ಗಡಿ ಗುರುತಿಲ್ಲದೆ ಹಾರುವ ಹಕ್ಕಿಗೆ
ಆ ಗರಿ ಮೃದುವಿಗೆ, ಈ ಮರಿ ಗುಟುಕಿಗೆ
ನೋವಿಗೆ ಕಾವಿಗೆ, ಶೀಲದ ಪಾಲಿಗೆ
ಎಲ್ಲಿ ಗೆರೆ?



•ವೆಂಕಟ್ರಮಣ ಗೌಡ

# ವಿವಾಹ ವಯಸ್ಸನ್ನು 21ಕ್ಕೆ ಹೆಚ್ಚಿಸಿದ ಹಿಂದಿನ ತಾರ್ಕಿಕತೆ

● ಮಾನಸ ಬೆಂಗಳೂರು

ಐತಿಹಾಸಿಕ ನಿರ್ಧಾರವೊಂದರಲ್ಲಿ, ಮಹಿಳೆಯರ ವಿವಾಹದ ಕಾನೂನುಬದ್ಧ ವಯಸ್ಸನ್ನು 18 ರಿಂದ 21 ವರ್ಷಕ್ಕೆ ಹೆಚ್ಚಿಸುವ ಮೂಲಕ ಅವರನ್ನು ಪುರುಷರಿಗೆ ಸರಿಸಮಾನವಾಗಿ ತರುವ ಪ್ರಸ್ತಾವನೆಯನ್ನು ಕೇಂದ್ರ ಸಚಿವ ಸಂಪುಟ ಬುಧವಾರ ಅಂಗೀಕರಿಸಿದೆ. ನೀತಿ ಆಯೋಗದ ಡಾ ವಿಕೆ ಪಾಲ್ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ಆರೋಗ್ಯ ಮತ್ತು ಶಿಕ್ಷಣ ಸಚಿವಾಲಯಗಳ ಕಾರ್ಯದರ್ಶಿಗಳೊಂದಿಗೆ ಜಯಾ ಜೇಟ್ಲಿ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಸರ್ಕಾರವು ರಚಿಸಿದ್ದ ಕಾರ್ಯಪಡೆಯು ಮತ್ತು ಶಾಸಕಾಂಗ ಇಲಾಖೆ ಕಳೆದ ವರ್ಷ ನೀತಿ ಆಯೋಗಕ್ಕೆ ಸಲ್ಲಿಸಿದ ಶಿಫಾರಸುಗಳನ್ನು ಆಧರಿಸಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಇದು ಮಹಿಳೆಯರಲ್ಲಿ ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸುವ ವಿಧಾನಗಳನ್ನು ಪರೀಕ್ಷಿಸಲು, ಶಿಶು ಮರಣ ಪ್ರಮಾಣ, ತಾಯಿಯ ಮರಣ ಪ್ರಮಾಣ, ತಾಯಿಯ ಮಾನಸಿಕ ಆರೋಗ್ಯ, ತಾಯಿ ಮತ್ತು ಮಗುವಿನ ಪೌಷ್ಟಿಕಾಂಶದ ಸ್ಥಿತಿ, ಲಿಂಗ ಅನುಪಾತದ ಮೇಲೆ ವೈವಾಹಿಕ ವಯಸ್ಸಿನ ಪ್ರಭಾವವನ್ನು ಅನ್ವೇಷಿಸಲು ಜನನ ಮತ್ತು ಮಗುವಿನ ಲಿಂಗ ಅನುಪಾತ ಇತ್ಯಾದಿಯನ್ನು ಉತ್ತೇಜಿಸುವ ಮಾರ್ಗಗಳನ್ನು ಪರೀಕ್ಷಿಸಲು ಒಂದು ಮಾಗ9ವಾಗಿದೆ. ಈ ನಿರ್ಧಾರವು ಜಾತಿ, ಧರ್ಮ ಮತ್ತು ಧರ್ಮವನ್ನು ಲೆಕ್ಕಿಸದೆ ಸಮಾಜದ ಎಲ್ಲಾ ಭಾಗಗಳಿಂದ ವ್ಯಾಪಕ ಮೆಚ್ಚುಗೆಯನ್ನು ಪಡೆದಿದೆ. ಆದಾಗ್ಯೂ, ಸಮಾಜದ ಒಂದು ವರ್ಗವು ಉತ್ತರಿಸಬೇಕಾದ ಕೆಲವು ನಿಯತಾಂಕಗಳಲ್ಲಿ ನಿರ್ಧಾರವನ್ನು ಪ್ರಶ್ನಿಸಿದೆ.

ಜನಸಂಖ್ಯೆ ನಿಯಂತ್ರಣಕ್ಕೆ ಅಸ್ತ್ರವಾಗಿ ಬಳಕೆಯಾಗಲಿರುವ ಹೊಸ ಪ್ರಸ್ತಾವನೆ ಬಗ್ಗೆ ಕೆಲ ಆರೋಪಗಳು ಕೇಳಿ ಬರುತ್ತಿವೆ. ಒಟ್ಟು ಫಲವತ್ತತೆ ದರ (ಟಿಎಫ್‌ಆರ್) ಕಡಿಮೆಯಾಗುತ್ತಿದೆ ಮತ್ತು ಜನಸಂಖ್ಯೆಯು ನಿಯಂತ್ರಣದಲ್ಲಿದೆ ಎಂದು ಸ್ಪಷ್ಟವಾಗಿ ತೋರಿಸಿರುವ ರಾಷ್ಟ್ರೀಯ ಕುಟುಂಬ ಆರೋಗ್ಯ



ಸಮೀಕ್ಷೆಯ ಇತ್ತೀಚಿನ ಡೇಟಾವನ್ನು ಉಲ್ಲೇಖಿಸುವ ಮೂಲಕ ಆರೋಪಗಳನ್ನು ಸುಲಭವಾಗಿ ಎದುರಿಸಬಹುದು. ಭಾರತವು ಮೊದಲ ಬಾರಿಗೆ 2.0 ರ ಒಟ್ಟು ಫಲವತ್ತತೆ ದರವನ್ನು ಸಾಧಿಸಿದೆ, ಖಿಈಖ ನ ಬದಲಿ ಮಟ್ಟಕ್ಕಿಂತ 2.1 ಕ್ಕಿಂತ ಕಡಿಮೆ ಜನಸಂಖ್ಯೆಯ ಸ್ಪಷ್ಟ ಕುಸಿತವನ್ನು ತೋರಿಸುತ್ತದೆ. ಸಮೀಕ್ಷೆಯ ವ್ಯಾಪ್ತಿಯ ಬಗ್ಗೆ ಕೆಲವರು ಪ್ರಶ್ನೆಗಳನ್ನು ಎತ್ತಿದ್ದಾರೆ. ಕಾರ್ಯಪಡೆಯ ವರದಿಯನ್ನು ಸಲ್ಲಿಸುವಾಗ ಜಯಾ ಜೇಟ್ಲಿ ಅವರು "ಸಮೀಕ್ಷೆಯು 16 ವಿಶ್ವವಿದ್ಯಾನಿಲಯಗಳು ಮತ್ತು 15 ಕ್ಕೂ ಹೆಚ್ಚು ಎನ್‌ಜಿಒಸ್‌ಗಳ ಪ್ರತಿಕ್ರಿಯೆಯನ್ನು ಆಧರಿಸಿದೆ, ಇದು ವಿಶೇಷವಾಗಿ ಗ್ರಾಮೀಣ ಮತ್ತು ಯುವಜನರೊಂದಿಗೆ (ವಿಶೇಷವಾಗಿ 21–23 ಮದುವೆಯ ವಯಸ್ಸಿನಲ್ಲಿ) ವ್ಯಾಪಕವಾದ ಸಮಾಲೋಚನೆಗಳನ್ನು ನಡೆಸಿತು. ಹಿಂದುಳಿದ ಸಮುದಾಯಗಳು, ಬಾಲ್ಯ ವಿವಾಹವು ಸಾಕಷ್ಟು ಪ್ರಚಲಿತದಲ್ಲಿರುವ ಜಿಲ್ಲೆಗಳ ಮೇಲೆ ಕೇಂದ್ರೀಕರಿಸಿದೆ. ಧರ್ಮಗಳಾದ್ಯಂತ ಮತ್ತು ನಗರ ಮತ್ತು ಗ್ರಾಮೀಣ ಪ್ರದೇಶಗಳಿಂದ ಸಮಾನವಾಗಿ ಪ್ರತಿಕ್ರಿಯೆಯನ್ನು ತೆಗೆದುಕೊಳ್ಳಲಾಗಿದೆ.

ಪ್ರಸ್ತಾವನೆಯನ್ನು ಕಾನೂನಾಗಿ ಪರಿವರ್ತಿಸಲು, ಬಾಲ್ಯವಿವಾಹ ನಿಷೇಧ ಕಾಯಿದೆ, 2006ಕ್ಕೆ ತಿದ್ದುಪಡಿಯ ಅಗತ್ಯವಿದೆ ಮತ್ತು ಅದರ ಪರಿಣಾಮವಾಗಿ ವಿಶೇಷ ವಿವಾಹ ಕಾಯಿದೆ ಮತ್ತು ಹಿಂದೂ ವಿವಾಹ ಕಾಯಿದೆ, 1955 ಮುಂತಾದ ವೈಯಕ್ತಿಕ ಕಾನೂನುಗಳಿಗೆ ತಿದ್ದುಪಡಿ ಅಗತ್ಯವಿದೆ. ಅದು ಕಾನೂನಾದರೆ, ಸಂಪೂರ್ಣ ಧರ್ಮವನ್ನು ಲೆಕ್ಕಿಸದೆ ಭಾರತದ ಮಹಿಳಾ ಜನಸಂಖ್ಯೆಯು ವಿವಿಧ ಕ್ಷೇತ್ರಗಳಲ್ಲಿ ಪ್ರಯೋಜನ ಪಡೆಯುತ್ತದೆ. ವರ್ಧಿತ ಮದುವೆಯ ವಯಸ್ಸು ಹೆಣ್ಣು ಮಗುವಿಗೆ ಗುಣಮಟ್ಟದ ಶಿಕ್ಷಣವನ್ನು ಪಡೆಯಲು, ಕೌಶಲ್ಯ ಸೆಟ್‌ಗಳನ್ನು ಪಡೆಯಲು ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯಲು ಸಾಕಷ್ಟು ಸಮಯವನ್ನು ಖಾತರಿಪಡಿಸುತ್ತದೆ. ಮತ್ತು ಹೆಣ್ಣುಮಕ್ಕಳು ತಾವು ಆರ್ಥಿಕವಾಗಿ ಸ್ವತಂತ್ರರು ಎಂದು ತೋರಿಸಿದರೆ, ಪೋಷಕರು ಅವರನ್ನು ಬೇಗನೆ ಮದುವೆಯಾಗುವ ಮೊದಲು ಎರಡು ಬಾರಿ ಯೋಚಿಸುತ್ತಾರೆ. ಬಾಲ್ಯ ವಿವಾಹವನ್ನು ಆರಂಭಿಕ ತಾಯ್ತನದ ದೃಷ್ಟಿಕೋನದಿಂದ ನೋಡಬೇಕಾಗಿದೆ, ಇದು ದೈಹಿಕವಾಗಿ, ಮಾನಸಿಕವಾಗಿ ಮತ್ತು ಆರ್ಥಿಕವಾಗಿ ಹುಡುಗಿಗೆ ಸವಾಲಾಗಿದೆ. ತಡವಾಗಿ ಮದುವೆ ಎಂದರೆ ತಡವಾದ ತಾಯ್ತನ ಮತ್ತು ತಡವಾದ ತಾಯ್ತನ ಎಂದರೆ ಹೆಣ್ಣು ತನ್ನ ಭವಿಷ್ಯವನ್ನು ಭದ್ರಪಡಿಸಿಕೊಳ್ಳಲು ಹೆಚ್ಚಿನ



ಸಮಯ. ಗುಣಮಟ್ಟದ ಶಿಕ್ಷಣದೊಂದಿಗೆ ಆರ್ಥಿಕ ಸ್ವಾತಂತ್ರ್ಯವು ಸೇರಿಕೊಂಡು ಮಹಿಳೆಯರನ್ನು ಅವರ ಪುರುಷ ಕೌಂಟರ್ ಪಾರ್ಟ್‌ಗಳಿಗೆ ಹೋಲಿಸಿದರೆ ಸಮಾನವಾಗಿ ಪರಿಗಣಿಸಲಾಗಿದೆ ಎಂದು ಖಚಿತಪಡಿಸುತ್ತದೆ. ಇದು ನಿಜವಾದ ಅರ್ಥದಲ್ಲಿ ಮಹಿಳಾ ಸಬಲೀಕರಣವನ್ನು ಖಚಿತಪಡಿಸುತ್ತದೆ.

ಪ್ರಪಂಚದ ಜನಸಂಖ್ಯೆಯಲ್ಲಿ ಮಹಿಳೆಯರು ಸುಮಾರು 50% ರಷ್ಟಿದ್ದಾರೆ. ಜನರನ್ನು ಸಬಲೀಕರಣಗೊಳಿಸುವ ಹೆಚ್ಚಿನ ಪ್ರಯತ್ನಗಳು ಸಾಮಾನ್ಯವಾಗಿ ಪುರುಷರಿಂದ ಪ್ರತಿನಿಧಿಸುವ ಇತರ ಅರ್ಧವನ್ನು ಗುರಿಯಾಗಿರಿಸಿಕೊಳ್ಳುತ್ತವೆ. ಸ್ಕೀಮ್‌ಗಳು/ಕ್ರಮಗಳು ಒಂದು ನಿರ್ದಿಷ್ಟ ವಿಭಾಗಕ್ಕೆ ಪ್ರಯೋಜನವನ್ನು ಪಡೆಯುವ ಗುರಿಯನ್ನು ಹೊಂದಿಲ್ಲದಿದ್ದರೂ ಸಹ, ವಿವಿಧ ಸಾಮಾಜಿಕ ನಿಯಮಗಳು, ಹಳೆಯ ಸಂಪ್ರದಾಯಗಳು, ಪಿತೃಪ್ರಭುತ್ವ ಮತ್ತು ಸರ್ಕಾರದ ನಿರಾಸಕ್ತಿಯಿಂದಾಗಿ ಪುರುಷ ಕೌಂಟರ್ ಭಾಗಗಳು ಸಾಮಾನ್ಯವಾಗಿ ಯಾವುದೇ ಯೋಜನೆ/ಕಾರ್ಯಕ್ರಮದ ಕೆನೆಯಿಂದ ದೂರವಿರುತ್ತವೆ. ಕನಿಷ್ಠ ವಿವಾಹ ವಯಸ್ಸನ್ನು ಹೆಚ್ಚಿಸುವ ಸರ್ಕಾರದ ಈ ನಿರ್ಧಾರವು ಮಹಿಳಾ ಸಬಲೀಕರಣದ ಹಾದಿಯಲ್ಲಿ ಮೈಲಿಗಲ್ಲು ಆಗಿರಬಹುದು. ಆದಾಗ್ಯೂ, ದೂರದ ಪ್ರದೇಶಗಳಲ್ಲಿನ ಶಿಕ್ಷಣ ಸಂಸ್ಥೆಗಳಿಗೆ ಸಾರಿಗೆ ಸೇರಿದಂತೆ ಹುಡುಗಿಯರಿಗೆ ಶಾಲೆಗಳು ಮತ್ತು ವಿಶ್ವವಿದ್ಯಾನಿಲಯಗಳಿಗೆ ಪ್ರವೇಶವನ್ನು ಖಾತ್ರಿಪಡಿಸುವುದರ ಜೊತೆಗೆ ನಿರ್ಧಾರದ ಸಾಮಾಜಿಕ ಸ್ವೀಕಾರವನ್ನು ಉತ್ತೇಜಿಸಲು ಸಮಗ್ರ ಸಾರ್ವಜನಿಕ ಜಾಗೃತಿ ಅಭಿಯಾನವನ್ನು ರೂಪಿಸಬೇಕು. ರಾಜಕೀಯ ಪ್ರೇರಿತ ಜನರು ಈ ವಿಷಯವನ್ನು ಅಪ್ರಬುದ್ಧ ಜನರ ಭಾವನೆಗಳನ್ನು ಕೆರಳಿಸಲು ಬಳಸುತ್ತಾರೆ. ನಮ್ಮ ಸಹೋದರಿಯರು, ತಾಯಂದಿರು ಮತ್ತು ಹೆಣ್ಣುಮಕ್ಕಳ ಅಭ್ಯುದಯಕ್ಕಾಗಿ ಅನುಮಾನಗಳನ್ನು ಹೋಗಲಾಡಿಸುವುದು ಇಂದಿನ ಅಗತ್ಯವಾಗಿದೆ. ಎಲ್ಲಾ ನಂತರ, ವಿದ್ಯಾವಂತ ಮತ್ತು ಸಶಕ್ತ ಮಹಿಳೆ ಇಡೀ ಪೀಳಿಗೆಯ ಭವಿಷ್ಯವನ್ನು ಬದಲಾಯಿಸಬಹುದು.

# ನಿವೃತ್ತಿ ಹೊಂದಿದ ಹರ್ಭಜನ್ ಸಿಂಗ್ ಹೇಳಿದ ಹಳೆ ಸತ್ಯ

● ಮಲ್ಲಿಕಾರ್ಜುನ ಹಿರೇಮಠ್

ಇತ್ತೀಚೆಗಷ್ಟೇ ಅಂತರಾಷ್ಟ್ರೀಯ ಕ್ರಿಕೆಟ್‌ಗೆ ಗುಡ್‌ಬೈ ಹೇಳಿದ ಹರ್ಭಜನ್ ಸಿಂಗ್ ಸ್ಫೋಟಕ ಸತ್ಯವೊಂದನ್ನ ಬಾಯ್ಬಿಟ್ಟಿದ್ದಾರೆ. ನಿವೃತ್ತಿ ಬಳಿಕ ತಮ್ಮ ಹಳೆಯ ವೃತ್ತಿ ಜೀವನವನ್ನ ಮೆಲುಕು ಹಾಕಿರುವ ಹರ್ಭಜನ್ ಸಿಂಗ್, ಟೀಂ ಇಂಡಿಯಾ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ಕುರಿತಾಗಿ ಆಶ್ಚರ್ಯಕರ ಮಾತೊಂದನ್ನು ತಿಳಿಸಿದ್ದಾರೆ. ಟೆಸ್ಟ್ ಕ್ರಿಕೆಟ್‌ನಲ್ಲಿ 417 ವಿಕೆಟ್‌ಗಳನ್ನು ಪಡೆದಿರುವ ಹರ್ಭಜನ್, 103 ಟೆಸ್ಟ್‌ಗಳು, 236 ಏಕದಿನ ಪಂದ್ಯಗಳು ಮತ್ತು 28 ಟಿ20 ಅಂತರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದಾರೆ. 2007 ಟಿ20 ವಿಶ್ವ ಮತ್ತು 2011 ವಿಶ್ವಕಪ್ ವಿಜೇತ ತಂಡದ ಭಾಗವಾಗಿದ್ದರು. ಕೊಹ್ಲಿ, ಪೂಜಾರ, ರಹಾನೆಗೆ ಬಿಗ್ ಸ್ಕೋರ್ ಏಕೆ ಸಾಧ್ಯವಾಗುತ್ತಿಲ್ಲ? ಈ ಸಮಸ್ಯೆಯನ್ನ ಪತ್ತೆಹಚ್ಚಿದ ರಾಹುಲ್ ದ್ರಾವಿಡ್! ಆದ್ರೆ ಅಂತರಾಷ್ಟ್ರೀಯ ಕ್ರಿಕೆಟ್‌ನಿಂದ ಹೊರಗುಳಿದು ಐದು ವರ್ಷಗಳೇ ಕಳೆದು ಹೋದ ಬಳಿಕ, ಕೇವಲ ಐಪಿಎಲ್‌ನಲ್ಲಿ ಆಡ್ತಿದ್ದ ಹರ್ಭಜನ್ ಸಿಂಗ್ ಹೊಸ ವರ್ಷದ ಸಮೀಪದಲ್ಲಿ ನಿವೃತ್ತಿ ಘೋಷಿಸಿದ್ರು. ಆದಾಗ್ಯೂ, ಹರ್ಭಜನ್ ಅವರು ಮಾಜಿ ಭಾರತ ನಾಯಕ ಎಂಎಸ್ ಧೋನಿ ಅವರಂತೆ ಮ್ಯಾನೇಜ್‌ಮೆಂಟ್‌ನಿಂದ ಬೆಂಬಲವನ್ನು ಪಡೆದಿದ್ರೆ, ಇನ್ನೂ ಕೆಲವು ವರ್ಷಗಳ ಕಾಲ ಆಡಬಹುದಿತ್ತು ಎಂದು ಭಾವಿಸುತ್ತಾರೆ. "ಧೋನಿ ಇತರ ಆಟಗಾರರಿಗಿಂತ ಉತ್ತಮ ಬೆಂಬಲವನ್ನು ಹೊಂದಿದ್ದರು ಮತ್ತು ಉಳಿದ ಆಟಗಾರರು ಅದೇ ರೀತಿಯ ಬೆಂಬಲವನ್ನು ಪಡೆದಿದ್ದರೆ, ಅವರು ಕೂಡ ಆಡುತ್ತಿದ್ದರು. ಉಳಿದ ಆಟಗಾರರು ಬ್ಯಾಟ್ ಬೀಸುವುದನ್ನು ಮರೆತಿದ್ದಾರ ಅಥವಾ ಬೌಲರ್‌ಗಳು ಸ್ಪಿಂಗ್ ಮಾಡುವುದನ್ನ ಬಿಟ್ಟಿದ್ದರಾ ತಿಳಿದಿಲ್ಲ ಎಂದು ಖಾಸಗಿ ಟಿವಿಯೊಂದಕ್ಕೆ ನೀಡಿರುವ ಸಂದರ್ಶನಲದ್ಲಿ ತಿಳಿಸಿದ್ದಾರೆ.

41ರ ಹರೆಯದ ಹರ್ಭಜನ್ ಮ್ಯಾನೇಜ್‌ಮೆಂಟ್ ಬೆಂಬಲವಿದ್ರೆ, ಇನ್ನೂ ನಾಲ್ಕರಿಂದ ಐದು ವರ್ಷಗಳ ಕಾಲ ಆಡುತ್ತಿದ್ದೆ ಮತ್ತು ಇನ್ನೂ 100 ರಿಂದ 150 ವಿಕೆಟ್‌ಗಳನ್ನು ತೆಗೆದುಕೊಳ್ಳಬಹುದಿತ್ತು ಎಂದು ಹೇಳಿದ್ದಾರೆ. "ನಾನು 400 ವಿಕೆಟ್‌ಗಳನ್ನು ಪಡೆದಾಗ ನನಗೆ 31 ವರ್ಷ ಮತ್ತು ನಾನು ಇನ್ನೂ 4–5 ವರ್ಷಗಳ ಕಾಲ ಆಡುತ್ತಿದ್ದರೆ, ನನಗಾಗಿ ನಾನು ನಿಗದಿಪಡಿಸಿದ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು, ನಾನು ಇನ್ನೂ 100–150 ಅಥವಾ ಅದಕ್ಕಿಂತ ಹೆಚ್ಚಿನ ವಿಕೆಟ್‌ಗಳನ್ನು ತೆಗೆದುಕೊಳ್ಳುತ್ತಿದ್ದೆ " ಹರ್ಭಜನ್ ಸಿಂಗ್ ಹೇಳಿದ್ದಾರೆ. ಅದೇನೇ ಇದ್ದರೂ, ಹರ್ಭಜನ್ ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತದ ನಾಲ್ಕನೇ ಅತಿ ಹೆಚ್ಚು ವಿಕೆಟ್ ಟೇಕರ್ ಆಗಿ ಕ್ರಿಕೆಟ್‌ಗೆ ವಿದಾಯ ಹೇಳಿದರು. ಭಾರತ ಪರ ಅನಿಲ್ ಕುಂಬ್ಳೆ, ಕಪಿಲ್ ದೇವ್ ಮತ್ತು ರವಿಚಂದ್ರನ್ ಅಶ್ವಿನ್ ಮಾತ್ರ ಅವರಿಗಿಂತ ಹೆಚ್ಚು ಟೆಸ್ಟ್ ವಿಕೆಟ್ ಪಡೆದಿದ್ದಾರೆ.

## ಕ್ರಿಕೆಟ್ ಅರಂಭದ ದಿನಗಳು

ಹರ್ಭಜನ್ ಸಿಂಗ್ ಕೇವಲ 17ನೇ ವಯಸ್ಸಿನಲ್ಲಿ ಕ್ರಿಕೆಟ್ ಆರಂಭಿಸಿದ್ದು, ಇಂದು 41ನೇ ವರ್ಷಕ್ಕೆ





ಕಾಲಿಟ್ಟಿದ್ದಾರೆ. ಹರ್ಭಜನ್ ಸಿಂಗ್ ಅವರು 1998 ರಲ್ಲಿ ಚೆನ್ನೈನಲ್ಲಿ ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್ ಪಂದ್ಯದೊಂದಿಗೆ ತಮ್ಮ ಅಂತರಾಷ್ಟ್ರೀಯ ಚೊಚ್ಚಲ ಪಂದ್ಯವನ್ನು ಆಡಿದರು. ಇದರ ನಂತರ ಅವರು ಅದೇ ವರ್ಷದಲ್ಲಿ ನ್ಯೂಜಿಲೆಂಡ್ ವಿರುದ್ಧ ತಮ್ಮ ಔಆಖ ಚೊಚ್ಚಲ ಪಂದ್ಯವನ್ನು ಆಡಿದರು. ನಂತರ ಅವರು 2006 ರಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಖ20 ಗೆ ಪಾದಾರ್ಪಣೆ ಮಾಡಿದರು.

ಅಂದಿನಿಂದ, 2015 ರ ವರೆಗೆ, ಅವರು 103 ಟೆಸ್ಟ್ ಪಂದ್ಯಗಳಲ್ಲಿ 417 ವಿಕೆಟ್ಗಳನ್ನು ಪಡೆದರು ಮತ್ತು ಎರಡು ಶತಕಗಳೊಂದಿಗೆ 2235 ರನ್ಗಳನ್ನು ಗಳಿಸಿದರು. ಅದೇ ಸಮಯದಲ್ಲಿ, 236 ಪಂದ್ಯಗಳಲ್ಲಿ, ಅವರು 269 ವಿಕೆಟ್ಗಳನ್ನು ಮತ್ತು 1237 ರನ್ಗಳನ್ನು ಗಳಿಸಿದರು. ಟಿ20 ಬಗ್ಗೆ ಮಾತನಾಡುವುದಾದರೆ, ಇಲ್ಲಿ ಅವರು 28 ಪಂದ್ಯಗಳಲ್ಲಿ 25 ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಅನಿಲ್ ಕುಂಬ್ಳೆ ಮತ್ತು ಆರ್ ಅಶ್ವಿನ್ ನಂತರ ಹರ್ಭಜನ್ ಸಿಂಗ್ ಭಾರತದ ಪರ ಅತಿ ಹೆಚ್ಚು ಟೆಸ್ಟ್ ವಿಕೆಟ್ ಪಡೆದ ಮೂರನೇ ಬೌಲರ್ ಆಗಿದ್ದಾರೆ. ಹರ್ಭಜನ್ ಸಿಂಗ್ ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್, ಮುಂಬೈ ಇಂಡಿಯನ್ಸ್ ಮತ್ತು ಕೋಲ್ಕತ್ತಾ ನೈಟ್ ರೈಡರ್ಸ್ ಪರ ಆಡಿದ್ದಾರೆ. ಇದರಲ್ಲಿ ಅವರು ಒಟ್ಟು 150 ವಿಕೆಟ್‌ಗಳನ್ನು ಪಡೆದಿದ್ದಾರೆ.

## ನಿವೃತ್ತಿ ಬಗ್ಗೆ ಹೀಗೆ ಬರೆದುಕೊಂಡಿದ್ದರು

ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ವಿಶೇಷ ವಿಡಿಯೋ ಹಂಚಿಕೊಂಡಿರುವ ಹರ್ಭಜನ್, ನಾನು ಇಂದು ಎಲ್ಲಾ ಮಾದರಿಯ ಕ್ರಿಕೆಟ್‌ನಿಂದ ನಿವೃತ್ತಿಯಾಗುತ್ತಿದ್ದೇನೆ. ನಾನು ನನ್ನ ನಿವೃತ್ತಿಯನ್ನು ಬಹಳ ಹಿಂದೆಯೇ ತೆಗೆದುಕೊಂಡಿದ್ದೆ, ಆದರೆ ಈಗ ಅದನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ನಾನು ದೀರ್ಘಕಾಲ ಸಕ್ರಿಯ ಕ್ರಿಕೆಟ್ ಆಡಲಿಲ್ಲ. ನಾನು ಇದನ್ನು ಬಹಳ ಹಿಂದೆಯೇ ಮಾಡಲು ಬಯಸಿದ್ದೆ ಆದರೆ ಕೋಲ್ಕತ್ತಾ ನೈಟ್ ರೈಡರ್ಸ್‌ನೊಂದಿಗಿನ ನನ್ನ ಬದ್ಧತೆಯ ಕಾರಣ, ನಾನು ಈ ವರ್ಷ ಅವರೊಂದಿಗೆ ಉಳಿಯಲು ಬಯಸುತ್ತೇನೆ. ಎಲ್ಲರಂತೆ, ನಾನು ಕೂಡ ಭಾರತ ಜರ್ಸಿಯಲ್ಲಿ ತಂಡಕ್ಕೆ ವಿದಾಯ ಹೇಳಲು ಬಯಸಿದ್ದೆ ಆದರೆ ಅದೃಷ್ಟವು ಬಹುಶಃ ಬೇರೆ ಯಾವುದನ್ನಾದರೂ ಮನಸ್ಸಿನಲ್ಲಿಟ್ಟುಕೊಂಡಿತ್ತೇನೊ. ನಾನು ಯಾವುದೇ ತಂಡದಲ್ಲಿ ಆಡಿದ್ದರೂ, ನಾನು ಯಾವಾಗಲೂ ಅಗ್ರಸ್ಥಾನದಲ್ಲಿರಲು ಪ್ರಯತ್ನಿಸುತ್ತೇನೆ.

ತನ್ನ ಯಶಸ್ಸಿಗೆ ಹರ್ಭಜನ್ ಸಿಂಗ್ ತನ್ನ ಗುರುಗಳಿಗೆ ಧನ್ಯವಾದ ಅರ್ಪಿಸಿದರು. ತಂದೆ–ತಾಯಿಯನ್ನು ಬಿಟ್ಟರೆ ತಂಗಿಯರೆ ನನ್ನ ದೊಡ್ಡ ಶಕ್ತಿ ಎಂದು ಹರ್ಭಜನ್ ಹೇಳಿದ್ದಾರೆ. ಜೊತೆಗೆ ತಮ್ಮ ಇಬ್ಬರು ಮಕ್ಕಳೊಂದಿಗೆ ಹೆಚ್ಚು ಹೆಚ್ಚು ಸಮಯ ಕಳೆಯುವುದಾಗಿ ಅವರು ತಮ್ಮ ಪತ್ನಿ ಗೀತಾ ಬಸ್ರಾಗೆ ಭರವಸೆ ನೀಡಿದರು. ಭಾರತದ ಈ ಅನುಭವಿ ತಾರೆ ತಮ್ಮ ವೃತ್ತಿಜೀವನದ ಎಲ್ಲಾ ಸಹ ಆಟಗಾರರು ಮತ್ತು ಎದುರಾಳಿ ಆಟಗಾರರಿಗೆ ಧನ್ಯವಾದ ಅರ್ಪಿಸಿದರು, ಜೊತೆಗೆ ಅಂಪೈರ್ ಗ್ರೌಂಡ್ಸ್ ಮ್ಯಾನ್‌ಗೆ ಧನ್ಯವಾದ ಹೇಳಿದ್ದಾರೆ.

# ಆರ್.ಎನ್.ಸುದರ್ಶನ್ ಚಿತ್ರರಂಗ ಪ್ರವೇಶಿಸಿದ 'ವಿಜಯನಗರದ ವೀರಪುತ್ರ'

ತೆರೆಮರೆ

ಕನ್ನಡ ಚಿತ್ರ ಇತಿಹಾಸ

ಭಾಗ-60



ಅ.ನಾ.ಪ್ರಹ್ಲಾದರಾವ್
ವಾರ್ತಾ ಇಲಾಖೆ, ನಿವೃತ್ತ ಅಧಿಕಾರಿ

ಆರ್.ನಾಗೇಂದ್ರರಾಯರು ತಮ್ಮ ಸ್ವಂತ ನಿರ್ಮಾಣ ಸಂಸ್ಥೆ 'ಆರ್.ಎನ್.ಆರ್.ಪಿಕ್ಚರ್ಸ್' ಲಾಂಛನದಲ್ಲಿ ತೆರೆಗೆ ತಂದ ಕಪ್ಪು ಬಿಳುಪು ಚಿತ್ರ 'ವಿಜಯನಗರದ ವೀರಪುತ್ರ' 1961ರಲ್ಲಿ ತೆರೆಕಂಡಿತು.




ನಾಗೇಂದ್ರರಾಯರ ಪುತ್ರ ಆರ್.ಎನ್.ಸುದರ್ಶನ್ ಚಿತ್ರರಂಗಕ್ಕೆ ಪದರ್ಪಿಸಿದ ಚಿತ್ರವೆಂಬ ಹೆಗ್ಗಳಿಕೆಗೆ ಚಿತ್ರ ಪಾತ್ರವಾಗಿದೆ. ಸ್ವತಃ ಆರ್.ನಾಗೇಂದ್ರರಾಯರೇ ನಿರ್ದೇಶಿಸಿದ ಈ ಚಿತ್ರಕ್ಕೆ ಅವರ ಮತ್ತೊಬ್ಬ ಪುತ್ರ ಆರ್.ಎನ್.ಕೃಷ್ಣಪ್ರಸಾದರು ವಿ.ಮನೋಹರ್‌ಅವರೊಂದಿಗೆ ಸೇರಿ ಛಾಯಾಗ್ರಹಣ ನೀಡಿದ್ದಾರೆ. ಎನ್.ಲಕ್ಷ್ಮಿನಾರಾಯಣ್ ಹಾಗೂ ವಿ.ಸೋಮಶೇಖರ್ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. ವಿಜಯನಗರ ಸಾಮ್ರಾಜ್ಯದ ಸಾಮಂತ ರಾಜಗುರುವರಾಯನ ಪಾತ್ರದಲ್ಲಿ ಆರ್.ನಾಗೇಂದ್ರರಾವ್, ಆತನ ಪುತ್ರ ವಿಕ್ರಮನ ಪಾತ್ರದಲ್ಲಿ ಆರ್.ಎನ್.ಸುದರ್ಶನ್, ಕೃಷ್ಣದೇವರಾಯನ ಪಾತ್ರದಲ್ಲಿ ಉದಯ್‌ಕುಮಾರ್, ಸಾಮಂತರಾಜ ಅಂಬರಸುವಿನ ಪಾತ್ರದಲ್ಲಿ ಚಿ.ಉದಯಶಂಕರ್ ಅಭಿನಯಿಸಿದ್ದರು. ಕಲ್ಯಾಣಕುಮಾರ್, ಬಿ.ಸರೋಜಾದೇವಿ, ಸಂಧ್ಯಾ, ರಮಾದೇವಿ, ಬಾಲಕೃಷ್ಣ, ಹೆಚ್.ಆರ್.ಶಾಸ್ತ್ರಿ, ಗಣಪತಿ ಭಟ್, ನರಸಿಂಹರಾಜು, ಎಂ.ಜಿ.ಮರಿರಾವ್ ಮುಂತಾದವರು ಅಭಿನಯಿಸಿದರು.

ಎಂ.ಎಸ್.ವಿಶ್ವನಾಥನ್ ಹಾಗೂ ಬಿ.ಕೆ. ರಾಮಮೂರ್ತಿಜೋಡಿಯಾಗಿ ಈ ಚಿತ್ರಕ್ಕೆ ಸಂಗೀತ ನಿರ್ದೇಶಿಸಿದ್ದರು. ನಾಗೇಂದ್ರರಾಯರ ಪುತ್ರ ಸಾಹಿತಿಆರ್.ಎನ್.ಜಯಗೋಪಾಲ್ ಸಾಹಿತ್ಯ ನೀಡಿದರಲ್ಲದೆ ಗೀತೆಗಳನ್ನು ರಚಿಸಿದರು.ಚಿತ್ರದಲ್ಲಿ ಎಂಟು ಹಾಡುಗಳನ್ನು ಅಳವಡಿಸಲಾಗಿದ್ದು, ಪಿ.ಬಿ.ಶ್ರೀನಿವಾಸ್ ಹಾಡಿರುವ 'ಅಪಾರ ಕೀರ್ತಿಗಳಿಸಿ ಮೆರೆವ ಭವ್ಯ ನಾಡಿದು..'ಗೀತೆ ಜನಪ್ರಿಯಗೊಂಡಿತು.ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಎಲ್.ಆರ್.ಈಶ್ವರಿ, ಪಿ.ನಾಗೇಶ್ವರರಾವ್, ಜಮುನಾರಾಣಿ, ಪಿ. ಲೀಲ,ಎಸ್. ಜಾನಕಿ, ಮನಮೋಹನ ಠಾಕೂರ್ ಗೀತೆಗಳನ್ನು ಹಾಡಿದ್ದಾರೆ. ಚಿತ್ರದಲ್ಲಿ ಅಳವಡಿಸಲಾಗಿರುವ 'ಮಧುರಾ ಮೋಹನ ವೀಣಾವಾದನ...' ಗೀತೆಯನ್ನು ಬಿ.ಸರೋಜಾದೇವಿಯವರ ನೃತ್ಯ ಸನ್ನಿವೇಶದಲ್ಲಿ ಬಳಸಿಕೊಳ್ಳಲಾಗಿದೆ.ಈ ಗೀತೆಯ ಧ್ವನಿಮುದ್ರಣದಲ್ಲಿ ಸಂಪೂರ್ಣವಾಗಿ ಸ್ತ್ರೀಯರ ವಾದ್ಯಗೋಷ್ಠಿಯನ್ನೇ ಬಳಸಿಕೊಳ್ಳಲಾಗಿತ್ತು.ನಟಕೆ.ಎಸ್.ಅಶ್ವತ್‌ಚಿತ್ರಕ್ಕೆ ಹಿನ್ನೆಲೆಯಲ್ಲಿ ಕಾಮೆಂಟರಿಕೊಟ್ಟಿರುವುದು ಈ ಚಿತ್ರದ ವಿಶೇಷತೆಗಳಲ್ಲಿ ಒಂದಾಗಿದೆ.


ದಕ್ಷಿಣ ಭಾರತದ ಅತ್ಯಂತ ದಕ್ಷ ಹಾಗೂ ವೈಭವದ ಸಾಮ್ರಾಜ್ಯ ರೂಪಿಸಿದ ವಿಜಯನಗರ ಚಕ್ರವರ್ತಿ ಕೃಷ್ಣದೇವರಾಯನ ಕಾಲದಲ್ಲಿ ನಡೆಯಲಾದ ಘಟನೆಯೊಂದನ್ನು ಆಧರಿಸಿದ ಘಟನೆಯನ್ನು ಕಲ್ಪನೆಯ ಮೂಸೆಯಲ್ಲಿ



ಸಂಮಿಶ್ರಣ ಮಾಡಿದ ಕಥೆಯನ್ನು ಹೆಣೆಯಲಾಗಿದೆ. ಈ ವಿಷಯವನ್ನು ಚಿತ್ರದ ಆರಂಭದಲ್ಲಿ ಸ್ಪಷ್ಟಪಡಿಸಲಾಗಿದೆ. ಚಿತ್ರದಲ್ಲಿ ಆರ್.ನಾಗೇಂದ್ರರಾವ್ ಹಾಗೂ ಸುದರ್ಶನ್‌ತಂದೆ-ಮಗನ ಪಾತ್ರಗಳಲ್ಲಿಯೇ ಕಾಣಿಸಿಕೊಂಡಿದ್ದಾರೆ. ಶ್ರೀಕೃಷ್ಣದೇವರಾಯನ ಸಿಂಹಾಸನವನ್ನು ನಿರ್ಮಿಸಲೆಂದೇ ಆ ಕಾಲದಲ್ಲಿ ಒಂದೂವರೆ ಲಕ್ಷ ರೂ.ವೆಚ್ಚ ಮಾಡಲಾಗಿತ್ತು.ಚಿತ್ರದಅಂತ್ಯದಲ್ಲಿ ನಾಗೇಂದ್ರರಾವ್ ಹಾಗೂ ಸುದರ್ಶನ್ ನಡುವೆ ನಡೆಯುವ ಕತ್ತಿಕಾಳಗವನ್ನು ಸಹಜ ಹಾಗೂ ಆಕರ್ಷಣೀಯವಾಗಿಚಿತ್ರಿಸಲಾಗಿತ್ತು.



7ರಿಂದ 8 ಲಕ್ಷರೂ. ವೆಚ್ಚ ಮಾಡಲಾಗಿತ್ತು. ಮದರಾಸಿನ ಮೆಜೆಸ್ಟಿಕ್ ಸ್ಟುಡಿಯೋದಲ್ಲಿ ಚಿತ್ರದ ಚಿತ್ರೀಕರಣ ನಡೆಯಿತು.ಚಿತ್ರೀಕರಣದ ಸಮಯದಲ್ಲಿ ವಿಶಾಲ ಹಾಗೂ ಭವ್ಯವಾದ ಸೆಟ್ಟಿನಲ್ಲಿ ನರ್ತಕಿಯರು, ಸಿಪಾಯಿಗಳು, ಕತ್ತಿವರಸೆಯಲ್ಲಿ ನಿಷ್ಣಾತರಾದವರು ತುಂಬಿತುಳುಕುತ್ತಿದ್ದರು. ಅದ್ದೂರಿ ಹಿಂದಿ ಚಿತ್ರವನ್ನುತಯಾರಿಸಲಾಗುತ್ತಿದೆಯೇ ಎಂಬ ಭ್ರಮೆ ಮೂಡುವಂತಿತ್ತು.ಐತಿಹಾಸಿಕವಾದ ಹಂಪೆಯಲ್ಲಿಯೇಚಿತ್ರ ಬಹುಪಾಲು ಚಿತ್ರಣವಾಗಿದೆ.ಚಿತ್ರ ಪೂರ್ಣಗೊಂಡ ನಂತರ ಚಿತ್ರವನ್ನು ತೆಲುಗು ಹಾಗೂ ತಮಿಳು ಭಾಷೆಗಳಿಗೆ ಡಬ್ ಮಾಡಿ ಬಿಡುಗಡೆ ಮಾಡಲಾಯಿತು.



ಕೃಷ್ಣದೇವರಾಯನ ಸಾಮ್ರಾಜ್ಯದಲ್ಲಿ ಗುರುವರಾಯ ಎಂಬ ಸಾಮಂತರಾಜನೊಬ್ಬನಿರುತ್ತಾನೆ.ಕೃಷ್ಣದೇವರಾಯನನ್ನು ಕೊಂದು ವಿಜಯನಗರ ಸಾಮ್ರಾಜ್ಯವನ್ನು ತನ್ನದಾಗಿಸಿಕೊಳ್ಳುವ ದುರಾಲೋಚನೆ ಮಾಡಿದ ಗುರುವರಾಯ ಕೃಷ್ಣದೇವರಾಯನನ್ನು ಹತ್ಯೆ ಮಾಡುವ ಸಂಚು ಮಾಡುತ್ತಾನೆ. ಶಿಶುವಾಗಿದ್ದಾಗಲೇ ತಂದೆಯಿಂದ ಬೇರ್ಪಟ್ಟು ಬೆಳೆಯುತ್ತಿದ್ದ ಹಾಗೂ ಪರಸ್ಪರತಂದೆ ಮಗನೆಂಬ ಅರಿವಿಲ್ಲದ ಗುರುವರಾಯನ ಮಗ ವಿಕ್ರಮ ಈ ಕೃತ್ಯಗಳ ವಿರುದ್ಧತಿರುಗಿ ಬೀಳುತ್ತಾನೆ. ಬಹಮನಿ ಸುಲ್ತಾನನ ಜೊತೆ ಸೇರಿಕೊಂಡು ಕೃಷ್ಣದೇವರಾಯನನ್ನು ಕೊಲ್ಲಲು ಹೂಡಿದ್ದ ಗುರುವರಾಯನಕುತಂತ್ರವನ್ನು ವಿಕ್ರಮ ಬಯಲಿಗೆಳೆಯುತ್ತಾನೆ. ವಿಕ್ರಮ ಕೃಷ್ಣದೇವರಾಯನ ಪ್ರೀತಿಗೆ ಪಾತ್ರನಾಗುತ್ತಾನೆ. ಇದು ಚಿತ್ರದಕಥೆ. ವಿಶ್ವನಾಥನ್-ರಾಮಮೂರ್ತಿ: ಕನ್ನಡದಲ್ಲಿ ಭಕ್ತ ಮಾರ್ಕಂಡೇಯ ಹಾಗೂ ವಿಜಯನಗರದ ವೀರಪುತ್ರ ಚಿತ್ರಗಳಿಗೆ ಸಂಗೀತ ನೀಡಿದಎಂ.ಎಸ್. ವಿಶ್ವನಾಥನ್ ಮತ್ತು ಟಿ. ಕೆ. ರಾಮಮೂರ್ತಿಜೋಡಿ 1952ರಲ್ಲಿ ಬಿಡುಗಡೆಯಾದ 'ಪನಂ' ತಮಿಳು ಚಿತ್ರದಿಂದ ಆರಂಭಿಸಿ 100ಕ್ಕೂ ಹೆಚ್ಚು ತಮಿಳು, ತೆಲುಗು ಚಿತ್ರಗಳಿಗೆ ಸಂಗೀತ ನೀಡಿದ್ದಾರೆ. ರಾಮಮೂರ್ತಿ 91ನೆಯ ವಯಸ್ಸಿನಲ್ಲಿ 2013ರಲ್ಲಿ ಹಾಗೂ ವಿಶ್ವನಾಥನ್‌ಅವರು 2015ರಲ್ಲಿ ನಿಧನರಾದರು.

## ನಿಮ್ಮ ಮಾತು

### ಪತ್ರಿಕೆ ನಿರ್ಭೀತವಾಗಿ ಕಾರ್ಯನಿರ್ವಹಿಸುತ್ತಿದೆ

ಪ್ರಸ್ತುತ ದಿನಮಾನದಲ್ಲಿ ಸಕರಾತ್ಮಕವಾದ ರೀತಿಯಲ್ಲಿ ಸರ್ಕಾರದ ಅಂಕು-ಡೊಂಕುಗಳನ್ನು ತಿಳಿಸಿ ಜನಸಾಮಾನ್ಯರನ್ನು ಬಡಿದೆಬ್ಬಿಸಿ ಜನಪರವಾದ ಕೆಲಸದ ಕಡೆಗೆ ಸರ್ಕಾರ ತನ್ನ ಕಾರ್ಯವನ್ನು ನಿರ್ವಹಿಸುವಂತೆ ಮಾಡುವುದರಲ್ಲಿ 'ಕೆಂಧೂಳಿ' ಪತ್ರಿಕೆ ನಿಜವಾದ ಪ್ರಜಾಪ್ರಭುತ್ವದ ವಿರೋಧ ಪಕ್ಷದಂತೆ ನಿರ್ಭೀತವಾಗಿ ಕಾರ್ಯನಿರ್ವಹಿಸುತ್ತಿದೆ ಹೇಳಿದರೆ ತಪ್ಪಾಗಲಾರದು.ಏಕೆಂದರೆ ಪ್ರಸ್ತುತ ಇಂತಹ ಕೊರೊನಾ ಸ್ಥಿತಿಯಲ್ಲಿಯೂ ಸರ್ಕಾರ ನಡೆದುಕೊಳ್ಳುವ ರೀತಿ-ನೀತಿಗಳನ್ನು ಜನಸಾಮಾನ್ಯರು ಗಮನಿಸುವಂತೆ ಮಾಡುವಲ್ಲಿ ನಿಮ್ಮ ಪತ್ರಿಕೆ ನೀಡುವ ವಿಷಯ ವಸ್ತು ಮತ್ತು ಅಭಿಪ್ರಾಯಗಳು ಕರ್ನಾಟಕದ ಕನ್ನಡಿಗರ ಮನದಲ್ಲಿ ಅಚ್ಚಳಿಯದೆ ಉಳಿಯುವಂತಾಗಿದೆ. ಒಂದೊಂದು ಅಂಕಣಗಳು ಅದ್ಬುತ ತುಂಬಾ ಕ್ರಿಯಾಶೀಲಾತ್ಮಕವಾಗಿರುತ್ತವೆ, ಸರ್ಕಾರದ ನೀತಿ ನಿರ್ಧಾರಗಳು ಜನ ಸಾಮಾನ್ಯರ ಹಿತಕ್ಕೆ ಅನುಗುಣವಾಗಿದೆಯೇ ಇಲ್ಲವೋ ಎಂಬುದನ್ನು ಜನರಿಗೆ ತಿಳಿಸುವ ಜೊತೆಗೆ,ಸರ್ಕಾರವು ಪ್ರಜೆಗಳ ಹಿತಿಕ್ಕೆ ಅನುಗುಣವಾಗಿ ನಡಡೆಯದೆ ಇದ್ದಾಗ ಅದರ ನೀತಿ ನಿರ್ಧಾರಗಳ ಅನುಕೂಲ-ಅನಾನುಕೂಲಗಳನ್ನು ಸವಿಸ್ತಾರವಾಗಿ ಪ್ರಯತಿಯೊಬ್ಬರಿಗೂ ತಿಳಿಯುವಂತೆ ಹೇಳುವ ತಮ್ಮ ಅಂಕಣ ನಿಜಕ್ಕೂ ಇಂದಿನಾ ಪ್ರತಿಕಾ ಮಾಧ್ಯಮ ಅಂದರೇಅದುವೆ ಜನ ಸಾಮಾನ್ಯರ ದೀನ ದಲಿತರ,ಬಡವರ ಪರವಾದ ಧ್ವನಿಯಾಗುವ ಅಂಗ ಎಂಬುದನ್ನು ನಿಮ್ಮ 'ಕೆಂಧೂಳಿ' ಪತ್ರಿಕೆ ನಿರೂಪಿಸುತ್ತದೆ.

● ಗಂಗಾಧರ್.ಎಚ್.ಟಿ ಶಿವಮೊಗ್ಗ

### ತುಂಬಾ ಚೆನ್ನಾಗಿ ಬಂದ ಬಿಟ್ ಕಾಯಿನ್ ವರದಿ

ಕಳೆದ ಸಂಚಿಕೆಯಲ್ಲಿ ಮೂಡಿ ಬಂದ ಬಿಟ್‌ಕಾಯಿನ್ ತನಿಖೆಯಲ್ಲಿ ಸಿಸಿಬಿ ಕಳ್ಳಾಟ ನಿಜಕ್ಕೂ ಪೊಲೀಸರ ಕಳ್ಳಾಟಗಳು ಹೇಗಿರುತ್ತದೆ ಎನ್ನುವುದಕ್ಕೆ ಇದೊಂದು ಸಾಕ್ಷಿ ಹಾಗೆಯೇ ಭಾರತೀಯ ಸೈನಿಕರ ಆತ್ಮಹತ್ಯೆ ಕುರಿತು ಬರೆದ ಲೇಖನ ಅತ್ಯಂತ ಗಂಭೀರವಾಗಿದೆ ಎಲ್ಲಿಯೂ ಇತ್ತದ್ದೊಂದು ಲೇಖನವನ್ನು ನೋಡಿರಲಿಲ್ಲ ಕೆಂಧೂಳಿಯಲ್ಲಿ ಮೊದಲಬಾರಿ ಲೇಖನ ಬಂದು ಅವರ ಆತಂಕ ಏನು ಏಕೆ ಹೀಗೆ ಎನ್ನುವ ಕುರಿತ ಬರೆದಿರುವುದು ನಿಜಕ್ಕೂ ಶ್ಲಾಘನೀಯ. ಹಾಗೆಯೇ ಉಮಾಪತಿ ಅವರ ಅಂಕಣ, ಸನತ್ ಕುಮಾರ್ ಬೆಳಗಲಿ ಅವರ ವೈಚಾರಿಕ ಲೇಖನಗಳು ಕೂಡ ಅತ್ಯಂತ ವಿಚಾರತೆಯುಳ್ಳತೆಯಿಂದ ಕೂಡಿವೆ ಪತ್ರಿಕೆ ಒಂದು ಗಾಂಭಿರ್ಯತೆಯನ್ನು ಕಾಪಾಡಿಕೊಂಡು ಪತ್ರಿಕಾ ಧರ್ಮವನ್ನು ಕಾಪಾಡಿಕೊಂಡು ಬರುತ್ತಿದೆ ಎನಿಸುತ್ತದೆ.

● ಕುಮಾರ್ ಯಾದವ ಹೊಸದುರ್ಗ

### ಸತ್ಯದ ಹಾದಿಯಲ್ಲಿ ನಡೆಯುತ್ತಿದೆ

'ಕೆಂಧೂಳಿ' ಪತ್ರಿಕೆ ರಾಜ್ಯ ಸರ್ಕಾರದ ಹಲವಾರು ತಪ್ಪುಗಳನ್ನು ತಿದ್ದುವ ಕೆಲಸವನ್ನು ಮಾಡುತ್ತಿದೆ. ಕಳೆದ ಆರು ಸಂಚಿಕೆಯಿಂದ ನಿಮ್ಮ ಪತ್ರಿಕೆಯನ್ನು ನೋಡುತ್ತಿದ್ದೇನೆ ಎಲ್ಲಿಯೂ ಯಾವ ವ್ಯಕ್ತಿಯ ಜೊತೆಗೆ ರಾಜೀ ಮಾಡಿಕೊಳ್ಳದೆ ಸತ್ಯದ ಹಾದಿಯಲ್ಲಿ ನಡೆಯುತ್ತಿದ್ದೀರಾ, ಎಲ್ಲಾ ಸುದ್ದಿ ವಿಶ್ಲೇಷಣೆಗಳು ಮತ್ತು ಅಂಕಣಗಳು ಕೂಡ ವಿಷಯಗಳಿಂದ ಕೂಡಿರುತ್ತವೆ ಉಮಾಪತಿ ಅವರ ಅಂಕಣ ನಿಜಕ್ಕೂ ನಿಮ್ಮ ಪತ್ರಿಕೆಯ ಮೌಲ್ಯ ಹೆಚ್ಚಿಸುತ್ತಿದೆ ಎನಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಕರ್ನಾಟಕದಲ್ಲಿ ಯಾವುದೇ ವಾರಪತ್ರಿಕೆ ಇಲ್ಲ ಇಂತ ಹೊತ್ತಿನಲ್ಲಿ ನಿಮ್ಮ ಪತ್ರಿಕೆ ಒಂದಿಷ್ಟು ಓದಿಸುತ್ತದೆ, ತಿಳಿದುಕೊಳ್ಳುವ ಅಂಶಗಳು ಇರುತ್ತವೆ ಹೀಗೆ ನಿಮ್ಮ ಪತ್ರಿಕೆ ಮುಂದುವರೆಯಲಿ.

● ಆನಂದ್ ಜೆ. ಬಂಗಾರಕ್ಕನ ಹಳ್ಳಿ,ಚಿತ್ರದುರ್ಗ ತಾ

### ಎಲ್ಲರಿಗೂ ಇಷ್ಟವಾಗುವ ಪತ್ರಿಕೆ

ಒಂದು ಪತ್ರಿಕೆ ಹೇಗಿರಬೇಕು ಎನ್ನುವುದಕ್ಕೆ 'ಕೆಂಧೂಳಿ' ಪತ್ರಿಕೆ ಸಾಕ್ಷಿಯಾಗಿದೆ. ಬಹುಶಃ ನಾವು ಲಂಕೇಶ್ ಮತ್ತು ಹಾಯ್ ಬೆಂಗಳೂರು' ಪತ್ರಿಕೆಗಳನ್ನು ಓದುವುದನ್ನು ಬಿಟ್ಟ ನಂತರ ಪತ್ರಿಕೆ ಓದುತ್ತಿರಲಿಲ್ಲ ಈಗ ಅದೇ ಹಾದಿಯಲ್ಲಿ ನಿಮ್ಮ ಪತ್ರಿಕೆ ಸಾಗಿ ಬರುತ್ತಿದೆ ಒಳ್ಳೆಯ ವಿಮರ್ಶಾತ್ಮಕ ಬರಹಗಳು,ಚಿಂತನೆಗಳು, ಜ್ಞಾನದ ಅಂಕಣಗಳು ಬರುತ್ತಿವೆ ಹೀಗಾಗಿ ಆ ಎರಡು ಪತ್ರಿಕೆಯ ಪ್ರತಿರೂಪವಾಗಿ ನಿಮ್ಮ ಪತ್ರಿಕೆ ಈಗ ಓಡುತ್ತಿದೆ ಎನಿಸಿಸುತ್ತದೆ. ನನ್ನ ಹಲವಾರು ಸ್ನೇಹಿತರು ವಾರಪತ್ರಿಕೆ ಓದುವ ಹುಚ್ಚು ಹೀಗಾಗಿ ಅವರೆಲ್ಲರೂ ನಿಮ್ಮ ಈ ಪತ್ರಿಕೆಯನ್ನು ಈಗ ಓದುತ್ತಿದ್ದಾರೆ ನಿಮ್ಮ ಪತ್ರಿಕೆಯಲ್ಲಿ ಬರುತ್ತಿರುವ ಒನ್ನೊಂದು ವಿಷಯಗಳು ಗಂಭೀರತೆ ಇರುತ್ತವೆ ಹಾಗೆಯೇ ಸತ್ಯವೂ ಇವೆ ಹೀಗಾಗಿಯೇ ಎಲ್ಲರಿಗೂ ಇಷ್ಟವಾಗುವ ಪತ್ರಿಕೆ ಎಂದು ನಾನು ಭಾವಿಸಿದ್ದೇನೆ.

● ಟಿ.ಎನ್.ವಿವೇಕಾನಂದ್, ರಾಮಮೂರ್ತಿನಗರ ಬೆಂಗಳೂರು.

ಬೇಕಾಗಿದ್ದಾರೆ : 'ಕೆಂಧೂಳಿ' ವಾರ ಪತ್ರಿಕೆಗೆ ಜಿಲ್ಲಾ ವರದಿಗಾರರು/ಏಜೆಂಟರು ಬೇಕಾಗಿದ್ದಾರೆ. ಎಲ್ಲಾ ಜಿಲ್ಲೆಗಳಿಂದಲೂ ವರದಿಗಾರರನ್ನು ನೇಮಕ ಮಾಡಲಾಗುತ್ತಿದೆ ಆಸಕ್ತರು ಈ ದೂರವಾಣಿಗೆ ಸಂಪರ್ಕಿಸಬಹುದು. 9900633109

KENDHOOLI Kannada Weekly
ಸಂಪುಟ - 02 | ಸಂಚಿಕೆ - 60 | ಪುಟ - 16 | ರೂ. 16/- | ಜನವರಿ 06 ರಿಂದ ಜನವರಿ 12, 2022
kendhooli.com/e-paper/
RNI no KARKAN/2018/76310

# ಮತ್ತೆ ಬೆಳ್ಳಿತೆರೆಯತ್ತ ನಿರೂಪಕಿ ಅನುಶ್ರೀ

ಉಪ್ಪು ಹುಳಿ ಖಾರ ಸಿನಿಮಾ ನಂತರ ಬೇರೆ ಯಾವುದೇ ಸಿನಿಮಾಕ್ಕೆ ಗ್ರೀನ್ ಸಿಗ್ನಲ್ ಕೊಡದೇ ಕಿರುತೆರೆ ನಿರೂಪಣೆಯಲ್ಲಿಯೇ ಬ್ಯುಸಿಯಾಗಿರುವ ಅನುಶ್ರೀ ಹೊಸ ವರ್ಷದ ಆರಂಭದಲ್ಲಿ ಸಿಹಿ ಸುದ್ದಿಯನ್ನು ತಮ್ಮ ಅಭಿಮಾನಿ ಬಳಗಕ್ಕೆ ನೀಡಿದ್ದಾರೆ.

ಹೌದು, ಹೊಸ ವರ್ಷದ ಆರಂಭದಲ್ಲಿಯೇ ಮತ್ತೆ ಸಿನಿಮಾದಲ್ಲಿ ಅಭಿನಯಿಸುತ್ತಿರುವ ಮಾಹಿತಿಯನ್ನು ಅನುಶ್ರೀ ಅವರು ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಪ್ರಭಾಕರನ್ ಎಂಬ ಹೊಸ ಪ್ರತಿಭೆ ನಿರ್ದೇಶಿಸುತ್ತಿರುವ ಚೊಚ್ಚಲ ಸಿನಿಮಾದಲ್ಲಿ ಅನುಶ್ರೀ ನಟಿಸಲು ಗ್ರೀನ್ ಸಿಗ್ನಲ್ ನೀಡಿದ್ದಾರೆ. ಹಾರಾರ್, ಸಬ್ಜೆಕ್ಟ್ ಒಳಗೊಂಡ ಕಥಾಹಂದರ ಸಿನಿಮಾದಲ್ಲಿದ್ದು ಚಿತ್ರದ ಟೈಟಲ್ ಬಗ್ಗೆ ಸದ್ಯದಲ್ಲೇ ಮಾಹಿತಿ ಹಂಚಿಕೊಳ್ಳಲಾಗುವುದಾಗಿ ಅನುಶ್ರೀ ತಿಳಿದ್ದಾರೆ. ಚಿತ್ರದ ಮುಹೂರ್ತ ಕಾರ್ಯವೂ ಚಿಕ್ಕದಾಗಿ ನೇರವೇರಿದ್ದು, ಎಸ್‌ಎಂಪಿ ಪ್ರೊಡಕ್ಷನ್ ಹಾಗೂ ಲೋಹಿತ್ ಹೆಚ್ ಪ್ರೊಡಕ್ಷನ್ ಜಂಟಿ ನಿರ್ಮಾಣದಲ್ಲಿ ಸಿನಿಮಾ ಮೂಡಿ ಬರಲಿದೆ

ಉಪ್ಪು ಹುಳಿ ಖಾರ ಸಿನಿಮಾ ನಂತರ ನಾಲ್ಕು ವರ್ಷಗಳ ಕಾಲ ಸಿನಿಮಾಗಳಿಂದ ದೂರ ಉಳಿದಿದ್ದ ಅನುಶ್ರೀ ಯೂಟ್ಯೂಬ್ ಚಾನೆಲ್ ಆರಂಭಿಸಿ ಸ್ಟಾರ್ ನಟ ನಟಿಯರ ಸಂದರ್ಶನ ಮಾಡುತ್ತಿದ್ದಾರೆ. ಇದೀಗ ನಿರೂಪಣೆ ಜೊತೆಗೆ ವಿಭಿನ್ನ ಕಥಾಶೈಲಿ ಒಳಗೊಂಡ ಸಿನಿಮಾದಲ್ಲೂ ನಟಿಸಲು ಗ್ರೀನ್ ಸಿಗ್ನಲ್ ನೀಡಿದ್ದು ಚಿತ್ರದ ಬಗ್ಗೆ ಹೆಚ್ಚಿನ ಮಾಹಿತಿ ಸದ್ಯದಲ್ಲೇ ಹೊರ ಬೀಳಲಿದೆ.



# ಪ್ರಜ್ವಲ್ ದೇವರಾಜ್ ಮತ್ತೊಂದು ಹೊಸ ಚಿತ್ರ



ನಟ ಪ್ರಜ್ವಲ್ ದೇವರಾಜ್ ಕೈತುಂಬಾ ಹಲವು ಸಿನಿಮಾಗಳಿವೆ, ಖಾದರ್ ಕುಮಾರ್ ಅವರ ವೀರಂ ಮತ್ತು ಎಚ್.ಎಸ್ ಲೋಹಿತ್ ಅವರ ಮಾಫಿಯಾ ಸಿನಿಮಾದಲ್ಲಿ ಸದ್ಯ ಪ್ರಜ್ವಲ್ ಬ್ಯುಸಿಯಾಗಿದ್ದಾರೆ.




ಇದೇ ವೇಳೆ ತಮ್ಮ ಸ್ನೇಹಿತ ಪನ್ನಾಗಭರಣ ಜೊತೆಯಲ್ಲಿ ಮತ್ತೆರಡು ಸಿನಿಮಾ ಮಾಡಲು ತಯಾರಾಗಿದ್ದಾರೆ. ಎರಡು ಸಿನಿಮಾಗಳ ಬಗ್ಗೆ ಒಂದು ವರ್ಷದ ಹಿಂದೆಯೇ ಚರ್ಚಿಸಲಾಗಿತ್ತು, ಆದರೆ ಕೋವಿಡ್ ಇದ್ದ ಕಾರಣ ಪ್ರಾಜೆಕ್ಟ್ ವಿಳಂಭವಾಗಿತ್ತು. ಈಗ ಮತ್ತೆ ಸಿನಿಮಾ ಬಗ್ಗೆ ಚರ್ಚೆ ನಡೆಸಿದ್ದು ಶೀಘ್ರದಲ್ಲೆ ಚಿತ್ರದ ಬಗ್ಗೆ ಘೋಷಣೆ ಮಾಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಆದರೆ ಯಾವಾಗ ಆರಂಭವಾಗಲಿದೆ ಎಂಬ ಬಗ್ಗೆ ಇನ್ನೂ ಸರಿಯಾದ ಮಾಹಿತಿ ದೊರೆತಿಲ್ಲ. ರಾಮ್ ನಾರಾಯಣ್ ನಿರ್ದೇಶಿಸಿ ಪ್ರಜ್ವಲ್ ದೇವರಾಜ್ ನಟಿಸಿರುವ ಅಬ್ಬರ ರಿಲೀಸ್ ಗಾಗಿ ಕಾಯುತ್ತಿದೆ. ಸದ್ಯ ಮಾಫಿಯಾ ಸಿನಿಮಾ ಶೂಟಿಂಗ್ ನಲ್ಲಿ ಬ್ಯುಸಿಯಾಗಿದ್ದಾರೆ. ಜಕ್ಕ ಹರಿಪ್ರಸಾದ್ ನಿರ್ದೇಶನದ ಮತ್ತೊಂದು ಥ್ರಿಲ್ಲರ್ ಸಿನಿಮಾಗೂ ಪ್ರಜ್ವಲ್ ಸಹಿ ಮಾಡಿದ್ದಾರೆ. ಫ್ರೆಂಚ್ ಬಿರಿಯಾನಿ ನಿರ್ದೇಶಕ ಪನ್ನಗಾಭರಣ ಪಾರುಲ್ ಯಾದವ್ ಅವರ ಮುಂದಿನ ಸಿನಿಮಾ ಡೈರೆಕ್ಷನ್ ಮಾಡಲು ಸಿದ್ಧತೆ ನಡೆಸಿದ್ದಾರೆ. ಆದರೆ ಇನ್ನೂ ಅಧಿಕೃತ ಮಾಹಿತಿ ಲಭ್ಯವಾಗಿಲ್ಲ.

# ರಮೇಶ್ ತಂದೆಯ ಪಾತ್ರದಲ್ಲಿ ನಾಸರ್


2020 ರಲ್ಲಿ ಬಿಡುಗಡೆಯಾಗಿದ್ದ ರಮೇಶ್ ಅರವಿಂದ್ ಅವರ ಅಭಿನಯದ 101ನೇ ಚಿತ್ರ 'ಶಿವಾಜಿ ಸುರತ್ಕಲ್' ಪ್ರೇಕ್ಷಕರ ಮನಗೆದ್ದಿತ್ತು. ಈ ಸಿನಿಮಾದ ಎರಡನೇ ಭಾಗದ ಚಿತ್ರೀಕರಣ ಆರಂಭವಾಗಿದ್ದು, ದಕ್ಷಿಣ ಭಾರತದ ಖ್ಯಾತ ನಟ ನಾಸರ್ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಆಕಾಶ್ ಶ್ರೀವತ್ಸ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸುತ್ತಿರುವ ಈ ಚಿತ್ರದ ಚಿತ್ರೀಕರಣ ಕಳೆದ ಡಿಸೆಂಬರ್ 13ರಿಂದ ಬೆಂಗಳೂರಿನ ಸುತ್ತಮುತ್ತ ನಡೆಯುತ್ತಿದೆ. ಶಿವಾಜಿ ಸುರತ್ಕಲ್ ತಂದೆಯ ಪಾತ್ರದಲ್ಲಿ ನಾಸರ್ ಕಾಣಿಸಿಕೊಳ್ಳಲಿದ್ದಾರೆ. ಇವರ ಪಾತ್ರದ ಹೆಸರು ವಿಜೇಂದ್ರ ಸುರತ್ಕಲ್. ತಂದೆ ಮಗನ ಬಾಂಧವ್ಯವದ ಬಗ್ಗೆ ಹೇಳುವ ಪಾತ್ರ ಇದಾಗಿದೆ. ಬಹಳ ವರ್ಷಗಳಿಂದ ರಮೇಶ್ ಅರವಿಂದ್ ಮತ್ತು ನಾಸರ್



ಒಬ್ಬರಿಗೊಬ್ಬರು ಪರಿಚಯವಿದ್ದರೂ, ಇದೇ ಮೊದಲ ಬಾರಿಗೆ ತೆರೆಯ ಮೇಲೆ ಜೊತೆಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ರಾಧಿಕಾ ನಾರಾಯಣ್, ರಘು ರಾಮನಕೊಪ್ಪ ಮತ್ತು ವಿದ್ಯಾಮೂರ್ತಿ ಎರಡನೇ ಭಾಗದಲ್ಲೂ ಮುಂದುವರಿಯಲಿದ್ದಾರೆ. ಚಿತ್ರದಲ್ಲಿ ಡಿಸಿಪಿ ಹುದ್ದೆಯಲ್ಲಿರುವ ಯುವ ಐಪಿಎಸ್ ಅಧಿಕಾರಿ 'ದೀಪ ಕಾಮತ್' ಪಾತ್ರದಲ್ಲಿ ಮೇಘನಾ ಗಾಂವ್ಕರ್ ಅವರು ಕಾಣಿಸಿಕೊಳ್ಳಲಿದ್ದಾರೆ. ಮಗಳು ಜಾನಕಿ ಧಾರಾವಾಹಿಯಲ್ಲಿ ನಟಿಸಿದ್ದ ರಾಕೇಶ್ ಮಯ್ಯ, ಬಿಗ್‌ಬಾಸ್ ಖ್ಯಾತಿಯ ವಿನಾಯಕ ಜೋಷಿ ಅವರೂ ಇದೀಗ ಚಿತ್ರತಂಡ ಸೇರಿಕೊಂಡಿದ್ದು ಪೊಲೀಸ್ ಅಧಿಕಾರಿ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಕನ್ನಡ್ ಗೊತ್ತಿಲ್ಲ' ಹಾಗೂ ಇನ್ನಷ್ಟೇ ಬಿಡುಗಡೆಯಾಗಬೇಕಿರುವ 'ಲವ್ ಮಾಕ್ಟೇಲ್-2' ಸಿನಿಮಾದ ಸಂಗೀತ ನಿರ್ದೇಶಕ ನಕುಲ್ ಅಭಯಂಕರ್ ಅವರು ಶಿವಾಜಿ ಸುರತ್ಕಲ್?2 ಭಾಗಕ್ಕೂ ಸಂಗೀತ ನೀಡಿದ್ದಾರೆ. ರೇಖಾ ಕೆ.ಎನ್ ಮತ್ತು ಅನುಪ್ ಗೌಡ ಇವರ ಅಂಜನಾದ್ರಿ ಸಿನಿ ಕ್ರಿಯೇಷನ್ಸ್ ಬ್ಯಾನರ್‌ನಡಿ ಈ ಚಿತ್ರ ನಿರ್ಮಾಣವಾಗುತ್ತಿದೆ.

# ಹೊಸಬರ ಕಾಕ್ಟೈಲ್ ಪಾನೀಯಾ ಕತೆ

ಹೊಸಬರು ನಟಿಸಿರುವ ಕಾಕ್ಟೈಲ್ ಸಿನಿಮಾ ಹೊಸ ಭರವಸೆಯೊಂದಿಗೆ, ಕನಸಿನೊಂದಿಗೆ ಸ್ಯಾಂಡಲ್‌ವುಡ್ ಅಂಗಳದಲ್ಲಿ ಸೆಟ್ಟೇರಿರುವ ಸಿನಿಮಾ. ಜುಲೈನಲ್ಲಿ ಸೆಟ್ಟೇರಿದ್ದ ಕಾಕ್ಟೈಲ್ ಚಿತ್ರ ಬೆಂಗಳೂರು ಸುತ್ತಮುತ್ತ ಎರಡು ಹಂತದ ಚಿತ್ರೀಕರಣ ಮುಗಿಸಿ ಚಿತ್ರೀಕರಣಕ್ಕೆ ಕುಂಬಳಕಾಯಿ ಒಡೆದಿದೆ. ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಸಿನಿಮಾದಲ್ಲಿದ್ದು ಶ್ರೀರಾಮ್ ಕಥೆ ಚಿತ್ರಕಥೆ, ಸಂಭಾಷಣೆ ಬರೆದು ಸಿನಿಮಾ ನಿರ್ದೇಶನ ಮಾಡಿದ್ದಾರೆ. ನವ ಪ್ರತಿಭೆಗಳಾದ ವೀರೇನ್ ಕೇಶವ್, ಚರೀಷ್ಮಾ ಚಿತ್ರದ ಮುಖ್ಯ ಭೂಮಿಕೆಯಲ್ಲಿ ನಟಿಸಿದ್ದಾರೆ. ನಟನೆಯಲ್ಲಿ ಅಪಾರ ಆಸಕ್ತಿ ಹೊಂದಿರುವ ನಾಯಕನಟ



ವೀರೇನ್ ಕೇಶವ್ ಅನುಪಮ್ ಖೇರ್ ನಟನಾ ಶಾಲೆಯಲ್ಲಿ ನಟನಾ ತರಬೇತಿ ಪಡೆದುಕೊಂಡಿದ್ದು, ಚೊಚ್ಚಲ ಸಿನಿಮಾದ ಮೇಲೆ ಅಪಾರ ನಿರೀಕ್ಷೆಯನ್ನಿಟ್ಟುಕೊಂಡಿದ್ದಾರೆ. ಸಸ್ಪೆನ್ಸ್ ಥ್ರಿಲ್ಲರ್ ಹಾಗೂ ಮರ್ಡರ್ ಮಿಸ್ಟರಿ ಕಥೆ ಚಿತ್ರದಲ್ಲಿದ್ದು, ಒಂದೇ ಹೆಸರಿನ ಮತ್ತು ವಯಸ್ಸಿನ ಹಲವು ಹುಡುಗಿಯರ ಸರಣಿ ಕೊಲೆ ಸುತ್ತ ಕಥೆ ಸಾಗಲಿದೆ. ಕ್ಲೈಮ್ಯಾಕ್ಸ್ ಇಂಟ್ರಸ್ಟಿಂಗ್ ಆಗಿರಲಿದ್ದು, ಕಾಕ್ಟೈಲ್ ಪಾನೀಯದಂತೆ ಹಲವಾರು ಅಂಶಗಳನ್ನು ಸೇರಿಸಿ ಪ್ರೇಕ್ಷಕರಿಗೆ ಹೊಸ ಅನುಭವ ನೀಡುವ ಸಿನಿಮಾ ಮಾಡಲಾಗಿದೆ ಎನ್ನುತ್ತದೆ ಚಿತ್ರತಂಡ. ಸದ್ಯದಲ್ಲೇ ಟ್ರೇಲರ್ ಮೂಲಕ ಸಿನಿಮಾದ ಝಲಕ್ ತೋರಿಸಲು ಚಿತ್ರತಂಡ ಸಜ್ಜಾಗಿದೆ.

KENDHOOLI, Kannada Weekly Printed by, Published by, Owned by & Edited by: T MANJUNATHA, DS MAX SAVVY APARTMENT, PLOT NO 202,2ND FLOOR, JP NAGARA 9TH PHASE, AMRUTHNAGARA MAIN ROAD, ANJANAPURA BANGALORE 560108
Printed at : Brundavan printers, 88/1 1st cross, sameerpura road, Kg nagara Bengaluru-560019
Mob: +91 99161 91222. email: kendhooli18@gmail.com
The Editor is Responsible for selection of news under the PRB Act